ಅಭಿಜ್ಞಾನ | ಭಾರತತೀರ್ಥ – 4

ಗೀತಗೋವಿಂದ

ಕೃಷ್ಣಕರ್ಣಾಮೃತ ❀ ರಾಧಾಮಾಧವರಾಸ

ಸಾ. ಕೃ ರಾಮಚಂದ್ರರಾವ್

ಭಾರತತೀರ್ಥ - 4

ಗೀತಗೋವಿಂದ

ಕೃಷ್ಣಕರ್ಣಾಮೃತ ❖ ರಾಧಾಮಾಧವರಾಸ

ಸಾ. ಕೃ. ರಾಮಚಂದ್ರರಾವ್

2008

ಇಪ್ಪತ್ತೇಳನೆಯ ಪ್ರಕಟನೆ

ಅಭಿಜ್ಞಾನ

ಬೆಂಗಳೂರು - 560 019

✆ 080 - 2242 14 14, 94484 94949

abhijnanam@yahoo.com

abhijnanabooks@yahoo.com

GĪTAGOVINDA. KṚŚṆAKARṆĀMṚTA, RĀDHĀMĀDHAVA-RĀSA (Essays on Jayadeva's Gītagovinda, Līlāśuka's Kṛśṇakarṇāmṛta, and the Concept of Rādhamādhavarāsa) by Prof. S. K. Ramachandra Rao, Published by Abhijñāna, Bangalore - 560 019, INDIA.
Email: abhijnanam@yahoo.com, abhijnanabooks@yahoo.com
First Edition: 1966 Pages: 76 Price: Rs. 45
First reprint (from Abhijñāna): 2008

© *All rights reserved*

ಪುಟಗಳು: 76
ಬೆಲೆ: ರೂ. 45
ಪ್ರಥಮ ಆವೃತ್ತಿ: 1966
ಪ್ರಥಮ ಪುನರ್‌ಮುದ್ರಣ: 2008 (ಅಭಿಜ್ಞಾನದಿಂದ)
ಮುಖಪುಟವಿನ್ಯಾಸ: ಸುಧಾಕರ ದರ್ಬೆ

ಸಂಪರ್ಕ ವಿಳಾಸ:

ಎಸ್. ಸೂರ್ಯಪ್ರಕಾಶ ಪಂಡಿತ್
ನಂ. 2, ದತ್ತಾತ್ರೇಯ ದೇವಸ್ಥಾನದ ರಸ್ತೆ
ಫೈವ್‌ಲೈನ್, ಮಲ್ಲೇಶ್ವರಂ
ಬೆಂಗಳೂರು - 560 003
✆ 94484 94949

ISBN: 978-81-88278-19-0

ಅಕ್ಷರಜೋಡಣೆ: ಗಾಯತ್ರಿ ಪ್ರಿಂಟ್ಸ್, ಬೆಂಗಳೂರು - 560 050
✆ 26699367

ಲಕ್ಷ್ಮೀ ಮುದ್ರಣಾಲಯ
LAKSHMI MUDRANALAYA
ISO 9001-2000
ಚಾಮರಾಜಪೇಟೆ, ಬೆಂಗಳೂರು-೧೮
ದೂರವಾಣಿ : ೨೬೬೧ ೩೧೨೩, ೨೬೬೧ ೮೭೫೨

ಅಭಿಜ್ಞಾನದ ಮಾತು

ಗತಿ ಸರ್ವರ್ಗಂ ಕೃಷ್ಣಂ
ಯತಿಗಂ ಕಾಮಿಗಮಸಂಸ್ಕೃತಂಗಂ ವ್ರತಿಗಂ ।
ಪತಿತಂಗಂ ಕೃತಮತಿಗಂ
ಹಿತಪಥಮಂ ತತ್ತದುಚಿತನಯದಿಂ ತೋರ್ಪನ್ ॥

—ಡಿವಿಜಿ

'ಬೃಂದಾವನಕೆ ಹಾಲನು ಮಾರಲು
ಹೋಗುವ ಬಾರೇ ಬೇಗ, ಸಖಿ!'
....
....
....
'ಹಾಲ ನಿವೇದಿಸಿ ಆತ್ಮವನರ್ಪಿಸಿ
ಮುಕ್ತಿಯ ಹೊಂದುವ, ಸೌಮ್ಯಮುಖಿ!
ಹಾಲನು ಮಾರಿ ಹರಿಯನು ಕೊಳ್ಳುವ
ನಾವೇ ಧನ್ಯರು, ಕಮಲಮುಖಿ!'

—ಕುವೆಂಪು

"ಶ್ರೀಕೃಷ್ಣನನ್ನು ಈ ದೇಶದಲ್ಲಿ ಸಾವಿರಾರು ವರ್ಷಗಳಿಂದ ಲಕ್ಷೋಪಲಕ್ಷ ಮಂದಿ ಅಂಗೀಕರಿಸಿದ್ದಾರೆ.... ಶ್ರೀಕೃಷ್ಣಚರಿತ್ರೆಯನ್ನು ನಾಲ್ಕು ಖಂಡಗಳಾಗಿ ನೋಡಬಹುದು: 1) ಬಾಲ್ಯ, 2) ಗೋಪೀವಿಲಾಸ, 3) ರಾಜಕೀಯ, 4) ಪರತತ್ತ್ವಬೋಧೆ...... ಕೃಷ್ಣರಾಸಿಕ್ಯದ ಪ್ರಸಂಗವು ಮಹಾಭಾರತಕವಿಯ ಪ್ರತಿಭೆಗೆ ಗೋಚರವಾಗಲಿಲ್ಲವೋ, ಅಥವಾ ಆ ವೈರ-ವೈಷಮ್ಯಗಳ ಘೋರದರ್ಶನದ ನಡುವೆ ರಾಸಿಕ್ಯಚಿತ್ರಣಕ್ಕೆ ಸ್ಥಳವಿಲ್ಲವೆಂದು ಆತ ಬಗೆದನೋ, ಹೇಗೋ ಆ ಗ್ರಂಥದಲ್ಲಿ ಪ್ರಣಯಲೀಲೆ ತೋರಿಬರಲಿಲ್ಲ. ಆದರೆ ಪ್ರಣಯವು ಮಾನುಷಧರ್ಮಪ್ರಶ್ನೆಗಳಲ್ಲಿ ಅತ್ಯಂತ ಮುಖ್ಯವಾದದ್ದು. ಇದನ್ನೂ ಕೈಬಿಟ್ಟರೆ ಕೃಷ್ಣವೃತ್ತಾಂತವು ಪೂರ್ಣಾವತಾರವಾಗಲಾರದು—ಎಂಬ ಭಾವನೆಯಿಂದ ವಿಷ್ಣುಪುರಾಣಕಾರನೂ ಭಾಗವತಕಾರನೂ ಪ್ರಣಯಪ್ರಕರಣಗಳನ್ನು

ವಿಸ್ತರಿಸಿರಬೇಕು. ಹೀಗೆ ಒಂದು ಸಾರಿ ಒಬ್ಬ ಪುರಾಣಕವಿ ರಾಸಿಕ್ಯಕ್ಕೆಡೆ ಮಾಡಿಕೊಟ್ಟ ಬಳಿಕ ಇತರ ಕವಿಗಳು ಅದನ್ನು ಬೆಳಸಿ ರಂಗುರಂಗಾಗಿ ಚಿತ್ರಿಸಿದರು. ಹೀಗೆ ಆದವು 'ಗೀತಗೋವಿಂದ', 'ಕೃಷ್ಣಕರ್ಣಾಮೃತ' ಮೊದಲಾದ ಕೃಷ್ಣಕಾವ್ಯಗಳು"—ಜಯದೇವನ ಗೀತಗೋವಿಂದಕ್ಕೂ ಲೀಲಾಶುಕನ 'ಶ್ರೀಕೃಷ್ಣಕರ್ಣಾಮೃತ'ಕ್ಕೂ ಈ ಹಿನ್ನೆಲೆಯನ್ನು ಒದಗಿಸಿರುವವರು ಡಿವಿಜಿಯವರು *(ಶ್ರೀಕೃಷ್ಣಪರೀಕ್ಷಣಂ)*. ಈ ಎರಡೂ ಕೃತಿಗಳನ್ನೂ ಹಾಗೂ ಈ ಕೃತಿನಿರ್ಮಾಣಕ್ಕೆ ಭೂಮಿಕೆಯನ್ನು ಒದಗಿಸಿದ 'ರಾಧಾಮಾಧವ ರಾಸ'ವನ್ನೂ ಪರಿಚಯಿಸಿಕೊಡುತ್ತದೆ ಪ್ರಕೃತಕೃತಿ **ಗೀತಗೋವಿಂದ**.

'ಗೀತಗೋವಿಂದ'ವನ್ನು ಕುರಿತು ಡಾ. ಕೆ. ಕೃಷ್ಣಮೂರ್ತಿ ಅವರ ಮಾತುಗಳು ಇಲ್ಲಿ ಉಲ್ಲೇಖಾರ್ಹ—"ಗೀತಗೋವಿಂದದ ಶೈಲಿ ಅನುಪಮ; ಅದರ ಮೋಹಕತ್ವ ಅದ್ಭುತ. ಅದರ ಅಗಾಧ ಶೃಂಗಾರಪ್ರವಾಹದ ಅಂತರಾಳದಲ್ಲಿ ಅಮೇಯವಾದ ಮಧುರಭಾವವೂ ಅಡಗಿದೆ. ಸಮಗ್ರ ಸಂಸ್ಕೃತಸಾಹಿತ್ಯದಲ್ಲೇ ಈ ಮಟ್ಟದ ಮಧುರರಚನೆ ಮತ್ತೊಂದಿಲ್ಲ. ಸಂಸ್ಕೃತವಾಣಿಯ ಸೌಂದರ್ಯ ಮಾಧುರ್ಯಗಳ ಪರಾಕಾಷ್ಠೆಯನ್ನು ಗೀತಗೋವಿಂದದಲ್ಲಿ ಅವಲೋಕಿಸಬಹುದು..... 'ಗೀತಗೋವಿಂದದ ಸವಿಯನ್ನು ಸವಿದವರಿಗೆ ಜೇನು ಬೇಡವಾಗುವುದು; ದ್ರಾಕ್ಷೆ ಸಪ್ಪೆಯಾಗುವುದು; ಸಕ್ಕರೆ ಕರ್ಕಶವೆನಿಸುವುದು; ಅಮೃತವೂ ಮೃತಪ್ರಾಯವಾಗುವುದು; ಹಾಲು ನೀರಿಗಿಂತ ಕಡೆಯಾಗುವುದು' ಎಂದು ಜಯದೇವನು ಗ್ರಂಥದ ಕಡೆಯಲ್ಲಿ ಹೇಳಿಕೊಂಡರೆ ರಸಿಕರು ಅಲ್ಲವೆನ್ನುವಂತಿಲ್ಲ."—*(ಸಂಸ್ಕೃತಕಾವ್ಯ)*

ಹೀಗೆಯೇ, 'ಶ್ರೀಕೃಷ್ಣಕರ್ಣಾಮೃತ'ದ ಬಗ್ಗೆ ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರ ಮಾತುಗಳನ್ನೂ ಇಲ್ಲಿ ಜ್ಞಾಪಿಸಿಕೊಳ್ಳಬಹುದು— "ಈ ಕಾವ್ಯದ ಶ್ಲೋಕಗಳೆಲ್ಲ ಪ್ರಾಯಶಃ ಧ್ಯಾನಶ್ಲೋಕಗಳು. ಎಂದರೆ ಯಾವ ಶ್ಲೋಕವೂ ಸ್ವಸಂಪೂರ್ಣ..... ಕವಿ ಕಥನಚತುರ, ಕವನಚತುರ..... ಇದರಲ್ಲಿ ಪ್ರಾಸಾನುಪ್ರಾಸಗಳ ಸೊಗಸಿದೆ; ಸ್ವರಗಳ ವಿನ್ಯಾಸವಿದೆ; ರಚನಚಮತ್ಕಾರವಿದೆ; ಬಹುವಿಧದ ಛಂದಸ್ಸಿದೆ. ಅರ್ಥದಲ್ಲಿ ಸರಳತೆ ಇದೆ, ಚಾತುರ್ಯ ಇದೆ, ಅಲಂಕಾರ ಇದೆ, ವ್ಯಂಗ್ಯ ಇದೆ. ಶೃಂಗಾರ, ವೀರ, ಕರುಣ, ಹಾಸ್ಯ, ಅದ್ಭುತ ರಸಗಳಿವೆ.....ಒಂದು ಮಾತು: ಈ ಶ್ಲೋಕಗಳೆಲ್ಲ

ಶ್ರೀಕೃಷ್ಣನನ್ನು ದೇವರೆಂದು ಭಾವಿಸುವವರ ಸಲುವಾಗಿ ರಚಿತವಾಗಿವೆ ಎನ್ನುವುದು. ಎರಡನೆಯ ಮಾತು, ಈ ಕವಿತೆಯ ಕೃಷ್ಣ ಐತಿಹಾಸಿಕ ವ್ಯಕ್ತಿ ಅಲ್ಲ, ಆಧ್ಯಾತ್ಮಿಕ ತತ್ತ್ವವನ್ನು ಸುಲಭವಾಗಿ ತಿಳಿಸುವ ಸಲುವಾಗಿ ಧರ್ಮ ನಿರ್ಮಿಸಿಕೊಂಡಿರುವ ಒಂದು ಸಂಕೇತ, ಕಲ್ಪನೆಯ ಒಂದು ಮೂರ್ತಿ, ಎನ್ನುವುದು. ಮೂರನೆಯ ಮಾತು, ಶ್ಲೋಕಗಳು ಗುಂಪಿನ ಎದುರಲ್ಲಿ ಓದುವುದಕ್ಕಾಗಿ ಬರೆದುವಲ್ಲ ಎನ್ನುವುದು: ಓದುವವರು ಒಬ್ಬರೇ ಕುಳಿತು ಓದಬೇಕು;....." *(ಲೀಲಾಶುಕಮುನಿ ವಿರಚಿತ ಶ್ರೀಕೃಷ್ಣಕರ್ಣಾಮೃತಂ)*

'ಗೀತಗೋವಿಂದ'— ಈ ಪ್ರಕೃತ ಕೃತಿಯ ಲೇಖಕರು ಆಚಾರ್ಯ ಪ್ರೊ. ಸಾ. ಕೃ. ರಾಮಚಂದ್ರರಾಯರು; ಭಾರತೀಯತೆಯ ಮೂರ್ತರೂಪ ದಂತಿದ್ದವರು; ಇವರು ಭೌತಿಕವಾಗಿ ಇಂದು ನಮ್ಮೊಂದಿಗಿಲ್ಲದಿದ್ದರೂ ಇವರ ಚೇತನ ಸದಾ 'ಅಭಿಜ್ಞಾನ'ಕ್ಕೆ ಶಕ್ತಿಯನ್ನು ಒದಗಿಸುತ್ತಲೇ ಬಂದಿದೆ; ಇಷ್ಟಕ್ಕೂ ಋಷಿತತ್ತ್ವಕ್ಕೆ ಅಂತ್ಯವೆಂಬುದು ಇರದೆನ್ನಿ. ರಾಯರು ಭಾರತೀಯ ವಿದ್ಯೆಯ ಹತ್ತುಹಲವು ಶಾಖೆಗಳಲ್ಲಿ ಪರಿಣತರು; ಇನ್ನೂರಕ್ಕೂ ಹೆಚ್ಚು ಮೌಲಿಕ ಗ್ರಂಥಗಳನ್ನು ಕನ್ನಡ-ಇಂಗ್ಲಿಷ್‌ಭಾಷೆಗಳಲ್ಲಿ ರಚಿಸಿದವರು. ರಾಯರ ಸಾರಸ್ವತಸಿದ್ಧಿ-ಸಾಧನೆಯ ತಪಃಶಕ್ತಿಯು ಸದಾ ನಮ್ಮ ಚಟುವಟಿಕೆಗಳಿಗೆ ತೇಜಸ್ಸನ್ನೂ ಬಲವನ್ನೂ, ಒಳ್ಳೆಯ ಬದುಕಿನ ಬಗೆಗೆ ವಿಶ್ವಾಸವನ್ನೂ ನಂಬಿಕೆಯನ್ನೂ ಒದಗಿಸುವ ದಿಟವಾದ ಭಾರತತೀರ್ಥವೇ ಹೌದು.

'ಗೀತಗೋವಿಂದ' ಮೊದಲು ಪ್ರಕಟವಾದದ್ದು 1966ರಲ್ಲಿ, ಸುರಮಾ ಪ್ರಕಾಶನದಿಂದ. ಆ ಆವೃತ್ತಿಯನ್ನೇ ಇಲ್ಲಿ ಪುನರ್ಮುದ್ರಿಸಿದ್ದೇವೆ. ರಾಯರೇ ಈಗ ಇದ್ದಿದ್ದರೆ ಖಂಡಿತವಾಗಿ ಇದರಲ್ಲಿ ಸಾಕಷ್ಟು ಬದಲಾವಣೆಗಳನ್ನು ಮಾಡುತ್ತಿದ್ದರೆಂಬುದರಲ್ಲಿ ಅನುಮಾನವಿಲ್ಲ; ಇಂಥದೊಂದು ಅವಕಾಶ ತಪ್ಪಿಹೋದುದಕ್ಕಾಗಿ ನಮಗೆ ವಿಷಾದವಿದೆ.

ಈ ಕೃತಿಯನ್ನು ಪ್ರಕಟಿಸಲು ಅನುಮತಿಯನ್ನು ನೀಡಿರುವುದಲ್ಲದೆ, ಅಭಿಜ್ಞಾನಕ್ಕೆ ಸದಾ ಬೆಂಬಲವಾಗಿರುವ ಪ್ರೊ. ಸಾ. ಕೃ. ರಾಮಚಂದ್ರರಾವ್ ಮೆಮೋರಿಯಲ್ ಟ್ರಸ್ಟ್‌ನ ಎಲ್ಲ ಬಂಧುಗಳಿಗೂ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ಎಂದಿನಂತೆ ಈ ಯೋಜನೆಯಲ್ಲೂ ಸಕ್ರಿಯವಾಗಿ ಭಾಗಿಯಾಗಿ, ಹಲವು ವಿಧಗಳಲ್ಲಿ ಸಹಕರಿಸುವ ಮಿತ್ರ ಶ್ರೀ ಬಿ. ಎಸ್. ಸೂರ್ಯಪ್ರಕಾಶ್ ಅವರಿಗೆ ನನ್ನ ನಮನಗಳು. ಸಂಸ್ಕೃತಪದ್ಯಗಳ ಅಚ್ಚಿನ ದೋಷಗಳನ್ನು ತಿದ್ದುವಲ್ಲಿ ನೆರವಾದ ಶ್ರೀ ಕೊರ್ಗಿ ಶಂಕರನಾರಾಯಣ ಉಪಾಧ್ಯಾಯರಿಗೂ ನಮ್ಮ ಕೃತಜ್ಞತೆಗಳು. ಅಭಿಜ್ಞಾನದ ಎಲ್ಲ ಮಿತ್ರರನ್ನೂ ಈ ಸಂದರ್ಭದಲ್ಲಿ ನೆನೆಯುತ್ತಿದ್ದೇನೆ.

ಅಕ್ಷರವನ್ನು ಜೋಡಿಸಿಕೊಟ್ಟಿರುವ ಗಾಯತ್ರಿ ಪ್ರಿಂಟ್ಸ್‌ನ ಬಂಧುಗಳಿಗೂ, ವಿಶೇಷವಾಗಿ ಶ್ರೀ ರಜನೀಶ್ ಅವರಿಗೂ, ಮುದ್ರಕರಾದ 'ಲಕ್ಷ್ಮಿ ಮುದ್ರಣಾಲಯ' ಇವರಿಗೂ, ಆಕರ್ಷಕ ಮುಖಪುಟವನ್ನು ವಿನ್ಯಾಸ ಮಾಡಿಕೊಟ್ಟಿರುವ ಶ್ರೀ ಸುಧಾಕರ ದರ್ಬೆ ಇವರಿಗೂ ನನ್ನ ವಂದನೆಗಳು.

ಆತ್ಮೀಯರಾದ ಓದುಗರೇ, ನಿಮ್ಮ ಬೆಂಬಲವೇ ನಮಗೆ ಶ್ರೀರಕ್ಷೆ. ಅಭಿಜ್ಞಾನವನ್ನು ನಿರಂತರವಾಗಿ ಪ್ರೋತ್ಸಾಹಿಸುತ್ತ ಬಂದಿರುವ ತಮ್ಮೆಲ್ಲರಿಗೂ ನಮ್ಮ ಅನಂತ ನಮನಗಳು. ಈ ಗ್ರಂಥಮಾಲಿಕೆಯ ಬಗೆಗೂ, ಈ ಕೃತಿಯ ಬಗೆಗೂ ದಯವಿಟ್ಟು ತಮ್ಮ ಅಮೂಲ್ಯ ಅಭಿಪ್ರಾಯಗಳನ್ನು ತಲಪಿಸಬೇಕಾಗಿ ಕೋರುತ್ತಿದ್ದೇನೆ.

ಎಂದರೋ ಮಹಾನುಭಾವುಲು ಅಂದರಿಕಿ ವಂದನಮುಲು

ಮಹಾಶಿವರಾತ್ರಿ
5-3-2008
ಬೆಂಗಳೂರು

—ಎಸ್. ಸೂರ್ಯಪ್ರಕಾಶ ಪಂಡಿತ್
ಸಂಪಾದಕ-ಪ್ರಕಾಶಕ
panditsurya@yahoo.co.in
suryaprakashpandit@rediffmail.com

'ಭಾರತತೀರ್ಥ'

ಗಾಯನ್ತಿ ದೇವಾಃ ಕಿಲ ಗೀತಕಾನಿ
ಧನ್ಯಾಸ್ತು ತೇ ಭಾರತಭೂಮಿಭಾಗೇ ।
ಸ್ವರ್ಗಾಪವರ್ಗಾಸ್ಪದಮಾರ್ಗಭೂತೇ
ಭವನ್ತಿ ಭೂಯಃ ಪುರುಷಾಃ ಸುರತ್ವಾತ್ ॥

—*ವಿಷ್ಣುಪುರಾಣ, 2.3.24*

Each race contributes something essential to the world's civilization in the course of its own self-expression and self-realization. .....The essential contribution of India, then is simply her Indianess.

—Ananda K. Coomaraswamy
(Dance of Shiva)

ನಾವು ಭಾರತೀಯರು; ಭಾರತದೇಶದಲ್ಲಿ ಹುಟ್ಟಿರುವವರು. ನಮ್ಮ ದೇಶವನ್ನು ತಾಯಿಯಂತೆ ಭಾವಸ್ತರದಲ್ಲಿ ಆರಾಧಿಸುವುದಿರಲಿ, ಒಂದು ರಾಷ್ಟ್ರವಾಗಿ ಯಾದರೂ ಇದರ ಸತ್ತ್ವ ನಮಗೆ ತಿಳಿದಿದೆಯೇ? ಇಲ್ಲಿ ಸ್ವಾಮಿ ವಿವೇಕಾನಂದರ ಮಾತುಗಳನ್ನು ಕೇಳುವುದೇ ಸರಿಯಾದೀತು—

"This is the ancient land where wisdom made its home before it went into any other country; ....Here is the same India whose soil has been trodden by the feet of the greatest sages that ever lived. Here first arose the doctrines of the immortality of the soul, the existence of a supervising God, an immanent God in nature and in man, and were the highest ideals of religion and philosophy have attained their culminating points. This is the land whence, like the tidal waves, spirituality and philosophy have again and again rushed out and deluged the world, and this is the land from whence once more such tides must proceed in order to bring life and vigour into the decaying races of mankind. It is the same India which has

withstood the shocks of centuries of hundreds of foreign invasions, of hundreds of upheavals of manners and customs. Its life is of the same nature as the soul, without begining and without end, immortal; and we are the children of such a country."

—*Lectures from Colombo to Almora*

ಆದರೆ ನಮಗಾದರೂ ಇಂಥ ನಮ್ಮ ತಾಯಿಯ ಹಿರಿಮೆ-ಗರಿಮೆಗಳ ಪರಿಚಯ ಎಷ್ಟಿದೆ? ನಮ್ಮ ಸಂಸ್ಕೃತಿ-ಪರಂಪರೆಗಳ ಅರಿವು-ಒಲವು ಎಷ್ಟಿದೆ? ಈ ಪ್ರಶ್ನೆಗಳನ್ನು ನಾವು ಎಂದಾದರೂ ನಮ್ಮನ್ನು ನಾವೇ ಕೇಳಿಕೊಂಡಿದ್ದೇವೆಯೆ? ವಿಲ್ ಡ್ಯೂರಂಟ್ ತನ್ನ ಮಹಾಸಾಧನೆಯಾದ 'The Story of Civilization' ಗ್ರಂಥಮಾಲೆಯಲ್ಲಿ ಭಾರತವನ್ನು ಕುರಿತ ಅಧ್ಯಾಯದ ಪ್ರಾರಂಭದಲ್ಲಿಯೇ ಹೇಳುತ್ತಾನೆ—

"Nothing should more deeply shame the modern student than the recency and inadequecy of his acquiantance with India."

ಈ ಮಾತು ವಿಲ್ ಡ್ಯೂರಂಟ್ ಪಾಶ್ಚಾತ್ಯಜಗತ್ತಿಗೆ ಹೇಳಿದ್ದಾದರೂ, ನಮಗೆ, ಎಂದರೆ ಭಾರತೀಯರಿಗೂ ಇದು ಇಂದೂ ಚೆನ್ನಾಗಿಯೇ ಒಪ್ಪತಕ್ಕದ್ದು.

ಭಾರತೀಯ ಪರಂಪರೆ-ಸಂಸ್ಕೃತಿಗಳನ್ನು ಒಂದೇ ಪದದಲ್ಲಿ ಹೇಳುವುದಾದರೆ 'ಭಾರತೀಯತೆ' ಎನ್ನಬಹುದು. "ನೀವು ಯಾವ ಹೆಸರಿನಿಂದಾದರೂ ಕರೆಯಿರಿ; ಆದರೆ ಈ ಭಾರತೀಯತೆಯನ್ನು ಅರಿಯುವ ಅನಿವಾರ್ಯತೆಯಾದರೂ ನಮಗೇನಿದೆ?"—ಇಂಥ ಪ್ರಶ್ನೆಯೂ ನಮ್ಮಲ್ಲಿ ಹಲವರಿಗೆ ಮೂಡಿಕೊಂಡರೆ ಅದೇನೂ ಅಚ್ಚರಿಯಲ್ಲ. ದಾರ್ಶನಿಕ ಆನಂದ ಕುಮಾರಸ್ವಾಮಿ ಅವರು ಈ ಅನಿವಾರ್ಯತೆಯನ್ನು ಸಕಾರಣವಾಗಿಯೇ ಗುರುತಿಸಿದ್ದಾರೆ. ಜಗತ್ತಿನಲ್ಲಿ ಇಂದು ಉಳಿದಿರುವ ಸಂಸ್ಕೃತಿಗಳಲ್ಲಿ ಅತಿ ಪ್ರಾಚೀನಸಂಸ್ಕೃತಿಯೆಂದರೆ ಭಾರತೀಯ ಸಂಸ್ಕೃತಿಯೇ. ಹೀಗೆಂದು, ಪ್ರಾಚೀನ ಎಂದ ಮಾತ್ರಕ್ಕೆ ವಿಶೇಷ ಮನ್ನಣೆಯನ್ನು ಕೊಡಬೇಕೆಂದಲ್ಲ. ಇತಿಹಾಸದುದ್ದಕ್ಕೂ ಭಾರತವು ಅಸಂಖ್ಯಾತ ಆಘಾತಗಳನ್ನು ಎದುರಿಸಿಯೂ ಜೀವಂತವಾಗಿ ಕಂಗೊಳಿಸುತ್ತಿದೆ. ಆದಕಾರಣ, ಇಂದಿನ ಹಲವು ಜನಸಮುದಾಯಗಳು ಎದುರಿಸುತ್ತಿರುವ ಸಮಸ್ಯೆಗಳಿಗೆ ತನ್ನ ಅನುಭವದ ಅರಿವಿನಿಂದ ಭಾರತವು ಪರಿಹಾರವನ್ನು ಒದಗಿಸಬಲ್ಲ ಗುರುಸ್ಥಾನದಲ್ಲಿದೆ; ಭಾರತದ ಗರಿಮೆ ಇದೊಂದೇ ಅಲ್ಲದಿದ್ದರೂ, ಇದೊಂದು ಪ್ರಯೋಜನಕ್ಕಾದರೂ ಭಾರತೀಯತೆಯ ಅರಿವು ಜಾಗ್ರತವಾದರೂ ಸಾಕೆನ್ನಲಡ್ಡಿಯಿಲ್ಲ.

"If we regard the world as a family of nations, then we shall be understand the position of India which has passed through many experiences and solved many problems which younger races have hardly get recognized."

—Anand K. Coomaraswamy
Dance of Shiva

ಮನುಕುಲದ ಉಳಿವಿಗೆ, ನಲವಿಗೆ, ಚೆಲುವಿಗೆ ಭಾರತೀಯತೆಯ ಆವಶ್ಯಕತೆಯಿದೆ ಎಂದಾಯಿತು. ಜಗತ್ತಿನ ಒಟ್ಟು ಏಳಿಗೆಗೂ ವ್ಯಕ್ತಿಯ ಉನ್ನತಿಗೂ, ಎಂದರೆ ನಮ್ಮ ಬಹಿರಂಗದ ಸ್ವಾಸ್ಥ್ಯಕ್ಕೂ ಅಂತರಂಗದ ಸ್ವಾಸ್ಥ್ಯಕ್ಕೂ ಔಷಧವಾಗಬಲ್ಲದ್ದು, ಚೈತನ್ಯದಾಯಕವಾದದ್ದು ಭಾರತೀಯತೆ. ಅಂತರಾತ್ಮ ಪಾರಮ್ಯ ಮತ್ತು ಅಧ್ಯಾತ್ಮದೃಷ್ಟಿಯ ಲೋಕವ್ಯವಹಾರ, ಇದನ್ನೇ ಆನಂದ ಕುಮಾರಸ್ವಾಮಿ ಅವರು ಹೇಳಿದ್ದು—"ಮನುಕುಲಕ್ಕೆ ಭಾರತ ಕೊಟ್ಟಿರುವ ಕೊಡುಗೆಯೆಂದರೆ ಅದು ಭಾರತೀಯತೆಯೇ ಹೌದು"—ಎಂದು.

"ಭಾರತೀಯರಿಗೆ ಭಾರತೀಯತೆ ಎಂಬುದು ಸಹಜವೇ ಹೌದು; ಭಾರತದಲ್ಲಿ ಹುಟ್ಟಿರುವವರು ಮಾಡುವುದೆಲ್ಲವೂ ಭಾರತೀಯತೆಯಲ್ಲದೆ ಮತ್ತೇನು? ಆದುದರಿಂದ ಈ ಭಾರತೀಯತೆಯನ್ನು ಅರಿಯಲು ವಿಶೇಷ ಪ್ರಯತ್ನವಾದರೂ ಏಕೆ?" ಈ ಮಾತು ತಾರ್ಕಿಕ ನೆಲೆಯಲ್ಲಿ ದಿಟವಾಗಿ ಕಂಡರೂ ವಾಸ್ತವದಲ್ಲಿ ಅಬದ್ಧವಾಗಿದೆ. ಇಂದು ಭಾರತೀಯರೇ ಭಾರತೀಯತೆಯಿಂದ ದೂರವಾಗುತ್ತಿರುವ, ಭಾರತೀಯತೆಯನ್ನು ದೂರುತ್ತಿರುವ ನಿದರ್ಶನಗಳೇ ಹೆಚ್ಚು ಹೆಚ್ಚು ಕಾಣಿಸುತ್ತಿವೆ. ಹೀಗಾಗಿಯೆ, ಭಾರತೀಯತೆಯನ್ನು ಕಂಡುಕೊಳ್ಳಬೇಕಾದ ದಿಟವಾದ ಆವಶ್ಯಕತೆಯಿರುವುದು ಭಾರತೀಯರಿಗೇ ಎನ್ನುವಂತಾಗಿದೆ; ನಮ್ಮತನದ ಅರಿವು ಮೊದಲಿಗೆ ನಮಗೇ ಒದಗಬೇಕಾಗಿದೆ. ಸ್ವಾಮಿ ವಿವೇಕಾನಂದರ ಕರೆಯನ್ನು ನಾವಿಲ್ಲಿ ನೆನಪಿಸಿಕೊಳ್ಳಬೇಕು—

"Children of India,..... many times have I been told that looking into the past only degenerates and leads to nothing and that we should look to the future. That is true. But out of past is built the future. Look back, therefore, as for as you can, drink deep of the eternal fountains that are behind. Our ancestors were great..... We must learn the elements of our being, the blood that courses in our vains. We must have faith in that blood and what it did in the past; we must build an India yet greater than what she has been."

ಇಲ್ಲಿ ಇನ್ನೊಂದು ಪ್ರಶ್ನೆ ಏಳಬಹುದು—'ಭಾರತೀಯತೆ ಎಂದರೆ ಅದೊಂದು ಭೌಗೋಳಿಕ ವಿವರಣೆಯೆ?' ಖಂಡಿತವಾಗಿಯೂ ಅಲ್ಲ; ಭಾರತೀಯತೆ ಎಂಬುದು ಒಂದು ಜೀವನಪದ್ಧತಿ, ಜೀವನದರ್ಶನ. ಹೀಗಾಗಿಯೇ ಇದು ಎಲ್ಲ ಜೀವಿಗಳಿಗೂ ಬೇಕಾದ ತತ್ತ್ವವಾಗಿರುವುದು. ಕವಿ ರವೀಂದ್ರರ ಮಾತುಗಳಲ್ಲಿ ಭಾರತದ ಚೇತನವು ಸಮರ್ಥವಾಗಿ ಪ್ರತಿಬಿಂಬಿತವಾಗಿದೆ—

"I love India, not because I cultivate the idolatry of geography, not because I have had the chance to be born in her soil, but because she has saved through tumultnous ages the living words that have issued from the illuminated cousciousness of her great sons—*Satyam Jñānam Anantam Brahma*: *Brahma* is Truth, *Brahma* is Wisdom, *Brahma* is Infinite; *Śantam Śivam Advaitam*: Peace is *Brahma*, goodness is in *Brahma*, and the Unity of all beings.

Thus we have come to know that what India truly seeks is not a peace which is in negation, or in some mechanical adjustment, but that which is in *Śivam*, in goodness; which is in *Advaitam*, in the truth of perfect union; that India does not enjoin her children to cease from *Karma*, but to perform their *karma* in the presence of the Eternal, with the pure knowledge of the spiritual meaning of existence; that is the true prayer of Mother India:

'He who is one, who is above all colour distinctions, who dispenses the inherent needs of men of all colours, who comprehends all things from their beginning to the end, let him unite us to one another with wisdom, which is the wisdom of goodness'."

ಎಂದರೆ, ವ್ಯಷ್ಟಿಹಿತವನ್ನೂ ಸಮಷ್ಟಿಹಿತವನ್ನೂ ಪರಸ್ಪರ ಪೂರಕವಾಗಿ ಕಾಣುವಂಥ, ಅಭ್ಯುದಯ-ನಿಃಶ್ರೇಯಸ್ಸುಗಳೆರಡನ್ನೂ ಒಪ್ಪಿಕೊಂಡಂಥ, ಪ್ರವೃತ್ತಿ-ನಿವೃತ್ತಿಮಾರ್ಗಗಳೆರಡೂ ಗುರಿಯನ್ನೂ ತಲಪಿಸಬಲ್ಲ ವಾಹಕಗಳಾಗಿ ಸ್ವೀಕರಿಸಿದಂಥ, ಜಗತ್ತಿನ ಎಲ್ಲ ವಿವರಗಳಲ್ಲೂ ಏಕಮೂಲವನ್ನೇ ಕಾಣುವಂಥ, ಲೌಕಿಕದಲ್ಲಿ ಅಲೌಕಿಕವನ್ನೂ ಅಲೌಕಿಕದಲ್ಲಿ ಲೌಕಿಕವನ್ನೂ ಆಸ್ವಾದಿಸಬಲ್ಲ ಆಧ್ಯಾತ್ಮಿಕದೃಷ್ಟಿಯೇ ಭಾರತೀಯತೆ. ಆನಂದ ಕುಮಾರಸ್ವಾಮಿಯವರ ಮಾತೂ ಕೂಡ ಇಲ್ಲಿ ಮನನೀಯ—

"The heart and essence of the Indian experience is to be found in a constant intuition of the unity of all life, and the instinctive and ineradicable conviction that the recognition of this unity is the highest good and the uttermost freedom."

ಆದರೆ ಕೆಲವರು ಅಬದ್ಧವ್ಯಕ್ತಿಗಳ ವಿಕೃತಚಿಂತನೆಗಳ ದೆಸೆಯಿಂದಾಗಿ ಆಧ್ಯಾತ್ಮಿಕತೆ ಎಂಬುದು ಇಂದು ತೀರಸಂಕುಚಿತ ಅರ್ಥವ್ಯಾಪ್ತಿಗೆ ಬಲಿಯಾಗಿಬಿಟ್ಟಿದೆ. ದಿಟವಾಗಿ ನೋಡಿದರೆ, ಆಧ್ಯಾತ್ಮಿಕತೆ ಎಂಬುದು ಖಾಲಿತನವಲ್ಲ, ಬಂಜರುನೆಲವಲ್ಲ; ಇದು ತುಂಬುತನ, ಬಾಳಿನ ಫಲವತ್ತತೆ. ಆಧ್ಯಾತ್ಮಿಕತೆ ಎಂಬುದು ಗಾಳಿಗೋಪುರವಲ್ಲ; ಇದು ಬದುಕಿನ ಭವ್ಯಸೌಧಕ್ಕೆ ಆಧಾರವಾಗಿರುವ ಅಡಿಪಾಯ. ಕಣ್ಣಿಗೆ ಕಾಣದ ಬುನಾದಿಯ ಮೇಲೆಯೇ ಕಣ್ಣಿಗೆ ಕಾಣುವ ಗುಡಿಯ ಅಸ್ತಿತ್ವ ಇರುವುದಷ್ಟೆ; ಆಲಯದ ತಳಪಾಯಕ್ಕೂ, ನಡುವಿನ ಕಲಾವೈಭವಕ್ಕೂ, ಮೇಲಣ ಕಲಶದ ಹೊಳಪಿಗೂ ಒಂದು ಸಂಬಂಧಸೂತ್ರವಿದ್ದಾಗಲಷ್ಟೆ ಜೀವನ ಎಂಬ ಮೂರ್ತಿಗೆ ಶಕ್ತಿ, ಚೈತನ್ಯ, ಪೂಜೆ-ಪುರಸ್ಕಾರಗಳು. ಹೀಗೆ, ಹಲವು ಹಂತಗಳಲ್ಲಿ, ವಿವರಗಳಲ್ಲಿ ಹರಡಿಕೊಂಡಿರುವ ಜೀವನವನ್ನು ಸಮಗ್ರವಾಗಿ, ಸರಿಯಾಗಿ, ಸುಂದರವಾಗಿ, ಸುಲಭವಾಗಿ ಗ್ರಹಿಸುವ ಒಂದಾನೊಂದು ಶಕ್ತಿಯೇ, ಮನೋಧರ್ಮವೇ, ಕಾಣ್ಕೆಯೇ ನಮ್ಮ ಋಷಿ-ಮುನಿಗಳು ನಿರೂಪಿಸಿದ ಆಧ್ಯಾತ್ಮಿಕತೆ. ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳ ಮೀಮಾಂಸೆಯನ್ನು ನಡಸಿದಾಗ ಋಷಿಗಳ ಸಮಗ್ರದೃಷ್ಟಿಯ ವೈಶಾಲ್ಯವು ನಮಗೆ ತಿಳಿಯುವುದು. ಬದುಕು ದಿಟವಾಗತಕ್ಕದ್ದು, ಒಳಿತಾಗತಕ್ಕದ್ದು, ಚೆಲುವಾಗತಕ್ಕದ್ದು—ಇದು ನಮ್ಮ ಪೂರ್ವಜರ ಜೀವನದ ಗುರಿಯಾಗಿದ್ದಿತು. ಈ ಗುರಿಯನ್ನು ಮುಟ್ಟಲು ದಾರಿಯಾಗಿ ಅವರು ಕಂಡುಕೊಂಡ ಮಹಾದರ್ಶನವೇ ಪುರುಷಾರ್ಥಚತುಷ್ಟಯ; ಇದರ ಸಾಫಲ್ಯದಲ್ಲಿಯೇ ವ್ಯಕ್ತಿಯ ಸಾರ್ಥಕ್ಯವೂ, ಸಮಾಜದ ಸಾರ್ಥಕ್ಯವೂ ಅಡಗಿದೆ. ಈ ಸಾರ್ಥಕಜೀವನದ ಶಿಖರಾರೋಹಣಕ್ಕೆ ಅವರು ಸಿದ್ಧಮಾಡಿಕೊಂಡ ಸೋಪಾನಗಳಾದರೂ ಎಷ್ಟೊಂದು! ಒಂದೇ ಗುರಿಗೆ ಅಸಂಖ್ಯವಾಗಿರುವ ಈ ಮಾರ್ಗಗಳನ್ನು ಶ್ರೀ ಅರವಿಂದರು ನಿಚ್ಚಳಗಿನಿಂದಲೇ ಗುರುತಿಸುತ್ತಾರೆ, ಹೀಗೆ—

"..., spirituality itself does not flourish on earth in the void. When look at the past of India, what strikes us next is her stupendous vitality, her inexhaustible power of life and joy of life, her almost unimaginably prolific creativeness....., she has been

creating abunduntly and incessantly, lavishly, with an inexhaustible many-sideness, republics and kingoms and empires, philosophies and cosmogonies and sciences and creeds and arts and poems and all kinds of monuments, palaces and temples and public works, communities and societies and religions orders, laws and codes and rituals, physical sciences, psychic sciences, systems of Yoga, system of politics and administration, arts spiritual and arts worldly, trades, industries, fine-crafts,—the list is endless and in each item there is almost a plethora of activity.....There is no historical parallel for an intellectual labour and activity before the invention of printing and the facilities of modern science,..... it embraced all life, politics and society, all the arts from painting to dancing, all the sixty-four accomplishments, everything then known that could be useful to life or interesting to mind, ever, for instance, to such practical side minutive as the breeding and traning of horses and elephants, each of which had its art, its apparatus of technical terms, its copious literature.....On one side there is an insatiable curiosity, the desire of life to know itself in very detail, on the other a spirit of organisation and scrupulous order, ...the rational, ethical and aesthetic mind each at a high intensity of action, created the harmony of the ancient Indian culture."

—*The Renaissance in India*

ಇಲ್ಲಿ ಭಾರತೀಯರ ಸಿದ್ಧಿ-ಸಾಧನೆ-ಸಾಮರಸ್ಯಗಳ ಮಹಾದರ್ಶನವೇ ಅನಾವರಣಗೊಂಡಿದೆ. ಆಧ್ಯಾತ್ಮಿಕತೆಯ ನೆವದಲ್ಲಿ ಭಾರತೀಯರು ಪ್ರಪಂಚವನ್ನು ತೊರೆದವರಲ್ಲ; ಎಚ್ಚರದಲ್ಲಿ ಕನಸನ್ನೂ, ಕನಸಿನಲ್ಲಿ ಎಚ್ಚರವನ್ನೂ ಮರೆತವರಲ್ಲ. ಹೊರಗಣ ವಿವರಗಳನ್ನು ನಿರಾಕರಿಸುವುದೇ ಆಧ್ಯಾತ್ಮಿಕತೆಯಲ್ಲ; ಅದರ ಹಿಂದಿರುವ ಏಕತೆಯನ್ನೂ ವಸ್ತುವಿವೇಕವನ್ನೂ ಗ್ರಹಿಸಿ, ಅದರೊಂದಿಗೆ ಒಂದಾಗುತ್ತಲೇ ಕ್ರಮೇಣ ಬೇರೆಯಾಗುವ—ಭೂಮಿಯ ಸತ್ವವನ್ನು ಹೀರಿಕೊಳ್ಳುತ್ತ, ಕರಟದ ರಕ್ಷಣೆಯಲ್ಲಿಯೇ ನೀರು ಕೊಬ್ಬರಿಯಾಗಿ ಮಾರ್ಪಡುತ್ತ, ಕೊನೆಗೆ ಕರಟದಿಂದ ಬೇರ್ಪಡುವಂಥ—ಪ್ರಕ್ರಿಯೆಯೇ ಆಧ್ಯಾತ್ಮಿಕತೆ; ಎಂದರೆ ಫಲಾಪೇಕ್ಷೆಯಿಲ್ಲದ ಕರ್ಮಾನುಷ್ಠಾನ. ಇಂಥ ಸಹಜಜೀವನವೇ ಸ್ವಾತಂತ್ರ್ಯ ಎನಿಸಿಕೊಳ್ಳುವುದು. ಜೀವನದ ಎಲ್ಲ ಹಾದಿಗಳೂ ಈ ಸ್ವಾತಂತ್ರ್ಯದ ಕಡೆಗೆ ನಮ್ಮನ್ನು ಒಯ್ಯುವಂತೆ ಮಾಡುವುದೇ ಭಾರತೀಯತೆ.

"..... this science [*Adhyātma-vidya*] recognizes the unity of all life—one source, one essence, and, one goal—and regards the realisation of this unity as the highest good, bliss, salvation, freedom, the final purpose of life. This is for Hindu thinkers eternal life; not an eternity in time, but the recognition here and now of All things in the Self and Self in All. This inseperable unity of the material and spiritual world is made the foundation of the Indian culture and determines the whole character of her social ideals."

—*Dance of Shiva*

ಗೌರವಿಸು ಜೀವನವ, ಗೌರವಿಸು ಚೇತನವ ।
ಆರದೋ ಜಗವೆಂದು ಭೇದವೆಣಿಸದಿರು ॥
ಹೋರುವುದೆ ಜೀವನ ಸಮೃದ್ಧಿಗೋಸುಗ ನಿನಗೆ ।
ದಾರಿಯಾತ್ಮೋನ್ನತಿಗೆ—ಮಂಕುತಿಮ್ಮ ॥

ಒಮ್ಮೆ ಹೂದೋಟದಲಿ, ಒಮ್ಮೆ ಕೆಳೆಕೂಟದಲಿ ।
ಒಮ್ಮೆ ಸಂಗೀತದಲಿ, ಒಮ್ಮೆ ಶಾಸ್ತ್ರದಲಿ ॥
ಒಮ್ಮೆ ಸಂಸಾರದಲಿ, ಮತ್ತೊಮ್ಮೆ ಮೌನದಲಿ ।
ಬ್ರಹ್ಮಾನುಭವಿಯಾಗೊ—ಮಂಕುತಿಮ್ಮ ॥

—ಇದು ಭಾರತೀಯ ಚಿತ್ತ, ಮಾನಸಿಕತೆ; ಇದೇ ಭಾರತೀಯಹೃದಯ. ಈ ವಿಧವಾಗಿ, ಎಲ್ಲದರಲ್ಲೂ ಎಲ್ಲೆಲ್ಲೂ ಪರತತ್ತ್ವವನ್ನು ಕಂಡ ಋಷಿಮನಸ್ಸು ಹೀಗೆ ಹಾಡಿದ್ದು ಸಹಜವಾಗಿಯೇ ಇದೆ—

ಪಶ್ಯೇಮ ಶರದಃ ಶತಮ್ । ಜೀವೇಮ ಶರದಃ ಶತಮ್ ।
ಶ್ರುಣಯಾಮ ಶರದಃ ಶತಮ್ । ಪ್ರ ಬ್ರವಾಮ ಶರದಃ ಶತಮ್ ।
ಅದೀನಾಃ ಸ್ಯಾಮ ಶರದಃ ಶತಮ್ । ಭೂಯಶ್ಚ ಶರದಃ ಶತಾತ್ ॥

—*ಯಜುರ್ವೇದ, 36. 24*

(ನೂರು ಸಂವತ್ಸರಗಳು ನಾವು ನೋಡೋಣವಾಗಲಿ; ನೂರು ಸಂವತ್ಸರಗಳು ನಾವು ಬಾಳೋಣವಾಗಲಿ; ನೂರು ಸಂವತ್ಸರಗಳು ನಾವು ಕೇಳೋಣವಾಗಲಿ; ನೂರು ಸಂವತ್ಸರಗಳು ಚೆನ್ನಾಗಿ ನಾವು ಮಾತಾಡೋಣ ವಾಗಲಿ; ನೂರು ಸಂವತ್ಸರಗಳು ತಲೆಯೆತ್ತಿ ಬದುಕೋಣವಾಗಲಿ. ಇವು ನೂರು ಸಂವತ್ಸರಗಳನ್ನೂ ದಾಟಲಿ.)

ಅನೇಕದಲ್ಲಿರುವ ಏಕತೆಯನ್ನು ಕಂಡು ಬದುಕಿನ ವೈವಿಧ್ಯವನ್ನು ನಮ್ಮ ಪ್ರಾಚೀನರು ಪೂರ್ಣವಾಗಿ ಸ್ವೀಕರಿಸಿದರು, ಸವಿದರು. ತುಂಬು ಜೀವನಕ್ಕಾಗಿಯೇ ಅವರು ಪರಿತಪಿಸಿದರು, ಪ್ರಾರ್ಥಿಸಿದರು. ಹೀಗೆಂದು ಬದುಕಿನ ವಿವರಗಳಿಗೆ ಸೋತು, ದಿಟವಾದ ಆದರ ಮೂಲತತ್ತ್ವವನ್ನು ಮರೆತವರಲ್ಲ—ಅವರು ಅಲೆಗಳ ಹೊಡೆತಕ್ಕೆ ಸಿಕ್ಕು ಮುಳುಗಿದವರಲ್ಲ, ಅವುಗಳ ನೆರವಿನಿಂದಲೇ ಸಾಗರವನ್ನು ದಾಟಿದವರು—ಎಂಬುದನ್ನೂ ನಾವು ಮರೆಯಬಾರದು.

ಚಕ್ಷುರ್ ನೋ ಧೇಹಿ ಚಕ್ಷುಷೇ ಚಕ್ಷುರ್ ವಿಖ್ಯೈ ತನೂಭ್ಯಃ ।
ಸಂ ಚೇದಂ ವಿ ಚ ಪಶ್ಯೇಮ ॥

—*ಋಗ್ವೇದ, 10.158.4*

(ಎಲೈ ಸೂರ್ಯನೇ, ನಾವು ವಸ್ತುಗಳ ರೂಪಗಳನ್ನು ನೋಡುವಂತಾಗಲು ನಮಗೆ ನಿನ್ನ ತೇಜಸ್ಸನ್ನೂ ದೃಷ್ಟಿಯನ್ನೂ ಕೊಡು. ಈ ಸಮಸ್ತ ಜಗತ್ತಿನಲ್ಲಿರುವ ವಿವಿಧ ವಸ್ತುಗಳನ್ನು ನಾವು ಚೆನ್ನಾಗಿ ನೋಡುವಂತಾಗಲಿ).

ಇಲ್ಲಿ ಸೂರ್ಯನಿಂದ ಕೇವಲ ಹೊರಗಣ್ಣಿನ ನೋಟವನ್ನಷ್ಟೆ ಬಯಸಿಲ್ಲ, ಒಳಗಣ್ಣಿನ ದರ್ಶನಕ್ಕೂ ಪ್ರಾರ್ಥಿಸಲಾಗಿದೆ.

ಭಾರತೀಯಮನಸ್ಸು ಎಂದಿಗೂ ಸ್ವಾರ್ಥದಿಂದ ಪ್ರವರ್ತಿತವಾಗದು. ಸಾಂಘಿಕಹಿತದಲ್ಲಿಯೇ ತನ್ನ ಹಿತವೂ ಅಂತರ್ಗತವಾಗಿದೆ ಎಂಬುದರಲ್ಲಿಯೇ ಭಾರತೀಯತೆಗೆ ವಿಶ್ವಾಸ. ಪುರುಷಾರ್ಥ ಹಾಗೂ ಜೀವನ್ಮುಕ್ತನ ಕಲ್ಪನೆಯ ಹಿಂದಿರುವ ಸ್ವಾರಸ್ಯವನ್ನೂ ವೈಶಾಲ್ಯವನ್ನೂ ಇಲ್ಲಿ ನೆನೆಯತಕ್ಕದ್ದು. ಸಮಾಜಾಭಿಮುಖವಾದ ನೆಲೆಯಲ್ಲಿಯೇ ಹೊರಟದ್ದು ಈ ಪ್ರಾರ್ಥನೆ—

ಸಂ ಗಚ್ಛಧ್ವಂ ಸಂ ವದಧ್ವಂ ಸಂ ವೋ ಮನಾಂಸಿ ಜಾನತಾಮ್ ।
ಸಮಾನೀ ವ ಆಕೂತಿಃ ಸಮಾನಾ ಹೃದಯಾನಿ ವಃ
ಸಮಾನಮ್ ಅಸ್ತು ವೋ ಮನೋ ಯಥಾ ವಃ ಸುಸಹಾಸತಿ ॥

—*ಋಗ್ವೇದ, 10.191.2-4; ಅಥರ್ವವೇದ, 6.64.1-3*

(ಯಾವಾಗಲೂ ಐಕ್ಯದಿಂದಿರಿ, ಜೊತೆಯಲ್ಲಿಯೇ ನಡೆಯಿರಿ, ಒಂದೇ ಅಭಿಪ್ರಾಯದಿಂದ ಮಾತನಾಡಿರಿ, ಮನಸ್ಸುಗಳು ಒಂದಾಗಿರಲಿ. ಪರಸ್ಪರ ಏಕತೆಯು ಮೂಡುವುದಕ್ಕಾಗಿ ನಿಮ್ಮ ಉದ್ದೇಶವೂ, ನಿಮ್ಮ ಅಪೇಕ್ಷೆಗಳೂ, ನಿಮ್ಮ ಆಲೋಚನೆಗಳೂ ಒಂದೇ ಆಗಿರಲಿ.)

ಜಗದ ಕಲ್ಯಾಣದೊಳಗಾತ್ಮ ಕಲ್ಯಾಣವನು ।
ಜಗದ ಬೀದಿಗಳೊಳು ನಿಜಾತ್ಮಯಾತ್ರೆಯನು ॥
ಜಗದ ಜೀವಿತದಿ ನಿಜಜೀವಿತದ ಪೂರ್ತಿಯನು ।
ಬಗೆಯಲರಿತವನೆ ಸುಖಿ—ಮಂಕುತಿಮ್ಮ ॥

ಹೀಗೆಂದು, ತನ್ನತನವನ್ನು ಎಂದರೆ, ಆತ್ಮೋನ್ನತಿಯನ್ನು ತೊರೆಯುವ ಯಾವೊಂದು ಕಲಾಪವೂ ಸೊಗಯಿಸದು; 'ತನ್ನ' ಆರೋಗ್ಯದಲ್ಲಿಯೇ ಸಮಾಜದ ಆರೋಗ್ಯವೂ ಅವಲಂಬಿತವಾಗಿದೆ. ಈ ನೆಲೆಯಿಂದ ಹೊರಟ ಮಹಾಭಾರತದ ಈ ಆದರ್ಶವೂ ಇಲ್ಲಿ ಮನನೀಯ—

ತ್ಯಜೇದೇಕಂ ಕುಲಸ್ಯಾರ್ಥೇ ಗ್ರಾಮಸ್ಯಾರ್ಥೇ ಕುಲಂ ತ್ಯಜೇತ್ ।
ಗ್ರಾಮಂ ಜನಪದಸ್ಯಾರ್ಥೇ ಆತ್ಮಾರ್ಥೇ ಪೃಥಿವೀಂ ತ್ಯಜೇತ್ ॥

(ಕುಟುಂಬದ ಒಳಿತಿಗಾಗಿ ವ್ಯಕ್ತಿಯನ್ನೂ, ಊರಿನ ಒಳಿತಿಗಾಗಿ ಕುಟುಂಬವನ್ನೂ, ನಾಡಿನ ಒಳಿತಿಗಾಗಿ ಊರನ್ನೂ, ತನ್ನ ಆತ್ಮದ ಒಳಿತಿಗಾಗಿ ಈ ಭೂಮಿಯನ್ನೂ ಬಿಡತಕ್ಕದ್ದು.)

ಹೊಣೆಗಾರಿಕೆ ಮತ್ತು ಸ್ವಾತಂತ್ರ್ಯ—ಇವೆರಡರ ನಡುವೆ ಸಾಮರಸ್ಯವನ್ನು ಸಾಧಿಸಿದ್ದು ಭಾರತೀಯತೆಯ ಅನನ್ಯತೆಯೇ ಹೌದು.

ಭಾರತೀಯತೆಯನ್ನು ಎತ್ತಿಹಿಡಿದಿರುವ ಈ ಲೋಕಕಲ್ಯಾಣಕರ ಭಾವ ಬುದ್ಧಿಗಳಿಗೆ ಯಾವ ವಿಧದ ಭೇದಭಾವಗಳ ಸಂಕೋಲೆಗಳೂ ಇರದು; ಎಲ್ಲೆಲ್ಲೂ ಮಂಗಳಕರವಾದ ದನಿಯು ಎಂದೆಂದೂ ಮೊಳಗುತ್ತಿರಬೇಕೆಂಬುದೇ ಈ ನೆಲದ ತುಡಿತವಾಗಿರುವುದು—

ಯಥೇಮಾಂ ವಾಚಂ ಕಲ್ಯಾಣೀಮಾವದಾನಿ ಜನೇಭ್ಯಃ । ಬ್ರಹ್ಮರಾಜನ್ಯಾಭ್ಯಾಂ ಶೂದ್ರಾಯ ಚಾರ್ಯಾಯ ಚ ಸ್ವಾಯ ಚಾರಣಾಯ ಚ ॥

—ಯಜುರ್ವೇದ, 26.2

(ನನ್ನೀ ಮಂಗಳಕರವಾದ ಮಾತುಗಳು ಎಲ್ಲರಿಗೂ ತಲಪಲಿ—ಬ್ರಾಹ್ಮಣರಿಗೆ, ಕ್ಷತ್ರಿಯರಿಗೆ, ಶೂದ್ರರಿಗೆ ಮತ್ತು ವೈಶ್ಯರಿಗೆ; ಮಾತ್ರವಲ್ಲ, ನನ್ನವರಿಗೆ, ಹೊರಗಿನವರಿಗೆ ಕೂಡ ಇವು ಮುಟ್ಟಲಿ.)

ಆದರೆ ತನ್ನ ಹಿತಸಾಧನೆಯಲ್ಲಾಗಲೀ ಪರಿಸರದ ಹಿತಸ್ಥಾಪನೆಯಲ್ಲಾಗಲೀ

ಅಕ್ರಮಗಳಿಗೆ ಆಸ್ಪದ ಕೊಡದ ಋತಪ್ರಜ್ಞೆಯು ಭಾರತೀಯತೆಯ ವ್ರತಬುದ್ಧಿಗೆ ಮತ್ತೊಂದು ನಿದರ್ಶನ—

ಮಧು ವಾತಾ ಋತಾಯತೇ ಮಧು ಕ್ಷರಂತಿ ಸಿಂಧವಃ ।

—ಋಗ್ವೇದ, 1.90

(ಋತದ ಹಾದಿಯಲ್ಲಿ ನಿರತನಾಗಿರುವವನಿಗೆ ವಾಯುಗಳು ಮಧುರವಾದ ಕರ್ಮಫಲಗಳನ್ನು ಸುರಿಸುತ್ತವೆ. ಪ್ರವಾಹರೂಪದಲ್ಲಿರುವ ನದಿಗಳು ತಮ್ಮ ಮಧುರವಾದ ರಸವನ್ನು ಹರಿಸುತ್ತವೆ.)

ಹೀಗೆಂದು ಉದಾತ್ತತೆ, ಆಧ್ಯಾತ್ಮಿಕತೆ, ಸರಸತೆ, ಸರಳತೆ, ಸಭ್ಯತೆ— ಇವೆಲ್ಲವೂ ಭಾರತಕ್ಕಷ್ಟೆ ಸೀಮಿತವಾದ ವಿವರಗಳೆಂಬುದನ್ನು ದಿಟವಾದ ಭಾರತೀಯನೆಂದೂ ಯೋಚಿಸಲಾರ; ಇಂಥ ಹಠಬುದ್ಧಿಗೆ ಅವನಲ್ಲಿ ಜಾಗವೇ ಇರದು. ಎಲ್ಲೆಲ್ಲೂ ಇರುವುದು ಒಂದೇ ತತ್ತ್ವ ಎಂದಾದ ಮೇಲೆ ಶ್ರೇಷ್ಠ-ಕನಿಷ್ಠಗಳ ಗೊಡವೆಗೆ ಅವಕಾಶವಾದರೂ ಎಕಿದ್ದೀತು?

ಆ ನೋ ಭದ್ರಾಃ ಕ್ರತವೋ ಯಂತು ವಿಶ್ವತಃ । *—ಋಗ್ವೇದ, 1.89.1*
(ಎಲ್ಲ ಕಡೆಯಿಂದಲೂ ಒಳ್ಳೆಯ ವಿಚಾರಗಳು ನಮ್ಮತ್ತ ಬರಲಿ.)

ಯೋ ದೇವಾನಾಂ ನಾಮಧಾ ಏಕ ಏವ *—ಋಗ್ವೇದ, 10.82.3*
(ಎಲ್ಲ ದೇವತೆಗಳ ನಾಮನಿರ್ದೇಶಕನಾಗಿರುವ ಅವನು ಒಬ್ಬನೇ ಆಗಿದ್ದಾನೆ.)

ಆಕಾಶಾತ್ಪತಿತಂ ತೋಯಂ ಯಥಾ ಗಚ್ಛತಿ ಸಾಗರಮ್ ।
ಸರ್ವದೇವ ನಮಸ್ಕಾರಃ ಕೇಶವಂ ಪ್ರತಿಗಚ್ಛತಿ ॥

(ಆಗಸದಿಂದ ಬಿದ್ದ ನೀರು ಹೇಗೆ ಸಮುದ್ರವನ್ನು ಸೇರುವುದೋ ಹಾಗೆಯೇ ಎಲ್ಲ ದೇವರಿಗೂ ಸಲ್ಲಿಸಿದ ನಮನಗಳು ಕೇಶವನಿಗೇ ಸೇರುತ್ತವೆ.)

ವೈಶ್ವಿಕತತ್ತ್ವದ ಅನುಸಂಧಾನವೇ ಭಾರತೀಯರ ನಿತ್ಯಪ್ರಾರ್ಥನೆ. ಜಗತ್ತಿನ ಹಲವು ಸಂಸ್ಕೃತಿಗಳನ್ನು, ತತ್ತ್ವಶಾಸ್ತ್ರದ ಪ್ರಬೇಧಗಳನ್ನು ಅವುಗಳ ಮೂಲಗ್ರಂಥಗಳಲ್ಲಿಯೇ ಅಧ್ಯಯನ ಮಾಡಿದ ಆನಂದ ಕುಮಾರಸ್ವಾಮಿಯ ವರೆನ್ನುತ್ತಾರೆ—

"All that India can offer to the world proceeds from her philosophy. This philosophy is not, indeed, unknown to others—

it is equally the gospel of Jesus and of Blake, Lao Tze, and Rumi— but nowhere else has it been made essential basis of sociology and education. Where the Indian mind differs from the average mind of modern Europe is in its view of the value of philosophy. In Europe and America the study of philosophy is regarded as an end in itself;..... In India, on the contrary, philosophy is not regarded primarily as a mental gymnastic, but rather and with deep religious conviction, as our salvation (*moksha*) from the ignorance (*avidya*) which forever hides from our eyes the vision of reality. Philosophy is the key to the map of life, by which we are setforth the meaning of life and the means of life and the means of attaining its goal."

—*Dance of Shiva*

ಒಂದನ್ನಂತೂ ಧೈರ್ಯದಿಂದ ಹೇಳಬಹುದು—ಬೇರೆಡೆ ವಿರಳವಾಗಿರುವ ಜಿಜ್ಞಾಸೆ, ತತ್ತ್ವಾನ್ವೇಷಣೆ, ಆಧ್ಯಾತ್ಮಿಕತೆ ಭಾರತದಲ್ಲಿ ಸಹಜವಾಗಿದ್ದಿತು; ನಮಗೆ ಅಕ್ಕಿಯಲ್ಲಿ ಕಲ್ಲನ್ನು ಹುಡುಕುವುದು ಸುಲಭವೋ, ಕಲ್ಲಿನಲ್ಲಿ ಅಕ್ಕಿಯನ್ನು ಹುಡುಕುವುದು ಸುಲಭವೋ—ಎಂಬ ನ್ಯಾಯದಂತೆ ವ್ಯಾಪಕತೆಯಿಂದಾಗಿ 'ಆಧ್ಯಾತ್ಮಿಕತೆ ಎಂದರೆ ಭಾರತ'—ಎಂಬ ಸಮೀಕರಣವು ಮೂಡುತ್ತದೆ, ಅಷ್ಟೆ. ಮಾತ್ರವಲ್ಲ, ಭಾರತದಲ್ಲಿ ಧರ್ಮವನ್ನು 'ಭಾರತೀಯಧರ್ಮ' ಎನ್ನದೆ 'ಸನಾತನಧರ್ಮ' ಎಂಬ ಅಭಿಧಾನದಿಂದಲೇ ವ್ಯವಹರಿಸುವುದನ್ನೂ ಇಲ್ಲಿ ನೆನೆಯತಕ್ಕದ್ದು. ಆದುದರಿಂದಲೇ 'ಎಲ್ಲರ ರೋಗವನ್ನೂ ಪರಿಹರಿಸಬಲ್ಲಂಥ, ಎಲ್ಲರ ಸಮಸ್ಯೆಗಳನ್ನೂ ಮಾಯಮಾಡಿಬಿಡುವಂಥ ಮಂತ್ರದಂಡವೇ ಭಾರತೀಯತೆ' ಎಂಬಂಥ ಅಹಂಕಾರವೂ ಭಾರತೀಯತೆಗೆ ಇರದು. ಆನಂದ ಕುಮಾರಸ್ವಾಮಿಯವರ ಮಾತುಗಳೇ ಇಲ್ಲಿಯೂ ಸಲ್ಲುತ್ತವೆ—

"Every race must solve its own problems, and those of its own day. I do not suggest that the ancient Indian solutions of the special Indian problems, though its lessons may be many and valuable, can be directly applied to the modern conditions. What I do suggest is that the Hindus grasped more firmly than others the fundamental meaning and purpose of life, and more deliberately than others organized society with a view to the attainment of the fruit of life; and this organization was desiged, not for the advantage of a single class, but, to use a modern formula, to take from each according to his capacity, and to give each according to

his needs..... We must not judge of Indian society, especially Indian society in its present moment of decay, as if it actually realised the Brāhmanical social ideas; yet even with all its imperfections Hindu society as it survives will appear to many to be superior to any form of social organization attained on a large scale anywhere else, and infinitely superior to the social order which we known as "modern civilizations." But even if it were impossible to maintain this view—and a majority of Europeans and of English-educated Indians certaily believe to the contrary—what nevertheless remains as the most conspicuous special character of the Indian culture, and its greatest significance for the modern world, is the evidence of a constant effort to understand the meaning and the ultimate purpose of life, and a purposive organization of society in harmony with that order, and with a view to the attainment of the purpose.

—*Dance of Shiva*

ನಮ್ಮ ಜೀವನದ ಸಾರ್ಥಕತೆಗೆ ಅತ್ಯಂತ ಆವಶ್ಯಕವಾಗಿರುವ ಭಾರತೀಯ ಚಿತ್ತ-ಮಾನಸಿಕತೆ ಮತ್ತು ಕಾಲವನ್ನು—ಎಂದರೆ, ಭಾರತೀಯಪ್ರಜ್ಞೆಯನ್ನು ನಮಗೆ ಹತ್ತಿರವಾಗಿಸುವ, ಭಾರತೀಯತೆಯನ್ನು—ಎಂದರೆ ನಮ್ಮತನವನ್ನು, ನಮ್ಮ ಸ್ವ-ಭಾವವನ್ನು ನಮಗೇ ಸಾಕ್ಷಾತ್ಕರಿಸಿಕೊಡುವ ಸಾರಸ್ವತಯಜ್ಞವೇ 'ಭಾರತತೀರ್ಥ'.

'ತೀರ್ಥ' ಎಂದ ಕೂಡಲೇ ನಮಗೆ ಮೊದಲಿಗೆ ಸ್ಫುರಿಸುವ ಕಲ್ಪನೆಯೆಂದರೆ 'ಪುಣ್ಯಕ್ಷೇತ್ರ', 'ಯಾತ್ರಾಸ್ಥಳ'. ಸಾಮಾನ್ಯವಾದ ಪ್ರಯಾಣಕ್ಕೂ, ಯಾತ್ರಾಸ್ಥಳ ಸಂದರ್ಶನಕ್ಕೂ ವ್ಯತ್ಯಾಸವಿದೆ; ತೀರ್ಥಕ್ಷೇತ್ರಕ್ಕೆ ಹೋಗಿ-ಬರುವುದರಿಂದ ನಮ್ಮ ಶರೀರ-ಮನಸ್ಸು-ಬುದ್ಧಿಗಳಿಗೆ ಏಕಕಾಲಕ್ಕೆ ಶುದ್ಧಿಯೂ ದೊರಕುತ್ತದೆ, ಬಲವೂ ದೊರಕುತ್ತದೆ. ನಮ್ಮ ಹುಟ್ಟನ್ನೇ ಒಂದು ಪ್ರಯಾಣವಾಗಿ ಕಂಡು, ಭಾರತವೇ ಒಂದು ತೀರ್ಥಕ್ಷೇತ್ರ—ಎಂದು ನಮ್ಮಲ್ಲಿ ಮೂಡುವ ಭಾವಸಮೃದ್ಧಿಯೇ 'ಭಾರತತೀರ್ಥ'ಕ್ಕೆ ಪೀಠಿಕೆಯೆನ್ನಬಹುದು. 'ಭಾರತದಲ್ಲಿ ಜನಿಸಿದವರೇ ಧನ್ಯರು' ಎಂದು ಸ್ವತಃ ದೇವತೆಗಳೆ ಹಾಡುತ್ತಾರೆ—ಎಂದು ವಿಷ್ಣುಪುರಾಣವೇ ಒಕ್ಕಣಿಸುವುದು.

'ತೀರ್ಥ' ಎಂಬುದಕ್ಕೆ ಶಾಸ್ತ್ರ ಎಂದೂ ಹೆಸರಿದೆ. ಯಾವುದು ಶಾಸನ ಮಾಡುವುದೋ, ಜೀವಕ್ಕೆ ತ್ರಾಣವನ್ನು ಕೊಡುವುದೋ, ಪ್ರವೃತ್ತಿ-ನಿವೃತ್ತಿ ಮಾರ್ಗಗಳನ್ನೂ, ನಿತ್ಯಾನಿತ್ಯವಸ್ತುವಿವೇಕವನ್ನೂ ಉಪದೇಶಿಸುತ್ತದೆಯೋ ಅಂಥದ್ದು

ಶಾಸ್ತ್ರ ಎಂದೆನಿಸಿಕೊಳ್ಳುವುದು. ಈ ನೆಲೆಯಿಂದ ಭಾರತವೇ ನಮ್ಮ ಪಾಲಿಗೆ ಒಂದು ಶಾಸ್ತ್ರವಾಗಿ ಒದಗಿಬರುವಂಥದು ಎಂಬುದು 'ಭಾರತತೀರ್ಥ'ದ ಆಶಯ.

'ಯಜ್ಞ', 'ಯಾಗ'— ಎಂಬ ಅರ್ಥವೂ 'ತೀರ್ಥ'ಕ್ಕಿದೆ. 'ಯಜ್ಞೋ ವೈ ವಿಷ್ಣುಃ' *(ತೈತ್ತಿರೀಯಸಂಹಿತಾ 1.7.4)* 'ಯಜ್ಞವೆಂದರೆ ವಿಷ್ಣುವೇ'; 'ಸರ್ವಗತಂ ಬ್ರಹ್ಮ ನಿತ್ಯಂ ಯಜ್ಞೇ ಪ್ರತಿಷ್ಠಿತಮ್' *(ಭಗವದ್ಗೀತಾ 3.15)*— ಮುಂತಾದ ವಾಕ್ಯಗಳಿಂದ ಭಾರತೀಯ ಪರಂಪರೆಯಲ್ಲಿರುವ ಯಜ್ಞಪಾರಮ್ಯವನ್ನು ಕಾಣಬಹುದು. ಯಜ್ಞತತ್ತ್ವವು ಪ್ರಧಾನವಾಗಿ ದ್ವಿಮುಖತತ್ತ್ವವನ್ನು ಎತ್ತಿಹಿಡಿಯುತ್ತದೆ; ಇದು ಬಹಿರ್ಮುಖದಲ್ಲಿ ದಾನಶೀಲತೆಯೆಂಬ ಬೆಳಕಾಗಿಯೂ, ಅಂತರ್ಮುಖದಲ್ಲಿ ತಪಸ್ಸೆಂಬ ಕಾವಾಗಿಯೂ ಪ್ರವೃತ್ತಿ-ನಿವೃತ್ತಿಮಾರ್ಗಗಳೆರಡಕ್ಕೂ ಸಾಧನವಾಗಿದೆ. ಯಜ್ಞವೆಂದರೆ ವಿತರಣಶೀಲತೆಯೇ ಹೌದು— 'ಯಜ್ಞಶಿಷ್ಟಾಶಿನಃ ಸನ್ತೋ ಮುಚ್ಯನ್ತೇ ಸರ್ವಕಿಲ್ಬಿಷೈಃ' *(ಭಗವದ್ಗೀತಾ 3.13)* 'ಯಜ್ಞದಲ್ಲಿ ಉಳಿದುದನ್ನು ತಿನ್ನುವವರು ಎಲ್ಲ ಪಾಪಗಳಿಂದಲೂ ಮುಕ್ತರಾಗುವರು'; 'ಯಜ್ಞಂ ತಪಃ' *(ತೈತ್ತಿರೀಯ ಆರಣ್ಯಕ)*, 'ಯಜ್ಞವೆಂದರೆ ತಪಸ್ಸು'— ಮುಂತಾದ ವಾಕ್ಯಗಳನ್ನೂ ನೋಡತಕ್ಕದ್ದು. ಯಜ್ಞಕಲಾಪದಲ್ಲಿ ಹವಿಸ್ಸನ್ನು 'ನ ಮಮ'— ನನ್ನದಲ್ಲ— ಎಂದು ಆ ಪರತತ್ತ್ವಕ್ಕೆ ಸಮರ್ಪಣಭಾವದಿಂದ ಸಲ್ಲಿಸುವ ವಿಧಿಯ ಹಿನ್ನೆಲೆಯಲ್ಲಿರುವ ಅಹಂಕಾರ-ಮಮಕಾರಗಳ ದಮನೋದ್ಯಮವನ್ನೂ ನಾವಿಲ್ಲಿ ಮನನ ಮಾಡತಕ್ಕದ್ದು. ಹೀಗೆ ಯಜ್ಞವಿಧಿಯು ದಾನ, ತಪಸ್ಸು, ಶ್ರದ್ಧೆ, ಭಕ್ತಿ, ಕರ್ಮ, ಉಪಾಸನೆ, ಸಹಬಾಳ್ವೆ, ಸಾಮಾಜಿಕಬದ್ಧತೆ, ತ್ಯಾಗಶೀಲತೆ, ಕೃತಜ್ಞತೆ ಮತ್ತು ಜ್ಞಾನಗಳ ಒಕ್ಕೂಟವಾಗಿ ಆತ್ಮೋನ್ನತಿಯನ್ನೂ ಲೋಕಕಲ್ಯಾಣವನ್ನೂ ಸಂಕೇತಿಸುತ್ತದೆ. ಹಲವು ಸ್ತರದ ಅರ್ಥಪರಂಪರೆಯನ್ನು ಹೊಂದಿರುವ ಯಜ್ಞಕಲ್ಪನೆಯಲ್ಲಿ ಒಂದೆನಿಸಿರುವ ಜ್ಞಾನಯಜ್ಞದ ಅದ್ಭುತ ವಿವರಣೆಯನ್ನು ನಿದರ್ಶನಕ್ಕೆ ಇಲ್ಲಿ ನೋಡತಕ್ಕದ್ದು—

"ತಸ್ಯೈವಂ ವಿದುಷೋ ಯಜ್ಞಸ್ಯಾತ್ಮಾ ಯಜಮಾನಃ ಶ್ರದ್ಧಾಃ ಪತ್ನೀ ಶರೀರಮಿಧ್ಮಂ... ಹೃದಯಂ ಯೂಪಃ... ಯದಶ್ನಾತಿ ತದ್ಧವಿರ್ಯತ್ಪಿಬತಿ ತದಸ್ಯ ಸೋಮಪಾನಂ ಯದ್ರಮತೇ ತದುಪಸದೋ ಯತ್ಸಂಚರತ್ಯುಪವಿಶತ್ಯುತ್ತಿಷ್ಠತೇ ಚ ಸ ಪ್ರವರ್ಗ್ಯೋ... ಯನ್ಮರಣಂ ತದವಭೃಥಃ ... ಏತದ್ವೈ ಜರಾಮರ್ಯಮಗ್ನಿ ಹೋತ್ರಂ ಸತ್ರಂ ॥"

—*ಮಹಾನಾರಾಯಣೋಪನಿಷತ್ತು*

[ವಿದ್ವಾಂಸನಾದವನು ಮಾಡುವ ಯಜ್ಞಕ್ಕೆ ಅವನ ಅಂತರಾತ್ಮವೇ ಯಜಮಾನ (ಕರ್ತ); ಅವನ ಶ್ರದ್ಧೆಯೇ ಯಜಮಾನಿ! ಅವನ ದೇಹವೇ ಸಮಿತ್ತು; ಅವನ ಎದೆಯೇ

ಬಲಿಸ್ತಂಭ; ಅವನು ತಿಂದು ಕುಡಿಯುವುದೆಲ್ಲ ಸೋಮರಸ; ಅವನು ಪಡುವ ಎಲ್ಲ ಸುಖಗಳೂ ಉಪಸದವೆಂಬ ಕರ್ಮ; ಅವನು ಕುಳಿತು ಎದ್ದು ಓಡಾಡುವುದೆಲ್ಲವೂ ಪ್ರವರ್ಗ್ಯವೆಂಬ ಕರ್ಮ; ಸಾವು ಅವನ ಅವಭೃಥಸ್ನಾನ; ಇಂತಹುದು ಅವನ ಯಜ್ಞ.]

(ಅನುವಾದ: ಡಿವಿಜಿ)

ಭಾರತೀಯತೆಯೇ ಸಕಲಹಿತಸಾಧಕ-ಭಾವವೈಶಾಲ್ಯದ ದಿಟವಾದ ಯಜ್ಞ —ಎಂಬುದು 'ಭಾರತತೀರ್ಥ'ದ ಕಲ್ಪನೆಯಲ್ಲಿರುವ ಸ್ವಾರಸ್ಯ.

'ತೀರ್ಥ' ಎಂದರೆ ಉಪಾಧ್ಯಾಯ, ಗುರು, ಶಿಕ್ಷಕ, ಆಚಾರ್ಯ—ಎಂದೂ ಅರ್ಥವುಂಟು. ನಮ್ಮನ್ನು ಯಾರು ತಿದ್ದುವರೋ, ಅಜ್ಞಾನದಿಂದ ಜ್ಞಾನದ ಕಡೆಗೆ ಒಯ್ಯುವರೋ, ಬದುಕಿಗೆ ಬೆಳಕಾಗುವರೋ ಅವರು ಗುರುಗಳು. ಭಾರತೀಯ ಪರಂಪರೆಯಲ್ಲಿ ಆಚಾರ್ಯಪದವಿಗೆ ತುಂಬ ಎತ್ತರದ ಸ್ಥಾನವಿದೆ. ಆಚಾರ್ಯರು ಯಾರು? 'ಯಾರು ಕೇವಲ ಪುಸ್ತಕಪಾಂಡಿತ್ಯಮಾತ್ರವಲ್ಲದೆ ಶಾಸ್ತ್ರವಿಷಯವನ್ನು ತಮ್ಮ ನಡೆ-ನುಡಿಗಳಲ್ಲೂ ಅನುಸರಿಸಿ ಆದರ್ಶದ ಮೇಲ್ಪಂಕ್ತಿಯನ್ನು ಹಾಕಿಕೊಡುವರೋ ಅಂಥವರು ಆಚಾರ್ಯರು.' ಹೀಗೆ ಭಾರತವೂ ತಾನು ಅನ್ವಯಿಸಿಕೊಂಡಿರುವ ಋತಬದ್ಧವಾದ ಮಾರ್ಗವನ್ನು ವಿಶ್ವಕ್ಕೇ ಕಲಿಸಬಲ್ಲ ಗುರು —ಎಂಬ ಸ್ವಾರಸ್ಯ ಈ 'ಭಾರತತೀರ್ಥ'ದಲ್ಲಿ ಗರ್ಭಿತವಾಗಿದೆ.

ಸಂನ್ಯಾಸಿಗಳಿಗೆ ತಮ್ಮ ಸಂನ್ಯಾಸನಾಮದೊಂದಿಗೆ ಮತ್ತೊಂದು ಹೆಸರನ್ನೂ ಸೇರಿಸುವ ದಶನಾಮವ್ಯವಸ್ಥೆಯೊಂದು ನಮ್ಮಲ್ಲಿ ರೂಢಿಯಿದೆ; ಈ ನಾಮಸಮೂಹದಲ್ಲಿ 'ತೀರ್ಥ'ವೂ ಸೇರಿರುವುದನ್ನು ಗಮನಿಸತಕ್ಕದ್ದು. ಸಂನ್ಯಾಸವೆಂದರೆ ಅದು ಸ್ವಾತಂತ್ರ್ಯಕ್ಕೂ ಜ್ಞಾನನಿಷ್ಠೆಗೂ ಅಲೌಕಿಕತೆಗೂ ವಿಶ್ವಾತ್ಮಭಾವಕ್ಕೂ ಸಂಕೇತ. ಭಾರತೀಯತೆಯ ಸಹಜಮನೋಧರ್ಮವೇ ಇಂಥ ಸಂನ್ಯಾಸಭಾವ—ಎಂಬ ವಿಶಾಲತಾತ್ಪರ್ಯವೇ 'ಭಾರತತೀರ್ಥ'ದಲ್ಲಿದೆ.

ಜಲ, ಎಂದರೆ ನೀರಿಗೂ 'ತೀರ್ಥ'ವೆನ್ನುತ್ತಾರೆ. ಆದರೆ 'ನೀರು' 'ತೀರ್ಥ'ವಾಗಲು ಅನಿವಾರ್ಯವಾದದ್ದು ನಮ್ಮ ಭಾವಶುದ್ಧಿ; ಲೌಕಿಕವನ್ನು ಅಲೌಕಿಕಕ್ಕೂ, ಸಾಮಾನ್ಯವಾದುದನ್ನು ವಿಶೇಷತೆಗೂ ಏರಿಸುವ ಭಾವೋನ್ನತಿಯ ಮಹಾಪರಿವರ್ತನಶೀಲತೆಯೇ 'ನೀರು' 'ತೀರ್ಥ'ವಾಗುವ ಪ್ರಕ್ರಿಯೆಯಲ್ಲಿದೆ. ಭಾರತೀಯಪ್ರಜ್ಞೆಯನ್ನು ಕೈಹಿಡಿದು ನಡಸುತ್ತಿರುವುದೇ ಈ ಭಾವವಿಸ್ತರಣ. ಸಂಸ್ಕೃತಭಾಷೆಯಲ್ಲಿ ನೀರನ್ನು 'ಜೀವನ' ಎಂದೂ ಹೇಳುತ್ತಾರೆ. ಎಂದರೆ, ಸಾಮಾನ್ಯವಾಗಿರುವ ನಮ್ಮ 'ಜೀವನ'ವನ್ನು ಪವಿತ್ರವಾದ, ಮಂಗಳಕರವಾದ

ರಮಣೀಯವಾದ 'ತೀರ್ಥ'ವನ್ನಾಗಿಸುವ, 'ರಸ'ವನ್ನಾಗಿಸುವ ಶಕ್ತಿ ಭಾರತೀಯತೆಗೆ ಉಂಟೆಂಬ ರಸಸಿದ್ಧಾಂತವೂ 'ಭಾರತತೀರ್ಥ'ದಲ್ಲಿದೆ.

'ಆಪೋ ಹಿ ಷ್ಠಾ ಮಯೋಭುವಸ್ತಾ ನ ಊರ್ಜೇ ದಧಾತನ । ಮಹೇ ರಣಾಯ ಚಕ್ಷಸೇ ॥ ಯೋ ವಃ ಶಿವತಮೋ ರಸಸ್ತಸ್ಯ ಭಾಜಯತೇಹ ನಃ । ಉಶತೀರಿವ ಮಾತರಃ ॥' *(ಅಥರ್ವವೇದ 1.5.1-2)*

ಅಪ್(=ನೀರು) ಎಂದರೆ ಜೀವನವು ಸಹಜವಾಗಿಯೇ ಶಕ್ತಿದಾಯಕವೂ ಶುಭದಾಯಕವೂ ಹೌದು. ಇದರ ಮೂಲಸತ್ತ್ವ, ಎಂದರೆ ಜೀವನದ ಶಿವತಮವಾದ ರಸವು ನಮಗೆ ಎಟುಕಬೇಕಾದರೆ ಸೃಷ್ಟಿ(=ನೀರು) ನಮ್ಮ ಪಾಲಿಗೆ ತಾಯಿಯಾಗಬೇಕು; ಎಂದರೆ, ಹೀಗೆ ಭಾರತಮಾತೆಯೂ ತನ್ನ ವಾತ್ಸಲ್ಯದಿಂದ ನಮ್ಮ ಸಹಜಜೀವನವನ್ನು ರಸಮಯಗೊಳಿಸಬಲ್ಲ ಕಾರಯತ್ರೀಪ್ರತಿಭಾ ಸಂಪನ್ನೆಯೆಂಬುದು ಇಲ್ಲಿಯ ಭಾವ. ಹೀಗೆ, 'ಭಾರತ' ಎಂಬುದು ಕೇವಲ ಒಂದು ದೇಶವಾಚಕವಲ್ಲ, ಇದು ಭಾವವಾಚಕ; ಇದು ಅಲೌಕಿಕತೆಯ ರಸದ ತೀರ್ಥಘಟ್ಟ, ಆನಂದದ ಮಡು—ಎಂಬೆಲ್ಲ ಧ್ವನಿ 'ಭಾರತತೀರ್ಥ'ದಲ್ಲಿದೆ. ಮತ್ತೆ, ಜೀವಿಯ ಜೀವಿಕೆಗೆ ಅತ್ಯಂತ ಆವಶ್ಯಕತೆಗಳಲ್ಲಿ ನೀರು ಕೂಡ ಒಂದು ಎಂಬುದೂ ದಿಟವೇ. ಪ್ರಪಂಚದ ಸಂಸ್ಕೃತಿಗಳ ಉಳಿವೂ-ಅಳಿವೂ ನೀರನ್ನು ಆಶ್ರಯಿಸಿಯೇ ನಡೆದಿವೆ. ಜಗತ್ತಿಗೆ ಭಾರತೀಯತೆಯ ಅಗತ್ಯವನ್ನು ಇದು ಎತ್ತಿತೋರಿಸುತ್ತದೆ.

'ಅಗ್ನಿ', 'ಬೆಂಕಿ' ಎಂಬ ಅರ್ಥವೂ 'ತೀರ್ಥ'ಕ್ಕಿದೆ. ಮನುಕುಲಕ್ಕೆ ಬೆಂಕಿಯ ಆವಶ್ಯಕತೆ ಎಷ್ಟೆಂಬುದನ್ನು ಇಲ್ಲಿ ಪ್ರತ್ಯೇಕವಾಗಿ ವಿಸ್ತರಿಸಬೇಕಿಲ್ಲ. ಮನುಷ್ಯನ ಸಂಸ್ಕೃತಿಗೆ, ನಾಗರಿಕತೆಗೆ ಮೂಲಭೂತವಾಗಿ ಒದಗಿಬಂದದ್ದೇ ಬೆಂಕಿ. ಹಾಗೂ, ಬೆಂಕಿಯು ಪಾವಿತ್ರ್ಯಕ್ಕೂ ನಿಷ್ಪಾಕ್ಷಿಕತೆಗೂ ಪ್ರತೀಕ. ಇನ್ನು, ಅಗ್ನಿಯು ವೈದಿಕಸಂದರ್ಭದಲ್ಲಿ ಮನುಷ್ಯನಿಗೂ ದೇವತೆಗಳಿಗೂ ಸಂಬಂಧವನ್ನು ಏರ್ಪಡಿಸುವ ಪುರೋಹಿತ. ನಾಗರಿಕತೆಗೆ ಭಾರತೀಯತೆಗೂ ಇರುವ ಸಂಬಂಧವನ್ನೂ, ಹಾಗೆಯೇ ನಾವು ದೈವತ್ವಕ್ಕೆ ಎಂದರೆ ಅಲೌಕಿಕತತ್ತ್ವಕ್ಕೆ ಏರಲು ಭಾರತೀಯತೆಯು ನಮಗೆ ಒದಗಿಸಬಲ್ಲ ಸಾಧನವನ್ನೂ 'ಭಾರತತೀರ್ಥ'ವು ಧ್ವನಿಸುತ್ತದೆ. ಅಗ್ನಿಯು ಊರ್ಧ್ವಗತಿಗೂ ಸಂಕೇತ; ಇದು ಜ್ಞಾನವನ್ನೂ ಪ್ರಗತಿಯನ್ನೂ ಧ್ವನಿಸುತ್ತದೆ. ಮತ್ತೆ, ಅಗ್ನಿಯನ್ನು ನಾಯಕ, 'ಅಗ್ರಣಿ' ಎಂದೂ ವ್ಯವಹರಿಸಲಾಗುವುದು. ಜಗತ್ತಿನಲ್ಲಿ ಭಾರತೀಯತೆಗೇ ಅಗ್ರಪಟ್ಟ ಸಲ್ಲಬೇಕಾದುದು ಅಲ್ಲವೆ? ಇನ್ನೂ ಒಂದು ವಿಶೇಷವೆಂದರೆ ಅಗ್ನಿಯು ಪ್ರಾಚೀನಕಾಲದಿಂದಲೂ ಆಧುನಿಕಕಾಲದವರೆಗೆ ಪೂಜಿಸಲ್ಪಡುತ್ತಿರುತ್ತದೆ—'ಅಗ್ನಿಃ ಪೂರ್ವೇಭಿರ್ಋಷಿಭಿರೀಡ್ಯೋ ನೂತನೈರುತ'

(ಋಗ್ವೇದ). ಹೀಗೆ ಭಾರತೀಯತೆಯು ಚಿರಂತನತೆಗೂ, ಪ್ರಾಚೀನ-ನವೀನಗಳ ಸಂಮಿಳನಕ್ಕೂ ಪ್ರತೀಕವಾಗಿದ್ದು, ಇದು ಸರ್ವಮಾನ್ಯತೆಗೂ ಸಾರ್ವಕಾಲಿಕತೆಗೂ ಅರ್ಹವಾಗಿದೆ.

'ತೀರ್ಥ'ಕ್ಕೆ 'ಯೋಗ' ಎಂಬ ಅರ್ಥವೂ ಇದೆ. ಶಾರೀರಕ ಮತ್ತು ಮಾನಸಿಕಸ್ವಾಸ್ಥ್ಯಕ್ಕಾಗಿ ಮಾಡುವ ಕ್ರಿಯೆಯೆಲ್ಲವೂ ಯೋಗವೇ ಎನಿಸುವುದು. ಯೋಗ ಎಂಬುದು ನಾವು ನಡಸುವ ಕರ್ಮಗಳಲ್ಲಿ ನಿರ್ವಹಿಸುವ ಕೌಶಲವೂ ಹೌದು; ಕೌಶಲದಲ್ಲಿ ವ್ಯವಸ್ಥೆಯನ್ನು—ಋತವನ್ನು—ಕಾಪಾಡುವ ಎಚ್ಚರಿಕೆ, ಜಾಣ್ಮೆಗಳೆರಡೂ ಸೇರುತ್ತವೆ. ಮಾತ್ರವಲ್ಲ, ಮಾನಸಿಕ ದೃಢತೆಯ ಶಿಖರಸ್ಥಿತಿಯೇ ಯೋಗ. ಭಾರತೀಯತೆಗೆ ಇರುವ ಇಷ್ಟೆಲ್ಲ ಬಲಗಳ ಅರಿವೇ ಈ 'ಭಾರತತೀರ್ಥ'ದಲ್ಲಿದೆ.

ತೀರ್ಥಗಳನ್ನು ಸಾಮಾನ್ಯವಾಗಿ ಮೂರು ವಿಧವಾಗಿ ಗುರುತಿಸುವುದುಂಟು—(1) ಸ್ಥಾವರತೀರ್ಥ: ಇದು ಪುಣ್ಯಕ್ಷೇತ್ರ, ನದಿ-ಸರೋವರಗಳು ಮುಂತಾದುವು; (2) ಜಂಗಮತೀರ್ಥ: ಎಂದರೆ ಜ್ಞಾನಿಗಳೇ ತೀರ್ಥಸಮಾನರು ಎಂದು; ಮತ್ತು, (3) ಮಾನಸತೀರ್ಥ: ಮನಃಶುದ್ಧಿಯೇ ದಿಟವಾದ ತೀರ್ಥ. ಈ ಎಲ್ಲ ವಿವರಗಳನ್ನೂ ಒಳಗೊಂಡಿರುವುದೇ 'ಭಾರತತೀರ್ಥ'.

ತ್ಯಾಗಜೀವನಕ್ಕೆ ಮೂರ್ತರೂಪವಾಗಿರುವ ಋಷಿ-ಮುನಿಗಳು ಸ್ನಾನಮಾಡಿದ ಜಲಪ್ರದೇಶಗಳು 'ತೀರ್ಥ' ಎಂದೆನಿಸಿಕೊಳ್ಳುತ್ತವೆ. ಈ ತೀರ್ಥಗಳು ಶುಭ್ರತೆಗೆ, ನಿರ್ಮಲತೆಗೆ, ಪಾವಿತ್ರ್ಯಕ್ಕೆ ಸಂಕೇತಗಳು. ಉದಾಹರಣೆಗೆ, ರಾಮಾಯಣದಲ್ಲಿ ಬರುವ ತಮಸಾನದಿಯ ವರ್ಣನೆಯನ್ನು ಇಲ್ಲಿ ಉದಾಹರಿಸಬಹುದು—

ಅಕರ್ದಮಮಿದಂ ತೀರ್ಥಂ ಭರದ್ವಾಜ ನಿಶಾಮಯ ।
ರಮಣೀಯಂ ಪ್ರಸನ್ನಾಂಬು ಸನ್ಮನುಷ್ಯಮನೋಯಥಾ ॥

—ಬಾಲಕಾಂಡಮ್, 2.5

(ಭರದ್ವಾಜ, ಸ್ವಚ್ಛವಾದ ಈ ತೀರ್ಥವನ್ನು ನೋಡು—ತಿಳಿನೀರಿನಿಂದ ತುಂಬಿದ ಇದು ಸಜ್ಜನರ ಮನಸ್ಸಿನಂತೆ ಎಷ್ಟು ರಮಣೀಯವಾಗಿದೆ!)

ಹೀಗೆ, ಸ್ವಚ್ಛವಾದ ಕನ್ನಡಿಯಂತೆ ನಮ್ಮತನವನ್ನು ಪ್ರತಿಫಲಿಸಬಲ್ಲ ಋಷಿತೀರ್ಥವೇ ಈ 'ಭಾರತತೀರ್ಥ'.

'ಭಾರತತೀರ್ಥ'ಗ್ರಂಥಮಾಲಿಕೆಯಲ್ಲಿ ಭಾರತದ ಸಿದ್ಧಿ-ಸಾಧನೆಗಳ ಪರಿಚಯಮಾಡಿಕೊಡುವ ಪ್ರಯತ್ನವನ್ನು ಮಾಡಲಾಗುವುದು. ಭಾರತದೇಶದ ಋಷಿ-ಮುನಿಗಳು, ಸಿದ್ಧರು-ಸಂತರು-ಮಹಾಪುರುಷರು-ಸಾಧಕರು, ತೀರ್ಥ ಕ್ಷೇತ್ರಗಳು, ಕಲಾಪ್ರಕಾರಗಳು, ದರ್ಶನಪ್ರಸ್ಥಾನಗಳು, ಸಾಹಿತ್ಯ, ಸಿದ್ಧಾಂತ-ಕಲ್ಪನೆಗಳು, ಇತಿಹಾಸ, ವಿಜ್ಞಾನ, ಜೀವನಪದ್ಧತಿಗಳು—ಹೀಗೆ ಸಮಸ್ತ ಭಾರತೀಯವಿದ್ಯೆಗಳನ್ನು ಕುರಿತು ಪುಸ್ತಿಕೆಗಳು ಪ್ರಕಟವಾಗಲಿವೆ.

ಬನ್ನಿ! ಭಾರತತೀರ್ಥದಲ್ಲಿ ಮೀಯೋಣ; ಮಿಂದು ನಮ್ಮ ಜೀವನವನ್ನು ಸತ್ಯವಾಗಿಸೋಣ, ಶಿವವಾಗಿಸೋಣ, ಸುಂದರವಾಗಿಸೋಣ.

ಜಾನಾಮಿ ನೈತತ್ ಕ್ವ ವಯಂ ವಿಲೀನೇ
ಸ್ವರ್ಗಪ್ರದೇ ಕರ್ಮಣಿ ದೇಹಬನ್ಧಮ್ ।
ಪ್ರಾಪ್ಸ್ಯಾಮ ಧನ್ಯಾಃ ಖಲು ತೇ ಮನುಷ್ಯಾ
ಯೇ ಭಾರತೇ ನೇನ್ದ್ರಿಯ ವಿಪ್ರಹೀನಾಃ ॥

—ವಿಷ್ಣುಪುರಾಣ

(ನಮಗೆ ಸ್ವರ್ಗವನ್ನು ಕೊಟ್ಟಿರುವ ಈ ಪುಣ್ಯಕರ್ಮವು ಸವೆದ ಮೇಲೆ, ಮತ್ತೆ ಎಲ್ಲಿ ಹುಟ್ಟಿ ದೇಹಬಂಧವನ್ನು ಪಡೆಯುತ್ತೇವೋ ನಮಗೆ ಗೊತ್ತಿಲ್ಲ! ಇಂದ್ರಿಯ ಶಕ್ತಿಗಳಿಂದ ಸಹಿತರಾಗಿ ಭರತಖಂಡದಲ್ಲಿ ಹುಟ್ಟಿದ ಮನುಷ್ಯರೇ ಧನ್ಯರು!)*

—ಎಸ್. ಸೂರ್ಯಪ್ರಕಾಶ ಪಂಡಿತ್
ಸಂಪಾದಕ

---

* ಇಲ್ಲಿ ದೇವತೆಗಳು ಭಾರತೀಯರನ್ನು ಕುರಿತು ಹಾಡುತ್ತಿದ್ದಾರೆ. (ಅನುವಾದ: ವಿದ್ವಾನ್ ಎನ್. ರಂಗನಾಥ ಶರ್ಮಾ)

† ಇಲ್ಲಿಯ ಅನುವಾದಗಳು ಕೇವಲ ಭಾವಾನುವಾದಗಳು.

'ಭಾರತೀಯತೆ'ಯ ಎಲ್ಲ ಅಂಶಗಳನ್ನೂ ಇಲ್ಲಿ ಚರ್ಚಿಸಲಾಗಿಲ್ಲ; ನಮ್ಮ ಮುಂದಿನ ಕೃತಿಯಲ್ಲಿ ಈ ದಿಸೆಯಿಂದ ಮತ್ತೂ ಕೆಲವು ಆಯಾಮಗಳನ್ನು ಸ್ಪರ್ಶಿಸಲು ಪ್ರಯತ್ನಿಸಲಾಗುವುದು.

ಗೀತಗೋವಿಂದ

ಗೀತಗೋವಿಂದ

ಪ್ರವೇಶ

ಜಯದೇವ

ಕಾವ್ಯ

ವಸ್ತು

ವಿರಹಾರಂಭ

ವಿರಸಪ್ರಸಂಗ

ಪ್ರಶಸ್ತಿ

ಕೃಷ್ಣಕರ್ಣಾಮೃತ

ರಾಧಾಮಾಧವರಾಸ

ಪ್ರವೇಶ

ಕೃಷ್ಣಭಕ್ತಿಯೇ ವಿಶಿಷ್ಟವಾದ ಭಾಗವತಸಂಪ್ರದಾಯ ಇಂದು ನಮ್ಮ ದೇಶದ ಆದ್ಯಂತ ಹರಡಿದೆ. ಆದರೆ ಇದು ಯಾವಾಗ, ಎಲ್ಲಿ ಆರಂಭವಾಯಿತೆಂಬುದು ಅಸ್ಪಷ್ಟ.

ಕೃಷ್ಣನ ಲೀಲಾವತಾರದ ಭಾವನೆ ಭಕ್ತರ, ಭಾವುಕ, ರಸಿಕರ ಹಿಡಿತದಲ್ಲಿ ಅದ್ಭುತವಾಗಿ, ವಿಚಿತ್ರವಾಗಿ ಬೆಳೆಯಿತು. ಅವನ ಬಾಲ್ಯಲೀಲೆ, ಶೃಂಗಾರಚೇಷ್ಟೆ, ಮೋಹಕರೂಪ, ಗೀತಮಾಧುರ್ಯ, ರಾಸಕ್ರೀಡೆ, ಅಸುರದಮನ ಮುಂತಾಗಿ ಹಲವು ಮುಖಗಳಲ್ಲಿ ಕೃಷ್ಣನ ಚರಿತ್ರೆ ವಿಸ್ತರಿಸಿತು. ಇಂಥ ಪ್ರಸಂಗಗಳಲ್ಲಿ ಅಸಂಭವ, ಅಸಂಬದ್ಧ, ಅದ್ಭುತ, ಅಶ್ಲೀಲ ಎನ್ನಬಹುದಾದ ವಿವರಗಳು ಹಲವು; ಆದರೆ ಭಕ್ತಿಯೇ ಪ್ರಮಾಣ ಎನ್ನುವುದು ಸಮಾಧಾನ.

ಸಂಸ್ಕೃತಸಾಹಿತ್ಯದಲ್ಲಿ ಕೃಷ್ಣನ ದೇವತ್ವವನ್ನು ಅಧಿಕರಿಸಿ ರಚಿತವಾದ ಕಾವ್ಯಗಳು, ನಾಟಕಗಳು, ಪ್ರಬಂಧಗಳು, ಗೀತೆಗಳು, ಸ್ತೋತ್ರಗಳು ಅಸಂಖ್ಯ. ಇವುಗಳಲ್ಲಿ ಅತಿ ಪ್ರಾಚೀನಕೃತಿಗಳ ಪಂಕ್ತಿಗೆ ಸೇರಿದ್ದೆಂದರೆ 'ಮುಕುಂದಮಾಲಾ'. ಸುಮಾರು ಎಂಟನೆಯ ಶತಮಾನದಲ್ಲಿ ಕೇರಳದ ರಾಜನಾಗಿದ್ದ ಕುಲಶೇಖರ ರಚಿಸಿದ ಈ ಸ್ತುತಿ ಮಧುರ, ರಮಣೀಯ. ಆ ಕಾಲಕ್ಕಾಗಲೇ ಕೇರಳದಲ್ಲಿ "ನಾರಾಯಣೀಯ" ಎಂಬ ಬಗೆಯ ವೈಷ್ಣವಪಂಥ ಪ್ರವರ್ತಿತವಾಗಿದ್ದಿತು. ಮುಂದಿನ ಒಂದೆರಡು ಶತಮಾನಗಳಲ್ಲಿ ಬೃಂದಾವನದ ರಾಧಾಕೃಷ್ಣಪಂಥ ಕೇರಳವನ್ನು ಮುಟ್ಟಿತು; ಅದರ ಫಲ 'ಕೃಷ್ಣಕರ್ಣಾಮೃತ'. ಇದಾದನಂತರ ಇಡೀ ದೇಶವನ್ನು ಅನುರಣಿಸಿದ ಭಕ್ತಿಕಾವ್ಯವೆಂದರೆ 'ಗೀತಗೋವಿಂದ'. ಜಯದೇವಕವಿಯ ಗೀತಗೋವಿಂದವು ಶೃಂಗಾರಪ್ರಧಾನವಾದ ಗೇಯಕಾವ್ಯ.

ಸಂಸ್ಕೃತಸಾಹಿತ್ಯದಲ್ಲಿ ಇದು ಪದಲಾಲಿತ್ಯಕ್ಕೆ ಪ್ರಸಿದ್ಧವಾದುದು. ಇಲ್ಲಿನ ಶಬ್ದಸೌಕುಮಾರ್ಯ ಮತ್ತು ನಾದಮಾಧುರ್ಯಗಳಿಂದಾಗಿ ಇದನ್ನು ಗಾಯನಕ್ಕೆ, ನರ್ತನಕ್ಕೆ, ನಾಟಕಕ್ಕೆ, ಅಳವಡಿಸಿದ್ದಾರೆ. ವೈಷ್ಣವಬಾಹುಳ್ಯವಿರುವ ಕ್ಷೇತ್ರಗಳಲ್ಲಿ ಮಾರ್ಗಶೀರ್ಷಮಾಸದ ಹೊತ್ತಿಗೆ 'ರಾಧಾಮಾಧವವಿವಾಹ'ವೆನಿಸಿಕೊಳ್ಳುವ ಉತ್ಸವವನ್ನು ತುಂಬ ಉತ್ಸಾಹದಿಂದ ನಡೆಸುವ ಪದ್ಧತಿಯಿದೆ; ಆಗ ಗೀತಗೋವಿಂದವು ಬಳಕೆಗೆ ಬರುತ್ತದೆ. ಉತ್ತರಭಾರತದ ರಾಧಾಕೃಷ್ಣ ಪಂಥದವರಿಗೆ ಗೀತಗೋವಿಂದವು ಪ್ರಧಾನವಾದ ಪ್ರಮಾಣಗ್ರಂಥವೆಂದರೂ ನಡೆದೀತು. ಭಕ್ತರಿಗೆ, ಭಾವುಕರಿಗೆ, ರಸಿಕರಿಗೆ ಇದರಿಂದ ಒದಗುವ ಸ್ಫೂರ್ತಿ ವಿಪುಲವಾದುದು.

ಸಂಸ್ಕೃತಸಾಹಿತ್ಯದಲ್ಲಿ ಇದನ್ನು ಅನುಕರಿಸಿ ಭಾನುದತ್ತ ಕವಿಚಕ್ರವರ್ತಿಯ 'ಗೀತಗೌರೀಶ', ಸೋಮನಾಥನ 'ಕೃಷ್ಣಗೀತ', ಹರಿಶಂಕರನ 'ಗೀತರಾಘವ', ರಾಮಕವಿಯ 'ಗೀತಗಿರೀಶ', ಗೋವಿಂದದಾಸನ 'ಸಂಗೀತಮಾಧವ', ಅಭಿನವ ಚಾರುಕೀರ್ತಿಯ 'ಗೀತವೀತರಾಗ', ಕಲ್ಯಾಣಕವಿಯ 'ಗೀತಗಂಗಾಧರ', ಸದಾಶಿವಮುಖಿಯ 'ಸಂಗೀತಸುಂದರ' ಮುಂತಾದ ಹತ್ತಾರು ಕೃತಿಗಳು ಉಪಲಬ್ಧವಿದ್ದರೂ ಗೀತಗೋವಿಂದದಷ್ಟು ಜನಪ್ರಿಯವಾದ, ಸುಂದರವಾದ ಕೃತಿ ಮತ್ತೊಂದಿಲ್ಲ; ಅಷ್ಟು ಪ್ರಸಿದ್ಧಿ ಪಡೆದ ಇನ್ನೊಂದು ಗೇಯಕಾವ್ಯವಿಲ್ಲ.

ಲಲಿತವಾದ ಕಾವ್ಯರಚನೆಯಲ್ಲಿ ಜಯದೇವನಿಗೆ ಪೂರ್ವ ಸೂರಿಯಾಗಿದ್ದವನು ಲೀಲಾಶುಕ; ಅವನ ಕೃಷ್ಣಕರ್ಣಾಮೃತವೂ ಸಂಸ್ಕೃತ ವಾಙ್ಮಯದಲ್ಲಿ ಪ್ರಸಿದ್ಧವಾದ ಕೃತಿ. ಲೀಲಾಶುಕನೇ ಕಾಲಾಂತರದಲ್ಲಿ ಜಯದೇವನಾಗಿ ಜನ್ಮವೆತ್ತಿಬಂದನೆಂದು ಉತ್ತರದೇಶದಲ್ಲಿಯೂ ದಕ್ಷಿಣದೇಶ ದಲ್ಲಿಯೂ ದೃಢವಾದ ನಂಬಿಕೆಯಿದೆ. ಇಬ್ಬರ ಸಾರಸ್ವತಸಂಪತ್ತೂ ಕೃಷ್ಣಭಕ್ತಿಯ ಆಸರೆಯಲ್ಲಿಯೇ ನಿಂತವು. ಒಂದು ದೃಷ್ಟಿಯಿಂದ ಕೃಷ್ಣಕರ್ಣಾಮೃತವೂ ಗೀತಗೋವಿಂದವೂ ಒಂದಕ್ಕೊಂದು ಪೂರಕವಾಗಿರುವಂತಿದೆ. ವೃಂದಾವನ ವಿಹಾರಿಯಾದ ಕೃಷ್ಣನ ವಿವಿಧ ಮುಖಗಳನ್ನು ಕೃಷ್ಣಕರ್ಣಾಮೃತದಲ್ಲಿ ಕಾಣಬಹುದು. ಕಿಶೋರಕೃಷ್ಣನ ಲೀಲೆಗಳು ಮೈದುಂಬಿಬರುವುದನ್ನು ಇಲ್ಲಿ ಕಾಣಬಹುದು. ರಾಧಾರಸಿಕನಾದ ಪ್ರಣಯಿಕೃಷ್ಣನ ಶೃಂಗಾರಮನೋಧರ್ಮವು

ಗೀತಗೋವಿಂದದ ಮುಖ್ಯರಸ. ಭಾವುಕರು ಬೇಕೆಂದರೆ ಕೃಷ್ಣಚರಿತ್ರೆಯ ಪೂರ್ವಾರ್ಧವು ಕೃಷ್ಣಕರ್ಣಾಮೃತವೆಂದೂ, ಉತ್ತರಾರ್ಧವು ಗೀತಗೋವಿಂದ ವೆಂದೂ ಕಂಡುಕೊಳ್ಳಬಹುದು.

ಈ ದೃಷ್ಟಿಯಿಂದ ಇದೇ ಪುಸ್ತಕದಲ್ಲಿ ಪರಿಶಿಷ್ಟವಾಗಿ ಲೀಲಾಶುಕನ ಕೃಷ್ಣಕರ್ಣಾಮೃತದ ವಿಮರ್ಶೆಯೂ ಸೇರಿದೆ.

ಜಯದೇವ

ಗೀತಗೋವಿಂದದ ಕವಿಯಾದ ಜಯದೇವನ ಜೀವಿತವೇ ಒಂದು ಕಾವ್ಯವೆಂದು ಕವಿಸಮಯ. ಅವನ ವಿಚಾರವಾಗಿ ಹಲವಾರು ಉದಂತಗಳು ಪ್ರಚಲಿತವಾಗಿವೆ; ಆದರೆ ನಿಖರವಾದ ವಿವರಗಳು ಅಷ್ಟಾಗಿ ದೊರೆಯುವುದಿಲ್ಲ. ಗೀತಗೋವಿಂದದ ವ್ಯಾಖ್ಯಾನಗಳಾದ ಶಂಕರಮಿಶ್ರನ 'ರಸಮಂಜರಿ', ರಾಣಾಕುಂಭನ 'ರಸಿಕಪ್ರಿಯಾ', 'ಭಕ್ತಮಾಲಾ' ಮೊದಲಾದ ಕೃತಿಗಳ ಆಧಾರದ ಮೇಲೆ ಜಯದೇವನ ಜೀವಿತಕಥೆಯನ್ನು ಹೆಣೆಯುತ್ತಾರೆ; ಭಾವುಕರು ಉತ್ಪ್ರೇಕ್ಷೆಗಳನ್ನೂ ಅಲಂಕರಣಗಳನ್ನೂ ಗ್ರಾಹ್ಯವೆಂದೇ ಪರಿಗಣಿಸಿದ್ದಾರೆ. ಇವುಗಳನ್ನೆಲ್ಲ ಜಾಲಾಡಿದರೆ ಉಳಿಯುವ ವಿವರಗಳು ಇಷ್ಟು.

ಕ್ರಿಸ್ತಾಬ್ದ ಹನ್ನೆರಡನೆಯ ಶತಮಾನದ ಅಂತ್ಯಭಾಗದಲ್ಲಿ ಜಯದೇವ ಹುಟ್ಟಿದ್ದು. ಅವನು ತೀರಿಕೊಂಡ ವರ್ಷ 1210 ಎಂದು ಹೇಳುತ್ತಾರೆ. ಪುಷ್ಯಮಾಸದ ಶುಕ್ಲಸಪ್ತಮಿಯಂದು ಬಂಗಾಳದ ಕಡೆ ಅವನ ಪುಣ್ಯತಿಥಿಯನ್ನು ಆಚರಿಸುತ್ತಾರೆ. ಅವನು ಬದುಕಿದ್ದಾಗ ಬಂಗಾಳವನ್ನು ಆಳುತ್ತಿದ್ದ ಅರಸು ವೈದ್ಯವಂಶದ ಬಲ್ಲಾಳಲಕ್ಷ್ಮಣಸೇನ; ಇವನ ಅಧಿಕಾರದ ಅವಧಿ 1170-1200. ಇವನ ಕಾಲದಲ್ಲಿ ಪ್ರಖ್ಯಾತಕವಿಯಾಗಿದ್ದ ಗೋವರ್ಧನಾಚಾರ್ಯನು ಇವನನ್ನು 'ಸೇನಕುಲತಿಲಕಭೂಪತಿ' ಎಂದು ಬಣ್ಣಿಸಿದ್ದಾನೆ. 'ಸದುಕ್ತಿಕರ್ಣಾಮೃತ'ವನ್ನು ಬರೆದು ವಿಖ್ಯಾತನಾದ ಶ್ರೀಧರದಾಸನಿಗೆ ಇವನೇ ಧಣಿಯಾಗಿದ್ದನೆಂದು ಪ್ರತೀತಿ. ಇವನಲ್ಲದೆ ಲಕ್ಷ್ಮಣಸೇನನ ಆಸ್ಥಾನದಲ್ಲಿ ಗೋವರ್ಧನಾಚಾರ್ಯ, ಶರಣ, ಉಮಾಪತಿಧರ, ಕವಿರಾಜ-ಧೋಯಿ ಮತ್ತು ಜಯದೇವ ಇವರೂ ಇದ್ದರೆಂದು ಶ್ಲೋಕವೊಂದು ಹೇಳುತ್ತದೆ.

ಇವರಲ್ಲಿ ಗೋವರ್ಧನನೆಂಬುವನು ನೀಲಾಂಬರ ಸೋಮಯಾಜಿಯ ಮಗ, ಉದಯನಾಚಾರ್ಯನ ಶಿಷ್ಯ. ಆರ್ಯಾವೃತ್ತದಲ್ಲಿ ನಾಗರಿಕಸ್ತ್ರೀಯರ ಹಾವಭಾವ-ವಿಲಾಸಗಳನ್ನು ಬಣ್ಣಿಸುವ ಏಳುನೂರು ಶ್ಲೋಕಗಳ 'ಆರ್ಯಾಸಪ್ತಶತಿ'ಯೆನ್ನುವ ಗ್ರಂಥ ಇವನದೆಂದು ಪ್ರಸಿದ್ಧವಾಗಿದೆ. ಶೃಂಗಾರೋತ್ತರ ಸತ್ಪ್ರಮೇಯ ರಚನೆಯಲ್ಲಿ ಗೋವರ್ಧನನಿಗೆ ಸ್ಪರ್ಧಿಯಾದ ಯಾವನನ್ನೂ ತಾನು ತಿಳಿದಿಲ್ಲವೆಂದು ಜಯದೇವನೇ ಹೊಗಳಿದ್ದಾನೆ. ಶರಣನು ಯಾರೋ ತಿಳಿಯದು. ಉಮಾಪತಿಯು ಲಕ್ಷ್ಮಣಸೇನನ ಮಂತ್ರಿಯಾಗಿದ್ದ ನಂತೆ; 'ಕೃಷ್ಣಚರಿತೆ'ಯೆಂಬ ಕಾವ್ಯವನ್ನೂ 'ಪಾರಿಜಾತಾಪಹರಣ'ವೆಂಬ ಗೇಯನಾಟಕವನ್ನೂ ರಚಿಸಿದ್ದಾನೆ. ಕವಿರಾಜ-ಧೋಯಿಗೆ ಶ್ರುತಧರನೆಂಬ ಪ್ರಶಸ್ತಿಯಿದ್ದಿತು. ಅವನು ಬರೆದ 'ಪವನದೂತ'ವೆಂಬ ಸಂದೇಶಕಾವ್ಯದಲ್ಲಿ ಕುವಲಯವತಿಯೆಂಬ ಹೆಣ್ಣು ಅರಸನಾದ ಲಕ್ಷ್ಮಣಸೇನನಿಗೆ ಸಂದೇಶವೊಂದನ್ನು ಕಳುಹಿಸಿದ ಪ್ರಸಂಗವಿದೆ. ಇದಲ್ಲದೆ 'ಸತ್ಯಭಾಮಾಕೃಷ್ಣಸಂವಾದ'ವೆಂಬುದೂ ಇದೇ ಕವಿಯ ಕೃತಿ.

ಜಯದೇವನ ಜನ್ಮಸ್ಥಳ ನಿರ್ದಿಷ್ಟವಾಗಿ ತಿಳಿದುಬರುವುದಿಲ್ಲ. ಬಂಗಾಳದ ವೀರಭೂಮಿ ಜಿಲ್ಲೆಯಲ್ಲಿ ಅಜಯಾನದಿಯ ದಡದ ಮೇಲಿರುವ ಕಿಂದುಬಿಲ್ವ (ಕೆಂದುಲಿ) ಎನ್ನುವ ಹಳ್ಳಿಯಲ್ಲಿ ಹುಟ್ಟಿದವನೆಂದು ಪ್ರಚಲಿತವಾಗಿರುವ ನಂಬಿಕೆ. ಆದರೆ ಗೀತಗೋವಿಂದಕ್ಕೆ ವ್ಯಾಖ್ಯಾನ ವೊಂದನ್ನು ಬರೆದ ಲಕ್ಷ್ಮೀಧರನು ಜಯದೇವನ ತೌರೂರು ಗುರ್ಜರದೇಶ ವೆಂದು ತಿಳಿಸುತ್ತಾನೆ. 'ಭಕ್ತಮಾಲೆ'ಯನ್ನು ಬರೆದ ಚಂದ್ರದತ್ತನು ಉತ್ಕಲದೇಶದ ಜಗನ್ನಾಥಪುರಿಯ ಬಳಿಯಿರುವ ತಿಂದು- ಬಿಲ್ವವೆಂಬ ಹಳ್ಳಿಯು ಜಯದೇವನ ಜನ್ಮಸ್ಥಳವೆಂದು ಹೇಳಿದ್ದಾನೆ. ಜಯದೇವನು ಮಿಥಿಲಾನಗರದವನೆಂದೂ ಒಂದು ನಂಬಿಕೆಯಿದೆ.

ಜಯದೇವನ ತಂದೆ ಭೋಜದೇವ, ತಾಯಿ ವಾಮಾದೇವಿ. ಈಕೆಯನ್ನು ರಾಮಾದೇವಿ, ರಮಾದೇವಿ ಎಂದೂ ಹೇಳುತ್ತಾರೆ. ಬಾಲ್ಯದ ವಿವರಗಳು ತಿಳಿದುಬರುವುದಿಲ್ಲ. ಪರಾಶರನೆಂಬ ಗೆಳೆಯನಿದ್ದನೆಂದೂ, ಅವನೊಂದಿಗೆ ಜಯದೇವನು ಊರೂರು ಅಲೆಯುತ್ತ ಮಥುರೆ, ಬೃಂದಾವನಗಳಿಗೂ ಹೋಗಿದ್ದನೆಂದೂ ವಿವರಗಳಿವೆ. ಇಲ್ಲಿನ ಪ್ರಕೃತಿ

ಸೌಂದರ್ಯವು ಅವನ ಮನಸ್ಸನ್ನು ಸೆಳೆಯಿತು; ಯಮುನಾನದಿಯ ದಂಡೆಯ ಮೇಲೆ ರಾಧಾಕೃಷ್ಣರ ರಾಸಕೇಳಿಯ ಕಥೆಗಳನ್ನು ಕೇಳಿ ಅವನಲ್ಲಿ ಕೃಷ್ಣಭಕ್ತಿಯು ಉತ್ತೇಜಿತವಾಯಿತು. ಕ್ಷೇತ್ರಪರ್ಯಟನೆಯ ಅವಸರದಲ್ಲಿ ಜಯದೇವನು ಸಮುದ್ರತೀರದ ಜಗನ್ನಾಥಪುರಿಗೆ ಬಂದು ದೇವರ ದರ್ಶನ ಮಾಡಿ, ಗುಡಿಯ ಬಳಿಯೇ ಮರವೊಂದರ ಕೆಳಗೆ ಮಲಗಿದ್ದಾಗ ಆ ಊರಿನ ಬ್ರಾಹ್ಮಣನೊಬ್ಬನು ಬಂದು ಅವನನ್ನು ಎಬ್ಬಿಸಿ, ತನ್ನ ಮಗಳನ್ನು ಅವನಿಗೆ ಕೊಟ್ಟು ಮದುವೆ ಮಾಡುವಂತೆ ತನಗೆ ಹಿಂದಿನ ರಾತ್ರಿ ಸ್ವಪ್ನಸೂಚನೆಯಾಯಿತೆಂದು ಹೇಳಿದನು. ಜಯದೇವನು ಒಡಂಬಡದಿರಲು ಬ್ರಾಹ್ಮಣನು ಮಗಳನ್ನು ಅವನ ಬಳಿಯೇ ಬಿಟ್ಟು ಹೊರಟುಹೋದನು. ಗತ್ಯಂತರವಿಲ್ಲದೆ ಜಯದೇವನು ಆಕೆಯನ್ನು ಮದುವೆಯಾದನು.

ಹೀಗೆ ದೈವದತ್ತವಾಗಿ ಒದಗಿದ ಗೃಹಿಣಿಯ ಹೆಸರು ಪದ್ಮಾವತಿ. ಜಯದೇವನಂತೆ ಅವಳೂ ಭಾವುಕಳು, ಭಕ್ತಳು, ರಸಿಕೆ. ಇಷ್ಟಲ್ಲದೆ ಆಕೆಗೆ ನಾಟ್ಯದಲ್ಲಿ ವಿಶೇಷವಾದ ವ್ಯುತ್ಪತ್ತಿಯಿದ್ದಿತು. ಜಯದೇವನು ಭಕ್ತಿಪರವಶನಾಗಿ ಹಾಡಿದಾಗ ಪದ್ಮಾವತಿಯೂ ಮೈಮರೆತು ನರ್ತನ ಮಾಡುತ್ತಿದ್ದಳಂತೆ. ಜಯದೇವನೇ ತನ್ನನ್ನು 'ಪದ್ಮಾವತೀಚರಣಚಾರಣ ಚಕ್ರವರ್ತಿ'ಯೆಂದು ಬಣ್ಣಿಸಿಕೊಂಡಿದ್ದಾನೆ. ಅವನ ಕಾವ್ಯರಚನೆಗೆ ಹೆಂಡತಿಯಿಂದ ಬಹುಮಟ್ಟಿನ ನೆರವು ದೊರಕಿತು. ಮದುವೆಯಾದ ತರುಣದಲ್ಲಿಯೇ ಜಯದೇವನು ಪದ್ಮಾವತಿಯೊಂದಿಗೆ ಕಥಂಕಂದಿ ಎಂಬ ಗ್ರಾಮದಲ್ಲಿ ತಂಗಿದ್ದಾಗ ಗೀತಗೋವಿಂದವನ್ನು ಬರೆದು ಮುಗಿಸಿದನೆಂದು ಪ್ರತೀತಿ; ಈ ಹಳ್ಳಿಯನ್ನು ಈಗ ಜಯದೇವಪುರವೆಂದೇ ವ್ಯವಹರಿಸುತ್ತಾರೆ. ಈ ಕಾವ್ಯದಿಂದ ಯಶಸ್ಸು ಗಳಿಸಿ ಲಕ್ಷ್ಮಣಸೇನರಾಜನ ಆಸ್ಥಾನದಲ್ಲಿ ಸನ್ಮಾನ್ಯನಾದನು, ಅವನ ಆಸ್ಥಾನಕವಿಯಾಗಿ ನಿಂತನು. ಕಡೆಗಾಲದಲ್ಲಿ ಕೆಂದುಲಿ (ಕಿಂದುಬಿಲ್ವ) ಹಳ್ಳಿಗೆ ಬಂದು, ಹೆಂಡತಿಯೊಂದಿಗೆ ನಿಶ್ಚಿಂತೆಯಿಂದ ಇದ್ದು ವಿಶ್ರಾಂತಿಸುಖವನ್ನು ಅನುಭವಿಸಿ ತೀರಿಕೊಂಡನು.

ಕಾವ್ಯ

ಜಯದೇವನು ಗೀತಗೋವಿಂದ ಮಾತ್ರವಲ್ಲದೆ 'ಚಂದ್ರಾಲೋಕ', 'ರತಿಮಂಜರಿ', 'ತತ್ತ್ವಚಿಂತಾಮಣಿ', 'ಕಾರಕವಾದ' ಎಂಬ ಶೃಂಗಾರ ಮತ್ತು ಶಾಸ್ತ್ರಗ್ರಂಥಗಳನ್ನೂ ರಚಿಸಿದ್ದಾನೆ. ಆದರೆ ಇವು ಅಷ್ಟಾಗಿ ಬೆಳಕಿಗೆ ಬರಲಿಲ್ಲ. 'ಪ್ರಸನ್ನರಾಘವ'ವೆಂಬ ನಾಟಕವನ್ನೂ 'ಶೃಂಗಾರಮಾಧವೀಯ'ವೆಂಬ ಚಂಪೂಗ್ರಂಥವನ್ನೂ ಬರೆದವನು ಮಹಾದೇವಪುತ್ರ-ಜಯದೇವನೆಂಬ ಇನ್ನೊಬ್ಬ ಕವಿಯೆಂದೂ ಗೀತಗೋವಿಂದವನ್ನು ಬರೆದ ಭೋಜದೇವ ಪುತ್ರ-ಜಯದೇವನಲ್ಲವೆಂದೂ ಮತ್ತೆ ಕೆಲವರು ವಾದಿಸುತ್ತಾರೆ.

ಇದು ಹೇಗಾದರೂ ಇರಲಿ; ಗೀತಗೋವಿಂದವೇ ಜಯದೇವನ ಹೆಸರನ್ನು ಸಂಸ್ಕೃತವಾಙ್ಮಯದಲ್ಲಿಯೂ ವೈಷ್ಣವಸಂಸ್ಕೃತಿಯಲ್ಲಿಯೂ ಉಳಿಸಿದ ಗ್ರಂಥ. ಇದಕ್ಕೆ ಹಲವಾರು ಸೊಗಸಾದ ವ್ಯಾಖ್ಯಾನಗಳಿವೆ. ರಾಣಾಕುಂಭನ 'ರಸಿಕಪ್ರಿಯಾ' ಎನ್ನುವ ವ್ಯಾಖ್ಯಾನ ತುಂಬ ಪ್ರಸಿದ್ಧವಾದುದು. ಇವನು ಮೇವಾಡದ ದೊರೆ, ಹದಿನಾಲ್ಕನೆಯ ಶತಮಾನದವನು. ಸಂಗೀತಶಾಸ್ತ್ರದಲ್ಲಿ ಅವನಿಗೆ ವಿಶೇಷವಾದ ವ್ಯುತ್ಪತ್ತಿಯಿದ್ದಿತು. ಈಗಿನ ಗೀತಗೋವಿಂದಪಾಠಗಳಲ್ಲಿ ಕಾಣಿಸಿರುವ ರಾಗ, ತಾಳಗಳನ್ನು ಇವನೇ ವ್ಯವಸ್ಥೆ ಮಾಡಿದನೆಂದು ಹೇಳುತ್ತಾರೆ. ಗೀತಗೋವಿಂದಕ್ಕೆ ಇನ್ನೊಂದು ವ್ಯಾಖ್ಯಾನವಾದ 'ಶ್ರುತಿರಂಜನಿ'ಯನ್ನು ಬರೆದ ಲಕ್ಷ್ಮೀಧರನು ತೆಲುಗು ದೇಶದವನು; ಕೃಷ್ಣಾಜಿಲ್ಲೆಯ ಚಿರಕೂರು ಯಜ್ಞೇಶ್ವರ ಸೋಮಯಾಜಿಯ ಮಗ. ವಿಜಯನಗರದ ಅರವೀಡುವಂಶದ ತಿರುಮಲರಾಯನು (1567-1575) ಪೆನುಗೊಂಡೆಯಲ್ಲಿ ರಾಜನಾಗಿದ್ದಾಗ ಅವನ ಆಸ್ಥಾನದಲ್ಲಿ ಲಕ್ಷ್ಮೀಧರನು ಕವಿಯಾಗಿದ್ದನೆಂದು ತಿಳಿದುಬರುತ್ತದೆ. ಕೃಷ್ಣದತ್ತನ 'ಶಶಿಲೇಖಾ', ಜಗದ್ಧರನ 'ಸಾರದೀಪಿಕಾ' ಮೊದಲಾದ ವ್ಯಾಖ್ಯಾನಗಳೂ ಬಳಕೆಯಲ್ಲಿವೆ.

ಗೀತಗೋವಿಂದವನ್ನು ಕವಿಯು 'ಶೃಂಗಾರಮಹಾಕಾವ್ಯ' ಎಂದು ಕರೆದುಕೊಂಡಿದ್ದಾನೆ. ಆಲಂಕಾರಿಕರ ದೃಷ್ಟಿಯಲ್ಲಿ ಇದು ಉತ್ಪ್ರೇಕ್ಷೆ. ಮಹಾಕಾವ್ಯಗಳಿಗಿರಬೇಕಾದ ಅಷ್ಟಾದಶಲಕ್ಷಣಗಳು ಸರಿಯಾಗಿ ಈ ಕಾವ್ಯದಲ್ಲಿಲ್ಲ. ಶೃಂಗಾರವೊಂದೇ ರಸ, ವರ್ಣನೆಗೆ ಮಧುಮಾಸವೊಂದೇ ಮಾಸ, ಯಮುನಾತೀರವನ್ನು ಬಿಟ್ಟರೆ ಕವಿಗೆ ಪ್ರಕೃತಿಯೇ ಇಲ್ಲ. ರಾಧಾಕೃಷ್ಣರ ವಿರಹ, ಮಿಲನಗಳಷ್ಟೇ ವಸ್ತು. ಹೆಚ್ಚೆಂದರೆ ಇದನ್ನು 'ಖಂಡಕಾವ್ಯ' ಎನ್ನಬಹುದು.

ಗೀತಗೋವಿಂದದಲ್ಲಿ ಇಪ್ಪತ್ತುನಾಲ್ಕು ಅಷ್ಟಪದಿಯೆನಿಸಿಕೊಳ್ಳುವ ಗೇಯಪದ್ಯಗಳು, ಹನ್ನೆರಡು ಸರ್ಗಗಳು, ಮಧ್ಯೆ ಹಲವಾರು ಸಂಯೋಜನ ಶ್ಲೋಕಗಳು ಇವೆ. ಹನ್ನೆರಡು ಸರ್ಗಗಳು ಭಾಗವತದ ಹನ್ನೆರಡು ಕಾಂಡಗಳಿಗೂ, ಇಪ್ಪತ್ತು ನಾಲ್ಕು ಅಷ್ಟಪದಿಗಳು ಗಾಯತ್ರಿಯ ಇಪ್ಪತ್ತುನಾಲ್ಕು ಅಕ್ಷರಗಳಿಗೂ ಸರಿಯಾಗಿವೆ. ಇಲ್ಲಿ ಕಥೆಯೇನೂ ಇಲ್ಲ, ಅಷ್ಟಾಗಿ ಕಥನವೂ ಇಲ್ಲ, ವಿಶಿಷ್ಟಪ್ರಸಂಗವರ್ಣನೆಯೂ ಇಲ್ಲ. ಇಡೀ ಕಾವ್ಯದಲ್ಲಿ ಮಾತನಾಡುವವರು ಮೂರೇ ಮಂದಿ—ಕೃಷ್ಣ, ರಾಧೆ, ರಾಧೆಯ ಸಖಿ. ಇವರ ಮಾತು ಸಂಭಾಷಣೆಯ ರೂಪದಲ್ಲಿಯೂ ಅಷ್ಟಾಗಿ ಇಲ್ಲ; 'ಸ್ವಗತ'ಗಳಂತೆ ಒಬ್ಬೊಬ್ಬರ ಮಾತೂ; ಪ್ರತಿಯೊಂದು ಸರ್ಗವೂ ಇವರಲ್ಲಿ ಒಬ್ಬರ ಮಾತು. ಕಾವ್ಯದ ಗಮನಕ್ರಿಯೆಗೆ ಸಹಕಾರಿಯಾಗಿ ಸರ್ಗಗಳ ನಡುವೆ ಶ್ಲೋಕಗಳುಂಟು.

ಕಾವ್ಯದ ಇಡೀ ಗತಿ ಹನ್ನೆರಡು ಸರ್ಗಗಳಲ್ಲಿ ಅಡಕವಾಗಿ ನಡೆದಿದೆ. ಒಂದೊಂದು ಸರ್ಗದ ಹೆಸರೂ ಮನೋಹರವಾಗಿದೆ: ಸಾಮೋದ ದಾಮೋದರ, ಅಕ್ಲೇಶಕೇಶವ, ಮುಗ್ಧಮಧುಸೂದನ, ಸ್ನಿಗ್ಧಮಾಧವ, ಸಾಕಾಂಕ್ಷಪುಂಡರೀಕಾಕ್ಷ, ಸೋತ್ಕಂಠವೈಕುಂಠ, ನಾಗನಾರಾಯಣ, ವಿಲಕ್ಷ್ಯಲಕ್ಷ್ಮೀಪತಿ, ಮುಗ್ಧಮುಕುಂದ, ಚತುರಚತುರ್ಭುಜ, ಸಾನಂದ ಗೋವಿಂದ, ಸುಪ್ರೀತಪೀತಾಂಬರ. ಸರ್ಗಗಳ ಅಭಿಧಾನವನ್ನು ನೋಡಿದರೆ ಕಾವ್ಯದ ಏಕೈಕನಾಯಕ ಕೃಷ್ಣ, ಅವನ ಸ್ವಭಾವ ಧೀರಲಲಿತ. ಕಾವ್ಯದ ಕ್ರಿಯೆ ಕೃಷ್ಣನ ಶೃಂಗಾರ. ಕವಿಯೇ ಹೇಳುತ್ತಾನೆ—

ಶ್ರೀವಾಸುದೇವ ರತಿಕೇಲಿ ಕಥಾ ಸಮೇತಂ ।
ಏತಂ ಕರೋತಿ ಜಯದೇವ ಕವಿಃ ಪ್ರಬಂಧಂ ॥

ಕಾಲಿದಾಸನಂಥ ಮಹಾಕವಿಗಳಲ್ಲಿ ಕಂಡುಬರುವ ನವನವೋನ್ಮೇಷ ಶಾಲಿನಿಯಾದ ಪ್ರತಿಭೆ ಜಯದೇವನಿಗಿಲ್ಲದಿದ್ದರೂ ರಸಪೋಷಣೆಯಲ್ಲಿ, ಪದವಿನ್ಯಾಸದಲ್ಲಿ, ಅರ್ಥಗಾಂಭೀರ್ಯದಲ್ಲಿ ಅವನು ಸಮರ್ಥನಾದ ಕವಿ. ಒಂದೊಂದು ಶ್ಲೋಕದಲ್ಲೂ ಅವನ ರಸಿಕತೆ ವ್ಯಕ್ತವಾಗುತ್ತದೆ. ಶ್ರುತಿಮನೋಹರವಾದ, ಅಕ್ಲಿಷ್ಟವಾದ, ಧ್ವನಿಪೂರ್ಣವಾದ ಪದಗಳನ್ನು ಮಧುರವಾಗಿ ಜೋಡಿಸುವುದರಲ್ಲಿ ಜಯದೇವನಿಗಿರುವಷ್ಟು ಜಾಣ್ಮೆ ಬೇರೊಬ್ಬ ಕವಿಗೂ ಇರದು.

ರಾಗಬದ್ಧವಾದ ವೃತ್ತಗಳನ್ನು ಹೆಣೆಯುವುದರಲ್ಲಿ ಜಯದೇವ ಚತುರ. ಕೇದಾರ, ಗುರ್ಜರೀ, ಗುಣಕರೀ, ದೇಶಾಂಕ, ಭೈರವ, ವರಾಢೀ, ವಿಭಾಸ ರಾಗಗಳಲ್ಲಿ ಸುಂದರವಾದ ಸರ್ಗಗಳನ್ನು ಗೇಯಗುಣಪ್ರಧಾನವಾಗಿ ರಚಿಸಿದ್ದಾನೆ. ಈ ದೃಷ್ಟಿಯಿಂದ ಗೀತಗೋವಿಂದ ಅತ್ಯುತ್ತಮ ಕಾವ್ಯ, ಶ್ರವ್ಯಸುಖಕ್ಕೆ ಪ್ರೌಢ ನಿದರ್ಶನ. ಈ ಗುಣ ಇರುವುದರಿಂದಲೇ ಇದನ್ನು ಸಂಗೀತರೂಪಕವನ್ನಾಗಿ ಪರಿವರ್ತಿಸಲು ಸಾಧ್ಯ. ಕಾವ್ಯಪ್ರತಿಪಾದನೆಯ ದೃಷ್ಟಿಯಿಂದ ಜಯದೇವ ಆಲಂಕಾರಿಕಲಕ್ಷಣಗಳನ್ನು ಕಟ್ಟುನಿಟ್ಟಾಗಿ ಅನುಸರಿಸಿದ್ದಾನೆ; ನಾಯಕ-ನಾಯಿಕಾಭಾವಗಳನ್ನು ಸೂಚಿಸುವಲ್ಲಿ, ಅಭಿಸಾರಿಕಾ-ವಾಸಕಸಜ್ಜಾಪಾತ್ರಗಳನ್ನು ನಿರೂಪಿಸುವಲ್ಲಿ, ವಸಂತಮಾಸವನ್ನು ವರ್ಣಿಸುವಲ್ಲಿ ಕವಿಗೆ ಲಕ್ಷಣಗ್ರಂಥಗಳ ಮೇಲಿರುವ ವಿಶ್ವಾಸ ಪ್ರಕಟವಾಗಿದೆ. ಅಂತೂ ಈ ಕಾವ್ಯದಲ್ಲಿ ಜಯದೇವನ ಪಾಂಡಿತ್ಯ, ಪ್ರತಿಭೆ, ರಸಿಕತೆ, ಭಕ್ತಿಗಳ ಸಮಾವೇಶವನ್ನು ಕಾಣಬಹುದು.

ವಸ್ತು

ಬ್ರಹ್ಮವೈವರ್ತಪುರಾಣದಲ್ಲಿ ಬರುವ ಒಂದು ಪ್ರಸಂಗವನ್ನು ಅಧಿಕರಿಸಿ ಇಡೀ ಕಾವ್ಯ ರಚಿತವಾಗಿದೆಯೆಂಬ ಸೂಚನೆ ಮಂಗಳಶ್ಲೋಕದಲ್ಲಿದೆ. ನಂದನು ರಾಧೆಗೆ ಹೇಳಿದನಂತೆ—"ಕತ್ತಲು ಕವಿದಿದೆ, ಮೋಡ ಮುಚ್ಚಿದೆ, ದಾರಿ ಕಾಣದು. ಕೃಷ್ಣ ಇನ್ನೂ ಎಳೆಯವನು, ಹೆದರಿಯಾನು. ರಾಧೇ, ನೀನೇ ಹೋಗಿ ಅವನನ್ನು ಮನೆ ಮುಟ್ಟಿಸಿ ಬಾ." ಇದು ಕವಿಸಮಯ. ನಂದನ ಮಾತಿನಂತೆ ಹೊರಟ ಕೃಷ್ಣ-ರಾಧೆಯರು ಯಮುನಾನದಿಯ ದಡದಲ್ಲೇ ನಡೆದರು; ಅವರಿಬ್ಬರ ಪ್ರಕೃತಿ, ಹೊರಗಿನ ಪ್ರಕೃತಿ, ಸಂದರ್ಭ, ಏಕಾಂತ ಎಲ್ಲವೂ ಶೃಂಗಾರಕ್ಕೆ ಒಪ್ಪಿತು. ಮನೆಯನ್ನೂ ಜಗತ್ತನ್ನೂ ಮರೆತು ಗುಟ್ಟಾಗಿ ಅವರಿಬ್ಬರೂ ಪ್ರಣಯ ಪರವಶರಾದರು. 'ರಾಧಾಮಾಧವಯೋರ್ಜಯಂತಿ ಯಮುನಾಕೂಲೇ ರಹಃ ಕೇಲಯಃ'—ಇದೇ ಕಾವ್ಯದ ವಸ್ತು.

ಕೃಷ್ಣನ ಕ್ರೀಡೆಗೆ ಅನುವಾದವಳು ರಾಧೆಯೆಂಬ ಕಲ್ಪನೆಯಲ್ಲಿ ಒಂದು ವಿಶೇಷವುಂಟು. ವಿಷ್ಣುವಿನ ಆಧಿಕ್ಯವನ್ನು ಹೇಳುವ ವಿಷ್ಣುಪುರಾಣ, ಭಾಗವತ, ಹರಿವಂಶಗಳಲ್ಲಿ ಈ ಪ್ರಸ್ತಾಪವಿಲ್ಲ; ರಾಧೆಯ ಉಲ್ಲೇಖವೂ ಇಲ್ಲ. ಈ ಹಳೆಯ ಗ್ರಂಥಗಳಲ್ಲಿ ಬರುವ ಕೃಷ್ಣನ ಗೆಳತಿ ಗೋಪಿಯನ್ನು ಬ್ರಹ್ಮವೈವರ್ತಪುರಾಣದಲ್ಲಿ ಮೊದಲಬಾರಿಗೆ ರಾಧೆಯೆಂದು ವ್ಯವಹರಿಸಿದ್ದಾರೆ. ರಾಧೆಯ ಕಲ್ಪನೆ ರಹಸ್ಯವೆಂಬ ಮಾತು ಪದ್ಮಪುರಾಣದಲ್ಲಿ ಬರುತ್ತದೆ. ಜಗತ್ತಿಗೆ ಆಧಾರರೂಪಳಾಗಿ, ಪರಮಾನಂದರೂಪಿಣಿಯಾಗಿ, ಕೃಷ್ಣನೆಂಬ ಪರಮಾತ್ಮನ ಶಕ್ತಿಸ್ವರೂಪಳು ರಾಧೆಯೆಂಬ ವ್ಯಾಖ್ಯಾನ ಬ್ರಹ್ಮವೈವರ್ತದಲ್ಲಿ ಮೊದಲಾಗುತ್ತದೆ.

ರಾಧೆ ರಾಸಕ್ರೀಡಾಧಿದೇವಿಯಾದ ಸ್ತ್ರೀ ಮಾತ್ರವಲ್ಲ, ವಿಶ್ವದ

ಉಪಾದಾನಕಾರಣ; ಪರಮಾತ್ಮ ಅಕ್ಕಸಾಲೆಯಂತೆ, ರಾಧೆ ಚಿನ್ನದಂತೆ. ಚಿನ್ನವಿಲ್ಲದೆ ಅಕ್ಕಸಾಲೆ ಓಲೆ ಮಾಡುವುದು ಹೇಗೆ? ಸೃಷ್ಟಿಗೂ ಪಾಲನೆಗೂ ರಾಧೆ ಅನಿವಾರ್ಯಳು. ಕೃಷ್ಣ ಪುರುಷನಾದರೆ ರಾಧೆ ಪ್ರಕೃತಿ. ಅವರಿಬ್ಬರ ಸಂಯೋಗವಿಶೇಷದಿಂದ ಇಡೀ ಪ್ರಪಂಚ.

ಈ ತಾತ್ತ್ವಿಕವಾದ ಅಂತರಾರ್ಥವೇ ಗೀತಗೋವಿಂದದ ಜೀವನಾಡಿ ಎಂದು ಹೇಳುವವರಿದ್ದಾರೆ. ಮೇಲೆ ಶೃಂಗಾರಪ್ರಧಾನವಾದ ಕಾವ್ಯವೆಂದು ಕಂಡರೂ, ಅನುಚಿಂತನೆ ಮಾಡಿದಲ್ಲಿ ವೇದಾಂತದ ಪ್ರಕರಣಗ್ರಂಥವಾಗಬಲ್ಲದು ಎಂದು ಅವರ ವಾದ. ಜೀವಾತ್ಮ-ಪರಮಾತ್ಮರ ದ್ವೈತಭಾವದಿಂದ ಸಾಂಸಾರಿಕ ದುಃಖ; ವಿವೇಕದಿಂದ ಸಂಯೋಗವಾದರೆ ಅದು ದುಃಖನಿವೃತ್ತಿ.

ಈ ಸಿದ್ಧಾಂತವನ್ನು ಹೇಳಲು ರಾಧಾಕೃಷ್ಣರ ವಿರಹ, ಪ್ರೇಮದಿಂದ ಅವರ ಪುನರ್ಮಿಲನವಾದ ಪ್ರಸಂಗವನ್ನು ಕವಿ ಉಪಯೋಗಿಸಿಕೊಂಡಿದ್ದಾನೆ. ಆದರೆ ಈ ಮಾರ್ಮಿಕವಾದ ಅರ್ಥದಿಂದ ಕಾವ್ಯಗುಣಕ್ಕೆ ಕುಂದು ಬಂದಿಲ್ಲ. ಭಕ್ತರಂತೆ ರಸಿಕರೂ ಆನಂದ ಪಡುವಂಥ ಗ್ರಂಥ ಇದು.

ವಿರಹಾರಂಭ

ಮೊದಲ ಸರ್ಗದ ಮೊದಲಲ್ಲಿಯೇ ದಶಾವತಾರಗಳನ್ನು ಮಾಡಿದ ಕೃಷ್ಣನಿಗೆ ನಮಸ್ಕ್ರಿಯೆ ಇದೆ; 'ಜಯ ಜಗದೀಶ ಹರೇ' ಎಂಬ ಪಲ್ಲವಿಯಿರುವ ದಶಾವತಾರವರ್ಣನೆಯಿದೆ.

ವಿರಹಿಜನರಿಗೆ ದುರಂತವಾದ ವಸಂತಮಾಸದಲ್ಲಿ ರಾಧಾ-ಕೃಷ್ಣರ ವಿರಹವೇ ಆರಂಭ ಪ್ರಸಂಗ. ಮುನಿಗಳ ಮನಸ್ಸನ್ನೂ ಮೋಹನ ಮಾಡುವ ಈ ಮಾಸದಲ್ಲಿ, ಶೃಂಗಾರದಿಂದ ಉದ್ದೀಪ್ತವಾದ ಬೃಂದಾವನದ ಪ್ರಕೃತಿಯ ರಮಣೀಯತೆಯಲ್ಲಿ ಕೃಷ್ಣ ಯುವತಿಯರೊಂದಿಗೆ ಆಡುತ್ತಿದ್ದಾನೆ. ಅತ್ತ ಪ್ರಣಯದಿಂದ ಉತ್ತೇಜಿತಳಾದ ರಾಧೆ ವಿರಹದ ವ್ಯಥೆಯಲ್ಲಿ ಕೃಷ್ಣನಿಗೆ ಆಹ್ವಾನದ ಸಂದೇಶ ಕಳುಹಿಸುವ ಸನ್ನಾಹದಲ್ಲಿದ್ದಾಳೆ. 'ಅನೇಕ ನಾರೀಪರಿರಂಭ ಸಂಭ್ರಮ'ದಲ್ಲಿದ್ದ ಕೃಷ್ಣನಿಗೆ ಸಖಿ ಈ ಸಂದೇಶವನ್ನೊಯ್ಯುತ್ತಾಳೆ.

ಪ್ರಕೃತಿಯ ವೈಭವದಲ್ಲಿ ಮೈಮರೆತ ದಾಮೋದರನ ಆಮೋದ ಪ್ರಥಮಸರ್ಗದ ವಸ್ತು. 'ಕಿಂಚ ಸ್ನಿಗ್ಧರಸಾಲ ಮೌಲಿ ಮುಕುಲಾನ್ಯಾಲೋಕ್ಯ ಹರ್ಷೋದಯಾತ್ ಉನ್ಮೀಲಂತಿ ಕುಹೂಃ ಕುಹೂರಿತಿ ಕಲೋತ್ತಾಲಾಃ ಪಿಕಾನಾಂ ಗಿರಃ'. ಮುಂದಿನ ಸರ್ಗದಲ್ಲಿ ರಾಧೆಯ ವಿರಹವ್ಯಥೆ ಹೆಚ್ಚುತ್ತದೆ. ಕೃಷ್ಣನಲ್ಲಿಯ ಪ್ರೇಮ, ಅವನ ಗೆಳತಿಯರಲ್ಲಿ ಈರ್ಷ್ಯೆ ಇವುಗಳ ಸಮರದಲ್ಲಿ ರಾಧೆ ಸೊರಗುತ್ತಾಳೆ. ಕ್ರೋಧದಲ್ಲಿ ಕೃಷ್ಣನನ್ನು ಮರೆಯುವ ತವಕ ಇದ್ದರೂ ದೃಢವಾದ ಪ್ರೇಮದಿಂದ ಅದು ಸಾಧ್ಯವಾಗದು. ರಾಧೆಯು ಕೃಷ್ಣನ ಮೋಹಕಶಕ್ತಿಯನ್ನು ನೆನೆದು ನೆನೆದು ಪರಿತಪಿಸುತ್ತಾಳೆ.

ಇತ್ತ ಕೃಷ್ಣನಿಗೂ ರಾಧೆಯ ಕಾತರ ಆರಂಭವಾಗಿದೆ. ಗೆಳತಿಯರಿಂದ ತಪ್ಪಿಸಿಕೊಂಡು ದೂರದ ಕುಂಜದಲ್ಲಿ ಒಂಟಿಯಾಗಿ ರಾಧೆಯ ಅನ್ವೇಷಣೆಯಲ್ಲಿ

ತೊಡಗಿದ್ದಾನೆ. ರಾಧೆ ಏನು ಕೋಪಗೊಂಡಿದ್ದಾಳೋ? ಎಲ್ಲಿ ಹೋದಳೋ? ಉದ್ವೇಗದಲ್ಲಿ ಏನಾದಳೋ?—ಎಂದು ಕೃಷ್ಣನ ಆತಂಕ, ಅವಳ ಆಲಿಂಗನಕ್ಕೆ ಅವನ ಆತುರ. ಹೀಗೆ ಕೃಷ್ಣ ರಾಧಾನುರಾಗದಿಂದ ಕುದಿಯುತ್ತಿದ್ದಾಗ ರಾಧೆಯ ಸಖಿ ಸಂದೇಶವನ್ನು ತರುತ್ತಾಳೆ—

ಮಾಧವ, ಮನಸಿಜವಿಶಿಖಭಯಾದಿವ
ಭಾವನಯಾ ತ್ವಯಿ ಲೀನಾ,
ಸಾ ವಿರಹೇ ತವ ದೀನಾ

ರಾಧೆಯ ವಿರಹವರ್ಣನೆಯಿಂದ ಸಾಂತ್ವನಗೊಂಡ ಕೃಷ್ಣ ರಾಧೆಯನ್ನು ಅಲ್ಲಿಗೇ ಕರೆತರಲು ಸಖಿಯನ್ನು ಕಳುಹಿಸುತ್ತಾನೆ. ಸಖಿ ಹೋಗಿ ರಾಧೆಯ ಮುಂದೆ ಕೃಷ್ಣನ ವಿರಹವ್ಯಥೆಯನ್ನು ವಿವರಿಸಿದರೂ, ವಿರಹದಿಂದ ಬಳಲಿದ್ದ ರಾಧೆ ಅಲ್ಲಿಂದ ಏಳಲೂ ಅಶಕ್ತಳಾಗಿದ್ದಳು. ಕೃಷ್ಣನಲ್ಲೇ ಅನುರಕ್ತಳಾದರೂ ಕೃಷ್ಣನ ಬಳಿ ಹೋಗುವಷ್ಟು ಸಾಮರ್ಥ್ಯವಿರಲಿಲ್ಲ; ವಿಪ್ರಲಂಭ ಅಷ್ಟು ಕಠೋರವಾಗಿದ್ದಿತು. ತನ್ನ ಲತಾಗೃಹದಲ್ಲೇ ಕೃಷ್ಣ ತನ್ನನ್ನು ಸಂಧಿಸಲೆಂಬ ಬಯಕೆ ರಾಧೆಗಿತ್ತೆಂದು ವ್ಯಾಖ್ಯಾನಕಾರರ ಸೂಚನೆ. ಅಂತೂ ವಿಷಣ್ಣಳಾಗಿ ಸಖಿ ಕೃಷ್ಣನ ಬಳಿಗೇ ಮತ್ತೆ ಹೋಗಿ, ರಾಧೆಯ ದೀನಸ್ಥಿತಿಯನ್ನು ಬಣ್ಣಿಸಿದಳು: 'ನಾಥ ಹರೇ, ಸೀದತಿ ರಾಧಾ ವಾಸಗೃಹೇ'.

ಕೃಷ್ಣನ ವಿರಹದಿಂದ ರಾಧೆಗೆ ಒದಗಿದ ವೇದನೆ ದಾರುಣವಾದುದು, ತೀವ್ರವಾದುದು ಎನ್ನುವುದನ್ನು ರಾಧೆಯ ಸಖಿಯ ಮಾತು ತೋರಿಸುತ್ತದೆ. ಒಡತಿಯ ಸ್ಥಿತಿಯನ್ನು ಕಂಡು ಸಖಿಯ ಮನಸ್ಸೂ ಮುರಿದಿದ್ದಿತು. ಇದನ್ನು ಕವಿಯು ಚಾತುರ್ಯದಿಂದ ಸ್ಪಷ್ಟಪಡಿಸಿದ್ದಾನೆ; ಸಖಿಯ ಮಾತುಗಳಲ್ಲಿ ಬಾಳಿನ ದುಗುಡವನ್ನೆಲ್ಲ ತುಂಬಿದ್ದಾನೆ. ರಾಧೆಯಂಥ ನಾಯಕಿಯ ಸಖ್ಯದ ಸವಿಯನ್ನುಂಡವಳ ಹೃದಯದ ಸಂಸ್ಕಾರ ಇಷ್ಟು ಸಂಪನ್ನವಾಗಿದ್ದಿತಾದರೆ ಆಶ್ಚರ್ಯವಿಲ್ಲ. ಪಾತ್ರಪೋಷಣೆಯ ದೃಷ್ಟಿಯಿಂದ ನೋಡುವುದಾದರೆ, ಕವಿಯು ಹೆಸರಿಲ್ಲದ ಈ ಸಖಿಯನ್ನೂ ಕಡೆಗಾಣಿಸಿಲ್ಲ. ರಾಧಾಕೃಷ್ಣರ ವ್ಯಕ್ತಿತ್ವಗಳ ಔನ್ನತ್ಯ, ಗಾಂಭೀರ್ಯ, ಮಾಧುರ್ಯಗಳು ಕೊಂಚಮಟ್ಟಿಗೆ ಈಕೆಯಲ್ಲಿಯೂ ಕಾಣುತ್ತವೆ.

ವಿರಸಪ್ರಸಂಗ

ಕೃಷ್ಣನ ಪ್ರತೀಕ್ಷೆಯಲ್ಲಿದ್ದ ರಾಧೆಯ ವ್ಯಥೆಯು ಕೃಷ್ಣ ಬಂದಾನೆಂಬ ಆಶಯದಿಂದ ಸ್ವಲ್ಪ ಶಮನವಾದರೂ ಕೃಷ್ಣ ಬರದೇ ಇದ್ದಾಗ ದಾವಾನಲದಂತೆ ಹಬ್ಬಿತು. ದಿನವೆಲ್ಲ ಕಾದರೂ ಕೃಷ್ಣ ಬರಲೊಲ್ಲ; ಪ್ರತೀಕ್ಷೆಯಲ್ಲೇ ಚಂದ್ರೋದಯವೂ ಆಯಿತು. ಬೃಂದಾವನವನ್ನೆಲ್ಲ ಬೆಳಗುವ ತಿಳಿದಿಂಗಳ ಕವಿಯ 'ದಿಕ್ ಸುಂದರೀ ವದನ ಚಂದನ ಬಿಂದುರಿಂದು' ಎಂದು ವರ್ಣಿಸಿದ್ದಾನೆ.

ಮೊದಲೇ ಮಧುಮಾಸ; ಆದರ ಮೇಲೆ ಪ್ರಣಯದ ರಭಸ; ಪ್ರಿಯನ ಪ್ರತೀಕ್ಷೆ, ಕಾತರ; ಅಷ್ಟರಲ್ಲಿ ಈ ಚಂದ್ರೋದಯ! ವಿರಹದ ವೇದನೆ ವಿಪುಲವಾಗಿ ಹಬ್ಬಲು ಇನ್ನೇನು ಬೇಕು? ರಾಧೆಗೆ ತನ್ನ ಸೌಂದರ್ಯ ವಿಫಲವೆನಿಸಿತು.

ಕಾಮ ಇವಳನ್ನು ಹೀಗೆ ಹಿಂಡುತ್ತಿರುವಲ್ಲಿ ಇನ್ನಾವಳೋ ಕಾಮಿನಿ ಕೃಷ್ಣನ ಗಾಢಾಲಿಂಗನದಲ್ಲಿ ಇರಬಹುದೆಂಬ ಸಂಶಯ ಅವಳಿಗೆ ಹುಚ್ಚು ಹಿಡಿಸಿತು. ತಾನು ಹಂಬಲಿಸಿ ಹುಡುಕಿದ ಹೃದಯೇಶ್ವರ ಹೀಗೆ ತನ್ನನ್ನು ನಿರ್ಲಕ್ಷ್ಯ ಮಾಡಿದಮೇಲೆ ಜೀವಿತಕ್ಕಿಂತ ಮರಣವೇ ಲೇಸೆಂಬ ಯೋಚನೆ ಹಾಯಿತು.

ಹೀಗೆ ಬಳಲುತ್ತಿದ್ದಾಗ ರಾಧೆ ದೂರದಲ್ಲಿ ಕೃಷ್ಣನಿಲ್ಲದೆ ಸಖಿ ಒಬ್ಬಳೇ ಬರುವುದನ್ನು ಕಂಡಳು. ಹೃದಯವೇ ಜಗ್ಗಿಂದಿತು. ಸಖಿಯೂ ಅಧೋಮುಖಿಯಾಗಿ ಖಿನ್ನಳಂತೆ ಕಾಣುತ್ತಿದ್ದಾಳೆ. ಕಾರಣ ಏನಿದ್ದೀತು? 'ರತಿರಣಧೀರ'ನಾದ ವನಮಾಲಿ ನಿಜವಾಗಿ ಅನ್ಯಮನಸ್ಕನಾದನೆ? ಅವನ ಪರಿರಂಭಣವನ್ನೂ ಚುಂಬನವನ್ನೂ ಪಡೆದ ಭಾಗ್ಯಶಾಲಿನಿ

ಯಾರಿರಬಹುದು? ತನ್ನ ಯೋಚನೆ ಕೃಷ್ಣನಿಗೆ ಇಷ್ಟೂ ಇಲ್ಲವೆ? ರಾಧೆಯ ಉದ್ವೇಗವನ್ನು ಕವಿ ತುಂಬ ರಸವತ್ತಾಗಿ ಚಿತ್ರಿಸಿದ್ದಾನೆ. ಬೀಸುವ ಗಾಳಿಗೆ ತನ್ನ ದುಃಖವನ್ನು ಆಕೆ ತೋಡಿಕೊಳ್ಳುತ್ತಾಳೆ—

ಮನೋಭವಾನಂದನ ಚಂದನಾನಿಲ ।
ಪ್ರಸೀದ ರೇ ದಕ್ಷಿಣ ಮುಂಚ ವಾಮತಾಮ್ ॥
ಕ್ಷಣಂ ಜಗತ್ಪ್ರಾಣ ವಿಧಾಯ ಮಾಧವಂ ।
ಪುರೋ ಮಮ ಪ್ರಾಣಹರೋ ಭವಿಷ್ಯಸಿ ॥

ರಾತ್ರಿ ಹೇಗೋ ಕಳೆಯಿತು. ಬೆಳಕು ಹರಿಯುವಲ್ಲಿ ರಾಧೆಯ ಮುಂದೆ ಕೃಷ್ಣ 'ಅನುನಯವಚನ'ವನ್ನು ಹೇಳುತ್ತ ನಿಂತಿದ್ದಾನೆ. ಅವನಿಗಾಗಿ ಹಾತೊರೆದು ಪರಿತಪಿಸಿ ಕಂಗಾಲಾಗಿದ್ದ ರಾಧೆಗೆ ಈಗ ಅವನಲ್ಲಿ ಅಸೂಯೆ, ಕ್ರೋಧ. ಸಿಟ್ಟಿನಿಂದ "ಎಲೈ ವಂಚಕ, ಇಲ್ಲಿ ಬಂದುದೇಕೆ? ನೀನು ರಾತ್ರಿಯನ್ನು ಕಳೆದ ಕಾಮಿನಿಯ ಬಳಿಗೇ ಹೋಗು! ಇಲ್ಲಿ ನಿಲ್ಲಬೇಡ, ಹೊರಡು. ನಿನ್ನದು ಕಠೋರ ಸ್ವಭಾವ! ಎಳೆತನದಲ್ಲೇ ಪೂತನಿಯನ್ನು ಕೊಂದ ನಿನಗೆ ಕಾರುಣ್ಯವೆಲ್ಲಿ ಬಂತು? ನನ್ನ ಹೃದಯವನ್ನು ಕದ್ದು ಬೇರೊಬ್ಬಳ ಚುಂಬನಕ್ಕೆ ಹೋಗುವ ದುರುಳ!" ಎಂದು ಮುಂತಾಗಿ ಮೂದಲಿಸುತ್ತಾಳೆ. ಕೃಷ್ಣನು ಮ್ಲಾನವದನನಾಗಿ ನಿಂತಿದ್ದಾನೆ.

ರಾಧೆಯದು ಮಾಯಾಮುನಿಸೆಂದು ಕೃಷ್ಣನಿಗೆ ತಿಳಿಯದೆ? ಪ್ರೇಮದ ಆಗ್ರಹವಿಲ್ಲದ ಕೋಪದೆ ಕಾವು ಇರದೆಂದು ಕೃಷ್ಣನಿಗೆ ಸಮಾಧಾನ. ಅವನು ಅನ್ಯಮನಸ್ಕನಾಗಿದ್ದಾಗ ರಾಧೆ ಅನನ್ಯಮನಸ್ಕಳಾಗಿದ್ದಳು; ಆಕೆಯ ಹೃದಯದಲ್ಲಿ ಕೃಷ್ಣನಲ್ಲದೆ ಬೇರೊಬ್ಬನಿಗೆ ಎಡೆಯಿಲ್ಲ. ಕೃಷ್ಣನೇನೋ ರತಿರಣಧೀರ; ಆದರೆ ರಾಧೆ ವಿರಹಭೀರು. ಇದನ್ನು ಅರಿತು ಕೃಷ್ಣ ಸಿಟ್ಟಿಗೆ ಪ್ರತಿಯಾಗಿ ಸಿಟ್ಟನ್ನು ಪ್ರಕಟಿಸಲಿಲ್ಲ. ಅವಳ ಕ್ರೋಧದ ಮೂಲದಲ್ಲಿ ಪ್ರೇಮವಿದ್ದುದಷ್ಟೇ ಅವನಿಗೆ ಗ್ರಾಹ್ಯವೆನಿಸಿತು. ತನ್ನದೇ ತಪ್ಪೆಂದು ಒಪ್ಪಿಕೊಂಡು ಕೃಷ್ಣ ಅವಳ ಮುಂದೆ ನಿಂತನು.

ಪುನರ್ಮಿಲನ

ಈ ಪ್ರಣಯಕಲಹದ ಪರಿಹಾರಕ್ಕೆ ಸಖಿಯೇ ಮುಂದೆ ಬರುತ್ತಾಳೆ. ರಾಧೆಯನ್ನು ತಡೆಹಿಡಿದು ಅವಳಿಗೆ ಬುದ್ಧಿಹೇಳುತ್ತ—

ಹರಿರಭಿಸರತಿ ವಹತಿ ಮಧುಪವನೇ ।
ಕಿಮಪರಮಧಿಕಸುಖಂ ಸಖಿ ಭವನೇ ॥
ಮಾಧವೇ ಮಾ ಕುರು ಮಾನಿನಿ ಮಾನಮಯೇ ।
ತಾಲಫಲಾದಪಿ ಗುರುಮತಿಸರಸಂ ॥

ಎಂದಾಗ ರಾಧೆ ನಸುನಗುತ್ತಾ ಲಜ್ಜೆಯಿಂದ ಮುಖ ತಿರುಗಿಸಿ ಕೃಷ್ಣನ ಕಡೆ ಓರೆನೋಟ ಬೀರುತ್ತಾಳೆ. ಅವಳ ಅಪಾಂಗದೃಷ್ಟಿಯಿಂದ ಉತ್ತೇಜಿತನಾದ ಕೃಷ್ಣನು ಪ್ರಿಯವಚನಗಳ ಹೊಳೆಯನ್ನೇ ಹರಿಸಲು ಮೊದಲಿಡುತ್ತಾನೆ. "ನೀನು ನನ್ನಲ್ಲಿ ನಿಜವಾಗಿ ಕೋಪಗೊಂಡಿದ್ದೇ ಆದರೆ ನಿನ್ನ ನಖಗಳಿಂದ ನನ್ನನ್ನು ಪರಿಚಿಬಿಡು, ನಿನ್ನ ತುಟಿಗಳಿಂದ ನನ್ನ ಹಲ್ಲನ್ನು ಮುರಿದುಬಿಡು; ನಿನ್ನ ತೋಳುಗಳ ಬಂಧನದಿಂದ ನನ್ನ ಮೂಳೆಗಳನ್ನು ಮುರಿ!"—ಇದು ಪ್ರಣಯದ ಪ್ರತೀಕಾರ! ಮತ್ತೆ ಕೃಷ್ಣ ಹೇಳುತ್ತಾನೆ—

ತ್ವಮಸಿ ಮಮ ಜೀವನಂ, ತ್ವಮಸಿ ಮಮ ಭೂಷಣಂ ।
ತ್ವಮಸಿ ಮಮ ಭವಜಲಧಿ ರತ್ನಂ ॥
ಭವತು ಭವತೀಹ ಮಯಿ ಸತತಮನುರೋಧಿನೀ ।
ತತ್ರ ಮಮ ಹೃದಯಮತಿಯತ್ನಂ ॥

ಹಲವಾರು ಚಾಟುವಚನಗಳಿಂದ ಕೃಷ್ಣನು ರಾಧೆಯನ್ನು ಸಮಾಧಾನಗೊಳಿಸಿ ತನ್ನ ಲತಾಕುಂಜಕ್ಕೆ ಬರುವಂತೆ ಅವಳನ್ನು ಆಹ್ವಾನಿಸಿ

ಹೊರಡುತ್ತಾನೆ. ಕೃಷ್ಣ ಕಣ್ಮರೆಯಾದೊಡನೆ ಸಖಿಯು ರಾಧೆಯನ್ನು ಸಜ್ಜುಗೊಳಿಸಿ ಸಂಜೆಯಂದು ಪ್ರದೋಷ ಹರಡುತ್ತಿರುವಲ್ಲಿ ಕೃಷ್ಣನ ಲತಾಕುಂಜಕ್ಕೆ ಕರೆದೊಯ್ಯುತ್ತಾಳೆ.

ಲಜ್ಜೆಯಿಂದ ವಿವರ್ಣವಾದರೂ 'ರತಿರಭಸ ಹಸಿತವದನೆ'ಯಾದ ರಾಧೆಯನ್ನು ಮಾಧವನ ಸಮೀಪದಲ್ಲಿ ಬಿಟ್ಟಾಗ ಸಖಿ ಕಂಡದ್ದು ಕೃಷ್ಣನ ಮುಖದಲ್ಲಿ ಸುಖವಾದ ಉದ್ವೇಗ:

ರಾಧಾವದನವಿಲೋಕನವಿಕಸಿತವಿವಿಧವಿಕಾರವಿಭಂಗಂ ।
ಜಲನಿಧಿಮಿವ ವಿಧುಮಂಡಲದರ್ಶನ ತರಲಿತ ತುಂಗ ತರಂಗಂ ॥

ಚತುರೆಯಾದ ಸಖಿ ಅವರಿಬ್ಬರನ್ನೂ ಸಂದರ್ಭೋಚಿತವಾದ ಏಕಾಂತಕ್ಕೆ ಬಿಟ್ಟು ಓರೆಯಾಗುತ್ತಾಳೆ.

ಪ್ರಶಸ್ತಿ

ಕಾವ್ಯವು ಶೃಂಗಾರಪ್ರಧಾನವಾದದ್ದು; ವಸ್ತು ಪ್ರಣಯ; ಕವಿಯಂತೂ ರಸಿಕ; ತಾತ್ತ್ವಿಕವಾದ ಅರ್ಥ ಹೇಗೂ ಸಿದ್ಧ. ಅಂದಮೇಲೆ ಉಕ್ತಿಯಲ್ಲಿ ಅಶ್ಲೀಲ ಬರದಿರುವುದು ಸಾಧ್ಯವಿಲ್ಲ. ಗೀತಗೋವಿಂದದಲ್ಲಿ ಅಸಂಭಾವ್ಯ, ಅನುಚಿತ ಎನ್ನಬಹುದಾದ ಭಾವನೆಗಳೂ ಮಾತುಗಳೂ ಅಲ್ಲಲ್ಲಿ ಬರುವುದುಂಟು. ಅದನ್ನು ಕಾವ್ಯದೋಷ ಎನ್ನಲಾಗದು. ಕವಿಯೇ ತನ್ನನ್ನು 'ಸಂದರ್ಭ ಶುದ್ಧಾಂ ಗಿರಂ ಜಾನೀತೇ ಜಯದೇವ ಏವ' ಎಂದು ಹೊಗಳಿಕೊಂಡಿದ್ದಾನೆ. ಅಲ್ಲದೆ ಕಾಮಪ್ರಚೋದನೆಯೇ ಪ್ರಯೋಜನವಾಗಿ ರಚಿಸಿದ ಕಾವ್ಯ ಅಲ್ಲ ಇದು; ಕವಿಯು ರಸಿಕನೂ ಹೌದು, ಕೃಷ್ಣಭಕ್ತನೂ ಹೌದು. ತನ್ನ ಕಾವ್ಯದ ವಿಚಾರವಾಗಿ ಅವನ ಮಾತು—

ಯದಿ ಹರಿಸ್ಮರಣೇ ಸರಸಂ ಮನೋ ।
ಯದಿ ವಿಲಾಸಕಲಾಸು ಕುತೂಹಲಂ ॥
ಮಧುರ ಕೋಮಲಕಾಂತ ಪದಾವಲೀಂ ।
ಶೃಣು ತದಾ ಜಯದೇವಸರಸ್ವತೀಂ ॥

ಹರಿಸ್ಮರಣೆಯೇ ಕಾವ್ಯದ ಪರಮ ಪ್ರಯೋಜನ. ಶೃಂಗಾರವು 'ಅವಾಂತರ-ಪ್ರಯೋಜನ.' ಸರ್ಗದ ಅಂಕಿತಶ್ಲೋಕಗಳಲ್ಲೂ 'ಶ್ರೀ ಜಯದೇವೇ ಕೃತಹರಿಸೇವೇ' ಇತ್ಯಾದಿಯಾಗಿ ಭಗವದ್ಭಕ್ತಿಯನ್ನೇ ಮುಖ್ಯಾರ್ಥವೆಂದು ಹೇಳಿದ್ದಾನೆ.

ಜಯತು ಪದ್ಮಾವತೀರಮಣ ಜಯದೇವ ಕವಿ ಭಾರತೀ ಭಣಿತಂ

ಕೃಷ್ಣಕರ್ಣಾಮೃತ

ಕೃಷ್ಣಕರ್ಣಾಮೃತ

ಪ್ರವೇಶ

ಕಾವ್ಯ

ವಸ್ತು

ವೈಶಿಷ್ಟ್ಯ

ರಾಧಾಮಾಧವರಾಸ

ಪ್ರವೇಶ

'ಕೃಷ್ಣಕರ್ಣಾಮೃತ'ದ ಕವಿಯು ಲೀಲಾಶುಕ. ಈ ಹೆಸರು ಗ್ರಂಥದಲ್ಲಿಯೇ ಬರುತ್ತದೆ. ಇವನನ್ನು ಸಾಮಾನ್ಯವಾಗಿ ಕೃಷ್ಣಲೀಲಾಶುಕ ಎಂದು ವ್ಯವಹರಿಸುವುದೂ ಉಂಟು. ಕವಿಯ ಕಾಲ 11ನೆಯ ಶತಮಾನ ಇದ್ದೀತು; 13 ಎಂದು ಹೇಳುವವರೂ ಇದ್ದಾರೆ; ಅಂತೂ 'ಗೀತಗೋವಿಂದ'ದ ರಚನಕಾರ ಜಯದೇವನಿಗಿಂತ ಮುಂಚಿನವನು; ಜಯದೇವನ ಪೂರ್ವಜನ್ಮ ಲೀಲಾಶುಕ ಎಂದೇ ಭಕ್ತರ ಶ್ರದ್ಧೆ. ಇವನ ತಾಯಿನಾಡಿನ ವಿಚಾರ ವಾದಗ್ರಸ್ತವಾಗಿದೆ. ಬಂಗಾಳ, ಒರಿಸ್ಸ, ತೆಲಂಗಾಣ, ಕೇರಳ ಈ ಪ್ರಾಂತ್ಯಗಳ ವೈಷ್ಣವರಿಗೆ ಅವನು ತಮ್ಮವನೇ! ಆದರೆ ಅವನು ಕೇರಳದವನು ಎನ್ನಲು ಆಧಾರಗಳು ಹಲವು.

ಕೇರಳದ ಭಾರತೀನದಿಯ ದಂಡೆಯ ಮೇಲಿನ ಮುಕ್ತಿಸ್ಥಳ (ಮುಕ್ಕುತ್ತಲೈ) ಎಂಬುದು ಅವನ ವಾಸಸ್ಥಳವಾಗಿತ್ತೆಂದೂ ದಾಮೋದರ ನೀಲೀದೇವಿಯರು ಅವನ ತಂದೆತಾಯಿಯರೆಂದೂ, ಈಶಾನದೇವ (ಸೋಮಗಿರಿ) ಎಂಬ ಯತಿ ಅವನ ಶಿಕ್ಷಾಗುರುವೆಂದೂ, ಭಾಗವತದ ವ್ಯಾಖ್ಯಾನಕಾರ ರಾಘವೇಶಾನ ಅವನ ಮಿತ್ರನೆಂದೂ ಅಲ್ಲಲ್ಲಿ ಉಲ್ಲೇಖ ಬರುತ್ತದೆ. ಆದಿಶಂಕರರ ಶಿಷ್ಯ ಪದ್ಮಪಾದಾಚಾರ್ಯರು ಇವನ ಗುರುವೆಂದು ಒಂದು ಅಭಿಪ್ರಾಯ. ಪರಂಪರೆಯಲ್ಲಂತೂ ಲೀಲಾಶುಕ ವೈಷ್ಣವನಲ್ಲ; ಅವನೇ ಕರ್ಣಾಮೃತದ ದ್ವಿತೀಯಾಶ್ವಾಸದಲ್ಲಿ "ಶೈವಾ ವಯಂ, ನ ಖಲು ತತ್ರ ವಿಚಾರಣೀಯಂ" ಎಂದು ಹೇಳಿಕೊಂಡಿದ್ದಾನೆ. ಕಾವ್ಯದ ವ್ಯಾಖ್ಯಾನಕಾರರಾದ ಪಾಪಯಲ್ಲಯ ಸೂರಿಯೆನ್ನುವರು ಅದಕ್ಕೆ ಅದ್ವೈತಪರವಾದ ಅರ್ಥವನ್ನೇ ಮಾಡಿದ್ದಾರೆ.

ಉತ್ತರದೇಶದಲ್ಲಿ ಲೀಲಾಶುಕನಿಗೆ 'ಬಿಲ್ವಮಂಗಳ' ಎಂಬ ಹೆಸರು ಪ್ರಚುರವಾಗಿದೆ. ಇದು ಮಲೆಯಾಳದ 'ವಿಲ್ಲಮಂಗಳ' ಎಂಬುದರ ಸಂಸ್ಕೃತ ರೂಪ; 'ವಿಲ್' ಅಥವ 'ವಿಲ್ಲು' ಎಂದರೆ ಬಿಲ್ಲು. 'ಕೋದಂಡಮಂಡಲ' ಎನ್ನುವ ಉಲ್ಲೇಖ ಲೀಲಾಶುಕನ ಶಿಷ್ಯ ದುರ್ಗಾಪ್ರಸಾದಯತಿಯ ಗೋವಿಂದಾಭಿಷೇಕ-ವ್ಯಾಖ್ಯಾನದಲ್ಲಿ ಬರುತ್ತದೆ. ತಿರುಚ್ಚೂರಿನ ನಟುವಲ್ ಮಠದ ಆದಿಗುರು ಲೀಲಾಶುಕನೆಂದು ಪ್ರತೀತಿ; ಅಲ್ಲಿನ ಯತಿಗಳಿಗೆ ವಿಲ್ಲಮಂಗಳಂಯತಿಗಳೆಂದೇ ವ್ಯವಹಾರವಿದೆ. ಅಲ್ಲದೆ ತಿರುವನಂತಪುರದ ಪದ್ಮನಾಭದೇವಾಲಯವನ್ನೂ ಲೀಲಾಶುಕನೇ ಸ್ಥಾಪಿಸಿದನಂತೆ; ಇಂದಿಗೂ ಅಲ್ಲಿನ ಪೂಜಾಪದ್ಧತಿಯಲ್ಲಿ ದಿನಂಪ್ರತಿ 'ವಿಲ್ಲಮಂಗಳಂ ಸ್ವಾಮಿಯರ್' ಒಬ್ಬರು ಬಂದು ಏಕಾಂತಸೇವೆ ಮಾಡಿಹೋಗುತ್ತಾರೆ. ಲೀಲಾಶುಕನು ಸಂನ್ಯಾಸಿಯಾದಮೇಲೆ ಅವನಿಗೆ 'ವಿಲ್ವಮಂಗಳ' ಎಂಬುದು ಆಶ್ರಮನಾಮ ಇದ್ದಿರಬಹುದು; ಅಥವಾ ಲೀಲಾಶುಕನಿಗೆ 'ವಿಲ್ಲಮಂಗಳಂ' ಮನೆತನದ ಹೆಸರಿರಬಹುದು.

ಬಂಗಾಳ ಮತ್ತು ಒಡಿಸ್ಸ ಪ್ರಾಂತ್ಯಗಳಲ್ಲಿರುವ ಕಲ್ಪನೆಯ ಪ್ರಕಾರ ಇವನು ಜಗನ್ನಾಥಪುರಿ ಕ್ಷೇತ್ರದವನು. ಇವನ ಮನೆಯ ಮುಂದೆ ಬಿಲ್ವವೃಕ್ಷವಿದ್ದುದರಿಂದ ಇವನಿಗೆ ಬಿಲ್ವಮಂಗಳನೆಂಬ ಹೆಸರು ಬಿದ್ದಿತೆಂದು ಈ ಕಡೆಯವರು ಹೇಳುತ್ತಾರೆ.

ಲೀಲಾಶುಕನು ಭಕ್ತಿಯ ಭರದಿಂದ ಭಾವಸಮಾಧಿಯಲ್ಲಿ ಆಗಾಗ ತಲ್ಲೀನನಾಗುತ್ತಿದ್ದನಂತೆ. ಇಂತಹ ಸಂದರ್ಭವೊಂದರಲ್ಲಿ ಕೃಷ್ಣನೇ ಅವನ ಮೈಮೇಲೆ ಬಂದು ಲೀಲಾಶುಕನ ಪ್ರಶಸ್ತಿಯನ್ನು ಹಾಡಿದನಂತೆ. ಹದಿನೈದು ಶ್ಲೋಕಗಳ ಸ್ತುತಿಯೊಂದು ಈ ಪ್ರಶಸ್ತಿಯನ್ನು ನಿಲ್ಲಿಸಿದೆ. ಈ ಸ್ತುತಿಯನ್ನು ರಚಿಸಿದವನು ಕೃಷ್ಣನೇ ಎಂದು ನಂಬಿಕೆ; ಚರಮಶ್ಲೋಕವು ಇದನ್ನೇ ಹೇಳುತ್ತದೆ—

ಕೃಷ್ಣಲೀಲಾಶುಕಸ್ಯಾಸ್ಯ ಕಿಶೋರಮಧಿದೈವತಂ ।
ಸ್ತುತಿರತ್ನಮಿದಂ ಬ್ರೂತೇ ವೇಣುವಾದಿಮುಖೇಂದುನಾ ॥

ಈ ಸಾರಸ್ವತಖಂಡದ ಒಂದೇ ಒಂದು ಪ್ರತಿಯು ಉಪಲಬ್ಧವಿದೆ. ಇದರಲ್ಲಿ ಲೀಲಾಶುಕನ ಗುರುವಾದ ಈಶಾನದೇವನ ಪ್ರಶಂಸೆಯಿದೆ. "ಆದಿತ್ಯಪ್ರಜ್ಞಪಾದಾನಾಮಾದಿಕಾರುಣ್ಯಭಾಜನ"ನಾದ ಈಶಾನದೇವನ "ಅನುಗ್ರಹಾಪಾಂಗ ಸಂಕ್ರಾಂತ ಜ್ಞಾನಸಾಗರ"ರೂ "ಸಾಗರಾ ಇವ ಗಂಭೀರ"ರೂ ಆದ ಧನ್ಯರು ಸಾವಿರಾರು ಮಂದಿ ಇದ್ದರಂತೆ.

ತಯೋರೇವ ಕೃಪಾಪಾತ್ರಂ ಕೃಷ್ಣಲೀಲಾಶುಕೋ ಮುನಿಃ ।
ಯದಾಶ್ರಮಾಂಗಣೇ ನಿತ್ಯಂ ರಮಂತೇ ತಂತ್ರವಿಸ್ತರಾಃ ॥

ಇದೇ ಸ್ತುತಿಯಲ್ಲಿ ಬರುವ ಒಂದು ಶ್ಲೋಕ ಲೀಲಾಶುಕನ ಕಾವ್ಯದ ಮಾಧುರ್ಯವನ್ನು ಹೊಗಳುತ್ತ—

ಯಸ್ಯ ದಕ್ಷಿಣ ಕೈಲಾಸ ಲೀಲಾಪರಿಣತಂ ಮಹಃ ।
ಚರ್ಚಾಚಂದನ ಗಂಧೇನ ಸುಗಂಧಯತಿ ಮಾನಸಂ ॥

ಎನ್ನುತ್ತದೆ. ಈ ಸ್ತುತಿಯ ಪ್ರಕಾರ ಅವನ ತಂದೆ ದಾಮೋದರ, ತಾಯಿ ನೀಲಿ (ತಿಲಕಂಕುಲಪಾಲೀನಾಂ ನೀಲೀತಿ ನಿಲಯಂ ಶ್ರಿಯಾಂ). ಕೃಷ್ಣಕರ್ಣಾಮೃತದಲ್ಲಿಯೂ ಇದೇ ವಿವರಗಳಿವೆ—

ಈಶಾನದೇವಚರಣಾಭರಣೇನ ನೀವೀ
ದಾಮೋದರಸ್ಥಿರಯಶಃಸ್ತಬಕೋದ್ಗಮೇನ ।
ಲೀಲಾಶುಕೇನ ರಚಿತಂ ತವ ದೇವ ಕೃಷ್ಣ
ಕರ್ಣಾಮೃತಂ ವಹತು ಕಲ್ಪಶತಾಂತರೇಽಪಿ ॥

ಇವನಿಗೆ ಕೃಷ್ಣಭಕ್ತಿ ಒದಗಿದ ವಿಚಾರವಾಗಿ ಕಥೆಯೊಂದನ್ನು ಹೇಳುತ್ತಾರೆ. ಲೀಲಾಶುಕನಿಗೆ ಚಿಂತಾಮಣಿಯೆಂಬ ವೇಶ್ಯೆಯಲ್ಲಿ ಅನುರಕ್ತಿಯಿದ್ದಿತಂತೆ. ಈಕೆ ವೇಶ್ಯೆಯಾದರೂ ಕೃಷ್ಣಭಕ್ತೆ; ದಿನವೂ ತಪ್ಪದೆ ದೇವತಾರ್ಚನೆ ಮಾಡುತ್ತಿದ್ದಳು, ವ್ರತ ಉಪವಾಸಗಳನ್ನು ನಡೆಸುತ್ತಿದ್ದಳು. ಲೀಲಾಶುಕನಂತೂ ಇದೊಂದರ ಪರಿವೆಯೂ ಇಲ್ಲದೆ ಕೇವಲ ಕಾಮುಕನಾಗಿ ಅವಳ ಬಳಿಯಿರುತ್ತಿದ್ದನು. ಒಂದು ಬಾರಿ ಆಕೆಯ

ತಂದೆಯ ಶ್ರಾದ್ಧದ ದಿವಸ, ಆಕೆ ನೇಮದಿಂದ ಇರುತ್ತ ಆ ರಾತ್ರಿ ಲೀಲಾಕುಶನು ಸಂಭೋಗಕ್ಕೆಂದು ಬರಬಾರದೆಂದು ತಿಳಿಸಿದಳು. ಆದರೂ ಮೋಹದಿಂದ ಮನಸ್ಸು ನಿಲ್ಲದೆ ನಡುರಾತ್ರಿಯ ಸಮಯದಲ್ಲಿ ಲೀಲಾಶುಕನು ಆಕೆಯ ಮನೆಗೆ ಬಂದನು. ಬಾಗಿಲು ಮುಚ್ಚಿದ್ದುದರಿಂದ, ಕೆಳಗೆ ಇಳಿ ಬಿದ್ದಿದ್ದ ಹಗ್ಗವೊಂದನ್ನು ಕಂಡು ಅದನ್ನೇ ಹಿಡಿದು ಕಿಟಕಿಯನ್ನು ಹತ್ತಿ ಆಕೆಯ ಕೋಣೆಗೆ ಇಳಿದನು. ಆದರೆ ಅವನು ಹಿಡಿದು ಹತ್ತಿದ್ದು ಹಗ್ಗವಲ್ಲ, ಹಾವು ಎಂದು ತಿಳಿದೊಡನೆ ಭಯದಿಂದ ಎಚ್ಚರತಪ್ಪಿ ಬಿದ್ದನು. ಚಿಂತಾಮಣಿಯು ಅವನಿಗೆ ಶೈಥ್ಯೋಪಚಾರ ಮಾಡಿದಳು. ಎಚ್ಚರ ಬರುವ ವೇಳೆ ತಾನು ವಿಕಟವೃದ್ಧಸ್ತ್ರೀಯಂತೆ ಕಾಣಿಸಿಕೊಳ್ಳುತ್ತ ಅವನ ಮುಂದೆ ನಿಂತಳು. ಅವನು ಹೇಸಿ ಹಿಂಜರಿದಾಗ, ತನ್ನ ನಿಜರೂಪತೋರಿಸಿ ಅವನ ಕಾಮುಕತೆಯನ್ನು ಜರಿದಳು. ಆಗ ಅವನಲ್ಲಿ ವಿರಕ್ತಿ ಮೈದುಂಬಿ ಬಂದಿತೆಂದೂ, ಅವಳ ಆದೇಶದಂತೆ ಸೋಮಗಿರಿಯೆಂಬ ಗುರುವಿನ ಬಳಿ ಹೋಗಿ ಕೃಷ್ಣಮಂತ್ರೋಪದೇಶವನ್ನು ಪಡೆದನೆಂದೂ ಕಥೆ ಮುಗಿಯುತ್ತದೆ. ಸಂನ್ಯಾಸಿಯಾಗಿ ಲೀಲಾಶುಕನು ಬೃಂದಾವನಕ್ಕೆ ಬಂದು ಅಲ್ಲಿಯೇ ತನ್ನ ಬಾಳನ್ನು ಕಳೆದನಂತೆ.

ಲೀಲಾಶುಕನ ಗ್ರಂಥಗಳಲ್ಲಿ 'ಪುರಷಕಾರ' ಎಂಬುದು ಶಾಸ್ತ್ರಗ್ರಂಥ. ಭೋಜರಾಜನ 'ಸರಸ್ವತೀಕಂಠಾಭರಣ'ಕ್ಕೆ ಇವನೊಂದು ವ್ಯಾಖ್ಯಾನವನ್ನು ಬರೆದಿದ್ದಾನೆ. ರಾಸಕ್ರೀಡೆಯನ್ನು ಬಣ್ಣಿಸುವ ಬೃಂದಾವನಸ್ತುತಿ ಇವನ ಕೃತಿಗಳಲ್ಲೆಲ್ಲ ರಮಣೀಯವಾದುದು. ಕೃಷ್ಣನೇ ಗೋಪಿಯರಿಗೆ ಹೇಳಿದಂತೆ ಶಿವನು ಮಾರ್ಕಂಡೇಯನನ್ನು ಸಲಹಲು ಯಮನನ್ನು ನಿಗ್ರಹಿಸಿದ ಕಥೆ 'ಕಾಲವಧ'ನೆಂಬ ಕಾವ್ಯ. ಪ್ರಾಕೃತವ್ಯಾಕರಣದ ಸೂತ್ರಗಳನ್ನು ಉದಾಹರಿಸುವ 'ಗೋವಿಂದಾಭಿಷೇಕ'ವೆಂಬ ಕಾವ್ಯವನ್ನೂ ಇವನೇ ಬರೆದನಂತೆ. ಇದರ ವ್ಯಾಖ್ಯಾನದಲ್ಲಿ ಕೃಷ್ಣಲೀಲಾಶುಕನು "ಮುನಿರಸೌ ಕವಿಸಾರ್ವಭೌಮ"ನೆಂದೂ "ಶ್ರೀಕೃಷ್ಣರೂಪಪರಮಾಮೃತಪಾನಶೀಲ"ನೆಂದೂ ಪ್ರಶಸ್ತಿಯಿದೆ.

ಇವಲ್ಲದೆ 'ತ್ರಿಭುವನಸುಭಗ', 'ಕೃಷ್ಣಚರಿತ', 'ಕೃಷ್ಣಬಾಲಕ್ರೀಡಾ', 'ಅಭಿನವಕೌಸ್ತುಭಮಾನಾ', 'ಶಂಕರಹೃದಯಾಂಗಣ', 'ಕ್ರಮದೀಪಿಕಾ' ಮತ್ತು

ಕೆಲವು ದೇವತಾಸ್ತುತಿಗಳನ್ನೂ ಲೀಲಾಶುಕನೇ ರಚಿಸಿದ್ದಾನೆಂದು ಪ್ರತೀತಿಯಿದೆ. ದಕ್ಷಿಣದಲ್ಲಿ ರಸಿಕಜನಪ್ರಿಯವಾಗಿರುವ 'ಶ್ಯಾಮಲಾದಂಡಕ'ದ ಆರಂಭದಲ್ಲಿ "ಜಯಲೀಲಾಶುಕಪ್ರಿಯೆ" ಎನ್ನುವ ಉಲ್ಲೇಖವಿದೆ. ಈ ದಂಡಕವು ಲೀಲಾಕುಶನ ಕೃತಿಯೇ ಎಂದು ಒಂದು ನಂಬಿಕೆ; ಕಾಳಿದಾಸನದೆಂದು ಇನ್ನೊಂದು ಅಭಿಪ್ರಾಯ.

ಕಾವ್ಯ

ಲೀಲಾಶುಕನು ಯಾತ್ರಾಪ್ರಸಂಗದಿಂದ ವ್ರಜಭೂಮಿಗೆ ಹೋಗಿದ್ದಾಗ ಕೃಷ್ಣಭಕ್ತಿಯ ಆವೇಶದಲ್ಲಿ ದಾರಿಯುದ್ದಕ್ಕೂ ಆಶುಕವಿತೆ ಮಾಡುತ್ತ ನಡೆದನಂತೆ; ಅವನ ಸಂಗಡಿಗರು ಅದನ್ನೆಲ್ಲ ಬರೆದಿಟ್ಟರಂತೆ; ಅದೇ ಕೃಷ್ಣಕರ್ಣಾಮೃತ ವಾಯಿತು. ಹದಿನೈದನೆಯ ಶತಮಾನದಲ್ಲಿದ್ದ ಬಂಗಾಳದ ಶ್ರೇಷ್ಠಸಂತಶ್ರೀ ಕೃಷ್ಣಚೈತನ್ಯ ದಕ್ಷಿಣಭಾರತದ ಪರ್ಯಟನೆ ಮುಗಿಸಿ ಹೋಗುವಾಗ ಕರ್ಣಾಮೃತದ ಹಸ್ತಪ್ರತಿಯೊಂದನ್ನು ಕೊಂಡೊಯ್ದನು. ಅಂದಿನಿಂದ ಉತ್ತರದಲ್ಲಿ ಈ ಕಾವ್ಯ ವಿಶೇಷವಾಗಿ ಪ್ರಚಾರದಲ್ಲಿದೆ. ಅವರ ಪಾಠದಲ್ಲಿ ಗ್ರಂಥವು ನೂರಹತ್ತು ಶ್ಲೋಕಗಳ ಒಂದೇ ಆಶ್ವಾಸದಲ್ಲಿ ಮುಗಿಯುತ್ತದೆ; ನಮ್ಮ ಪಾಠದಲ್ಲಿ ಮೂರು ಆಶ್ವಾಸ(ಶತಕ)ಗಳುಂಟು. ಆದರೆ ಮೊದಲ ಆಶ್ವಾಸದ ಉಪಸಂಹಾರದಲ್ಲೇ "ಲೀಲಾಶುಕೇನ ರಚಿತಂ ತವದೇವ ಕೃಷ್ಣಕರ್ಣಾಮೃತಂ ವಹತು ಕಲ್ಪಶತಾಂತರೇಽಪಿ" ಎಂಬ ಮಾತು ಬರುತ್ತದೆ. ಉಳಿದೆರಡು ಆಶ್ವಾಸಗಳಲ್ಲಿ ಇಂಥ ಸಮಾಪ್ತಿಧ್ವನಿಯಾಗಲೀ ಅಂಕಿತವಾಗಲೀ ಇಲ್ಲ ಎನ್ನುವುದನ್ನು ಗಮನಿಸಬೇಕು.

ಈ ಕಾವ್ಯದ ದಕ್ಷಿಣಪಾಠದಲ್ಲಿ 325 ಶ್ಲೋಕಗಳಿವೆ. ಲೀಲಾಶುಕ ವಿವಿಧ ವೃತ್ತಗಳಲ್ಲಿ ವ್ಯವಸಾಯ ಮಾಡಿ ಚತುರನಾದ ಕವಿ. ಏನಿಲ್ಲೆಂದರೂ ಇಪ್ಪತ್ತೆಂಟು ಬೇರೆಬೇರೆ ಜಾತಿಯ ವೃತ್ತಗಳಲ್ಲಿ ಶ್ಲೋಕಗಳನ್ನು ಹೆಣೆದಿದ್ದಾನೆ. ಆದರೆ ಹೆಚ್ಚಾಗಿ ವಸಂತತಿಲಕಾವೃತ್ತವನ್ನೇ ಬಳಸಿಕೊಂಡಿರುವುದು. ದ್ರಾವಿಡ ಛಂದೋಪದ್ಧತಿಯನ್ನು ಸಂಸ್ಕೃತವೃತ್ತಗಳಲ್ಲಿ ಮೂಡಿಸುವ ಪ್ರಯತ್ನ ಕಾಣುತ್ತದೆ. ಕನ್ನಡ-ಮಲೆಯಾಳ-ತಮಿಳುಕಾವ್ಯಗಳಲ್ಲಿ ಪ್ರಚುರವಾಗಿರುವ ದ್ವಿತೀಯಾಕ್ಷರ ಪ್ರಾಸವನ್ನು ಇಲ್ಲಿ ಅನೇಕ ಕಡೆ ನೋಡಬಹುದು. ಅಪೂರ್ವವಾದ, ಕ್ಲಿಷ್ಟವಾದ ವೃತ್ತಗಳಲ್ಲೂ ಕವಿ ಧೈರ್ಯದಿಂದ ಕೈ ಹಾಕಿದ್ದಾನೆ.

ಈ ಕಾವ್ಯಕ್ಕೆ 'ಕರ್ಣಾನಂದಪ್ರಕಾಶಿನೀ', 'ಶೃಂಗಾರರಂಗದಾ', 'ಕೃಷ್ಣವಲ್ಲಭಾ', 'ಸುಬೋಧಿನೀ' ಎನ್ನುವ ವ್ಯಾಖ್ಯಾನಗಳು ಬಳಕೆಯಲ್ಲಿವೆ.

ವಸ್ತು

ಇದರಲ್ಲಿ ಏಕಸೂತ್ರವಾಗಿ ಹರಿಯುವ, ಬೆಳೆಯುವ ಪ್ರಸಂಗವಿಲ್ಲ. ಇಡೀ ಕಾವ್ಯಕ್ಕೆ ಕೃಷ್ಣನೇ ಏಕಮಾತ್ರವಸ್ತುವಾದರೂ ಅವನ ಲೀಲಾಪ್ರಸಂಗಗಳ ಕಥನವಾಗಲೀ ಇಲ್ಲಿ ಇಲ್ಲ. ಇಲ್ಲಿಯ ಒಂದೊಂದು ಶ್ಲೋಕವು ಸ್ವತಂತ್ರವಾಗಿ ನಿಂತಿದೆ, ಸ್ತುತಿರೂಪದಲ್ಲಿದೆ. ಆದರೆ ಹಲವಾರು ಶ್ಲೋಕಗಳು ಭಾಗವತದಿಂದ ಆರಿಸಿಕೊಂಡ ಪ್ರಸಂಗಗಳನ್ನು ಅಧಿಕರಿಸಿದವು. ಸಾಮಾನ್ಯವಾಗಿ ಪ್ರತಿಯೊಂದು ಶ್ಲೋಕದಲ್ಲಿಯೂ ಕೃಷ್ಣನ ಸೌಂದರ್ಯವರ್ಣನೆಯಿದೆ. ನಿದರ್ಶನಕ್ಕೆ, ಜನಪ್ರಿಯವಾಗಿರುವ ಈ ಶ್ಲೋಕ ನೋಡಿ—

ಕಸ್ತೂರೀತಿಲಕಂ ಲಲಾಟಫಲಕೇ ವಕ್ಷಃಸ್ಥಲೇ ಕೌಸ್ತುಭಂ ।
ನಾಸಾಗ್ರೇ ನವಮೌಕ್ತಿಕಂ ಕರತಲೇ ವೇಣುಂ ಕರೇ ಕಂಕಣಂ ॥
ಸರ್ವಾಂಗೇ ಹರಿಚಂದನಂ ಚ ಕಲಯನ್ ಕಂಠೇ ಚ ಮುಕ್ತಾವಲೀಂ ।
ಗೋಪಸ್ತ್ರೀಪರಿವೇಷ್ಟಿತೋ ವಿಜಯತೇ ಗೋಪಾಲಚೂಡಾಮಣಿಃ ॥

ವಿವಿಧ ಸನ್ನಿವೇಶಗಳಲ್ಲಿ ಕೃಷ್ಣನ ಮೋಹಕರೂಪ, ಕಾಂತಿ, ಭಂಗಿಗಳನ್ನು ಕುರಿತ ರಮಣೀಯವಾದ ಚಿತ್ರಣಗಳಿವೆ. ಪ್ರಣಯದ ಮದದಲ್ಲಿ ಮೈ ಮರೆತ ಗೋಪಿಯರು, ವೇಣುನಾದದ ಮಾಧುರ್ಯದಲ್ಲಿ ಮನಸೋತ ಗೋಪಾಲಕರು, ಗೋವುಗಳು, ಅವನ ಅಂಗಸಂಗದಿಂದ ಸೌಂದರ್ಯಪುಷ್ಟಿಯನ್ನು ಪಡೆದ ಆಭರಣಗಳು, ಅವನ ಅದ್ಭುತ ಲೀಲೆಗಳಿಂದ ವಿಜೃಂಭಿತವಾದ ಗೋಕುಲ, ಕೃಷ್ಣದರ್ಶನಲಾಲಸವಾದ 'ಬಹುಲಜಲದಚ್ಛಾಯೇ', ಮುಕುಂದನ ಪಾದಸ್ಪರ್ಶದಿಂದ ಪುಲಕಿತವಾದ ಯಮುನಾತಟ—ಹೀಗೆ ಕಾವ್ಯದ ಪ್ರವಾಹದ ರಭಸದಲ್ಲಿ ಹಲವಾರು ದಿವ್ಯವಸ್ತುಗಳು ಹರಿದುಬಂದಿವೆ.

ರಾಧಾಕೃಷ್ಣಪಂಥಕ್ಕೆ ಪ್ರಧಾನವಾದ ರಾಸಮಂಡಲದ ಕಲ್ಪನೆ ಇಲ್ಲಿ ಕಾಣುತ್ತದೆ:

ಅಂಗನಾಮಂಗನಾಮಂತರೇ ಮಾಧವೋ ।
ಮಾಧವಂ ಮಾಧವಂ ಚಾಂತರೇಣಾಂಗನಾ ॥
ಇತ್ಥಮಾಕಲ್ಪಿತೇ ಮಂಡಲೇ ಮಧ್ಯಗಃ ।
ಸಂಜಗೌ ವೇಣುನಾ ದೇವಕೀನಂದನಃ ॥

ಕೃಷ್ಣನ ಎಳೆತನದಲ್ಲಿಯೇ ಕವಿಯ ಒಲವು ಹೆಚ್ಚು. 'ಅತಸೀಕುಸುಮದಂತೆ ಅತ್ಯಂತಬಾಲ'ನಾದ ಮುಕುಂದನ ಮುಗ್ಧವೇಷವು ಲೀಲಾಶುಕನ ಮನಸ್ಸಿನಲ್ಲಿ ಮತ್ತೆ ಮತ್ತೆ ಲಗ್ನವಾಗಿದೆ. ಕೃಷ್ಣನನ್ನು 'ಪ್ರಾಣನಾಥಃಕಿಶೋರ'ನೆಂದು ಸಂಬೋಧಿಸಿ ಅವನ ಲೀಲಾ-ಕ್ರೀಡೆಗಳನ್ನು ಹೃದಯಂಗಮವಾಗಿ ಕಾವ್ಯದ ತುಂಬ ಕವಿಯು ಬಣ್ಣಿಸಿದ್ದಾನೆ. ಒಡವೆಗಳನ್ನು ಧರಿಸಿ ಮಗು ಅಂಗಳದಲ್ಲಿ ಓಡಾಡುವ ಸುಂದರ ಸನ್ನಿವೇಶವನ್ನು ನೋಡಿ—

ಕಿಂಕಿಣಿ ಕಿಣಿಕಿಣಿ ರಭಸೈರಂಗಣ-
ಭುವಿರಿಂಗಣ್ಯೈಃ ಸದಾಽಟಂತಂ ।
ಕುಂಕುಣುಕುಣು ಪದಯುಗಲಂ
ಕಂಕಣಕರಭೂಷಣಂ ಹರಿಂ ವಂದೇ ॥

ಅಥವಾ, ಆಲದ ಎಲೆಯ ಮೇಲೆ ಕಾಲಬೆರಳುಗಳನ್ನು ಬಾಯಿಯಲ್ಲಿಟ್ಟು ಮಲಗಿರುವ ಹಸುಳೆ—

ಕರಾರವಿಂದೇನ ಪದಾರವಿಂದಂ ।
ಮುಖಾರವಿಂದೇ ವಿನಿವೇಶಯಂತಂ ॥
ವಟಸ್ಯ ಪತ್ರಸ್ಯ ಪುಟೇ ಶಯಾನಂ ।
ಬಾಲಂ ಮುಕುಂದಂ ಮನಸಾ ಸ್ಮರಾಮಿ ॥

ವಿಭಿನ್ನ ಸನ್ನಿವೇಶದಲ್ಲಿ ಕೃಷ್ಣನ ಅತಿಮಾನುಷತ್ವವನ್ನು ತೋರಿಸುವ ಶ್ಲೋಕವು ರಮ್ಯವಾಗಿದೆ. ಮಗುವಾದ ಕೃಷ್ಣ ಮಲಗುತ್ತಿದ್ದಾನೆ; ತೊಟ್ಟಿಲು

ತೂಗುತ್ತ ಯಶೋದೆ ಕಥೆ ಹೇಳುತ್ತಿದ್ದಾಳೆ—"ರಾಮ ಎಂಬುವನಿದ್ದ; ಅವನ ಹೆಂಡತಿ ಸೀತೆ; ಅವರು ಕಾಡಿನಲ್ಲಿ ಪಂಚವಟಿಯಲ್ಲಿದ್ದಾಗ ರಾವಣ ಆವಳನ್ನು ಕದ್ದೊಯ್ದು......" ಅಲ್ಲಿಯವರೆಗೆ "ಹುಂ, ಹುಂ" ಎನ್ನುತ್ತಿದ್ದ ಕೃಷ್ಣನಿಗೆ ತಟ್ಟನೆ ಪೂರ್ವಾವತಾರದ ಸ್ಮರಣೆ ಬಂದು "ಲಕ್ಷ್ಮಣ, ಧನುಸ್ಸೆಲ್ಲಿ ತಾ!" ಎಂದು ಕೋಪದಿಂದ ಎದ್ದನಂತೆ!

'ರಾಮೋನಾಮ ಬಭೂವ' ಹುಂ 'ತದಬಲಾ ಸೀತೇತಿ' ಹುಂ 'ತೌ ಪಿತು-
ರ್ವಾಚಾ ಪಂಚವಟೀವನೇ ವಿಹರತಸ್ತಾಮಾಹರದ್ರಾವಣಃ' ।
ನಿದ್ರಾರ್ಥಂ ಜನನೀಂ ಕಥಾಮಿತಿ ಹರೇರ್ಹುಂಕಾರತಃ ಶೃಣ್ವತಃ
'ಸೌಮಿತ್ರೇ! ಕ್ವಧನುರ್ಧನುರ್ಧನು'ರಿತಿ ವ್ಯಗ್ರಾಗಿರಃ ಪಾತು ನಃ ॥

ಇನ್ನೊಂದು ಸನ್ನಿವೇಶ. ಬಲರಾಮ-ಕೃಷ್ಣರು ಆಡುತ್ತಿದ್ದಾರೆ. ಬಲರಾಮ ತಾಯಿಯ ಬಳಿ ಓಡಿಬಂದು "ಅಮ್ಮಾ! ಕೃಷ್ಣ ಈಗ ಹಿಡಿ ಮಣ್ಣು ತಿಂದ!" ಎಂದು ಚಾಡಿ ಹೇಳುತ್ತಾನೆ; ತಾಯಿ ಕೃಷ್ಣನನ್ನು ಕರೆದು ಕೇಳಿದಾಗ, ಕೃಷ್ಣ "ಬರಿ ಸುಳ್ಳು! ನನ್ನ ಬಾಯಿಯನ್ನು ನೋಡು, ಬೇಕಿದ್ದರೆ" ಎಂದು ಬಾಯಿ ತೆರೆಯುತ್ತಾನೆ. ಮಗುವಿನ ಬಾಯಿಯಲ್ಲಿ ತಾಯಿ ವಿಶ್ವವನ್ನೇ ಕಾಣುತ್ತಾಳೆ!

'ಕೃಷ್ಣೇನಾಂಬ! ಗತೇನ ರಂತುಮಧುನಾ ಮೃದ್ಭಕ್ಷಿತಾಂ ಸ್ವೇಚ್ಛಯಾ'
'ತಥ್ಯಂ ಕೃಷ್ಣ ಕ ಏವಮಾಹ ಮುಸಲೀ?' 'ಮಿಥ್ಯಾಂಬ! ಪಶ್ಯಾನನಂ' ।
'ವ್ಯಾದೇಹೀ'ತಿ ವಿದಾರಿತೇ ಶಿಶುಮುಖೇ ದೃಷ್ಟ್ವಾ ಸಮಸ್ತಂ ಜಗತ್
ಮಾತಾ ಯಸ್ಯ ಜಗಾಮ ವಿಸ್ಮಯಪದಂ ಪಾಯಾತ್ಸ ನಃ ಕೇಶವಃ ॥

ಈ ಕಾವ್ಯದ ತುಂಬ ಇಂಥ ಕಲ್ಪನೆಗಳೂ ಕವಿಸಮಯಗಳೂ ತುಂಬಿವೆ. ಪ್ರೌಢವಾದ ಭಾವನೆಗಳೊಂದಿಗೆ ಉತ್ತಮವಾದ ಶ್ರವ್ಯಗುಣವೂ ಸೇರಿಬಂದಿದೆ. ಇಲ್ಲಿನ ಎಲ್ಲ ಶ್ಲೋಕಗಳನ್ನೂ ಗೀತಕ್ಕೆ ಅಳವಡಿಸಿದ್ದಾರೆ; ಕೇರಳದಲ್ಲೂ ಬಂಗಾಳದಲ್ಲೂ ಹಲವಾರು ಶ್ಲೋಕಗಳನ್ನು ನಾಟ್ಯಕ್ಕೆ ಹೊಂದಿಸಿಕೊಂಡಿದ್ದಾರೆ. ಗೇಯಗುಣ ಪ್ರಧಾನವಾದ ಈ ಕಾವ್ಯ ನಿಜವಾಗಿ ಕರ್ಣಾಮೃತವೇ.

ವೈಶಿಷ್ಟ್ಯ

ಲೀಲಾಶುಕನಿಗೆ ಶಬ್ದಬ್ರಹ್ಮನು ವಶನಾಗಿರುವಂತಿದೆ. ಅವನು ಇಟ್ಟ ಒಂದೊಂದು ಪದವೂ ರಸಘಟ್ಟ; ಹರಡಿದ ಪದಜಾಲವೂ ಶ್ರಮವಿಲ್ಲದೆ ಸ್ವಯಂ ವೃತ್ತವಾಗಿ ಪರಿವರ್ತಿತವಾಗಿದೆಯೋ ಎನ್ನುವಷ್ಟು ನಿರರ್ಗಳವಾಗಿದೆ. ಪದಗಳ ಸಂಯೋಜನೆಯಲ್ಲಿ, ಅರ್ಥದ ಓಟದಲ್ಲಿ ಕೃಷ್ಣಕರ್ಣಾಮೃತವು ಗೀತಗೋವಿಂದವನ್ನೂ ಮೀರಿಸಿದೆ. ನಿದರ್ಶನಕ್ಕೆ—

ತರುಣಾರುಣ ಕರುಣಾಮಯ ವಿಪುಲಾಯತನಯನಂ
ಕಮಲಾಕುಚಕಲಶೀಭರ ಪುಲಕೀಕೃತ ಪುಲಕಂ ।
ಮುರಲೀರವ ತರಲೀಕೃತ ಮುನಿಮಾನಸನಲಿನಂ
ಮಮ ಖೇಲತಿ ಮದಚೇತಸಿ ಮಧುರಾಧರಮಮೃತಂ ॥

ಸರಳವಾದ ವೃತ್ತದಲ್ಲೂ ಮಾಧುರ್ಯದ ರಸವನ್ನು ಸೂಸುವ ಜಾಣ್ಮೆಯನ್ನು ನೋಡಿ—

ಅಪಾಂಗರೇಖಾಭಿರಭಂಗುರಾಭಿ-
ರನಂಗಲೇಖಾರಸರಂಜಿತಾಭಿಃ ।
ಅನುಕ್ಷಣಂ ವಲ್ಲವಸುಂದರೀಭಿ-
ರಭ್ಯರ್ಚ್ಯಮಾನಂ ವಿಭುಮಾಶ್ರಯಾಮಃ ॥

ಈ ಕಾವ್ಯದಲ್ಲಿ ಕರ್ಮಕ್ಕಿಂತ ಸ್ಫೂರ್ತಿಯ ಪಾತ್ರ ಹೆಚ್ಚಾಗಿದೆ. "ಗೋಕುಲಪೂರ್ಣಚಂದ್ರ"ನ ಲೋಕೋತ್ತರಲೀಲೆಯನ್ನು ಮನನ ಮಾಡುತ್ತ ಒದಗಿದ ಆವೇಶದಲ್ಲಿ ಕವಿ ಲುಪ್ತನಾಗಿ ಕಾವ್ಯಸೃಷ್ಟಿಗೆ ನಿಮಿತ್ತಮಾತ್ರನಾಗಿದ್ದಾನೆ. ಕಾವ್ಯದಲ್ಲಿ ಒಂದೆಡೆಯಲ್ಲಿಯೂ ಕ್ಲೇಶ ಕಾಣುವುದಿಲ್ಲ. ಯಾವುದೇ ವೃತ್ತವಿರಲಿ,

ಯಾವುದೇ ಪ್ರಸಂಗವಿರಲಿ, ವಚೋವಿನ್ಯಾಸವು ಅವ್ಯಾಹತವಾಗಿ ಹರಿಯುತ್ತದೆ. ಲೀಲಾಶುಕನನ್ನು ಒಬ್ಬ ವ್ಯಾಖ್ಯಾನಕಾರನು "ಮುನಿರಸೌಕ ವಿಸಾರ್ವಭೌಮಃ" ಎಂದು ಕರೆದಿರುವುದರಲ್ಲಿ ಔಚಿತ್ಯವಿದೆ. ಶೃಂಗಾರ, ಪ್ರಣಯ, ಕ್ರೀಡೆ, ಪ್ರಕೃತಿ, ವಿರಹ, ಆನಂದ ಎಲ್ಲ ವ್ಯಾಪಾರಗಳನ್ನೂ ಅತಿಮಾನುಷಸ್ಥಿತಿಗೆ ಏರಿಸಿರುವುದು ಕವಿಯ ಕೌಶಲ ಮಾತ್ರವಲ್ಲ, ಪ್ರಗಲ್ಭತೆಯನ್ನೂ ತೋರಿಸುತ್ತದೆ. ಲೀಲಾಶುಕನ ಆವೇಶದ ಅವಸರ ಒಂದರಲ್ಲಿ ಕೃಷ್ಣನೇ ಹೀಗೆ ಹೇಳಿದನಂತೆ—".....ಚರ್ಚಾ ಚಂದನಗಂಧೇನ ಸುಗಂಧಯತಿ ಮಾನಸಂ; ಕೃಷ್ಣಲೀಲಾಶುಕಸ್ಯಾಸ್ಯ ಕಿಶೋರಮಧಿ ದೈವತಂ....." ಎಂದು. ಅದು ಯಥಾರ್ಥವಾದ ಮಾತು ಎನ್ನುವುದು ಈ ಕಾವ್ಯವನ್ನು ನೋಡಿದವರಿಗೆ ಮನದಟ್ಟಾಗುತ್ತದೆ.

ರಾಧಾಮಾಧವರಾಸ

ರಾಧಾಮಾಧವರಾಸ

ರಾಸಮಂಡಲ

ರಾಧೆ

ತಾತ್ತ್ವಿಕ ಅರ್ಥ

ಮುಖ್ಯರಸ

ಗೋಪಿಕೋನ್ಮಾದ

ಮಧುರರತಿ

ರಾಸಮಂಡಲ

ಗೀತಗೋವಿಂದ ಮತ್ತು ಕೃಷ್ಣಕರ್ಣಾಮೃತ—ಎರಡರ ಹಿನ್ನೆಲೆಯಲ್ಲೂ ರಾಸಕ್ರೀಡೆಯ ಕಲ್ಪನೆಯುಂಟು. ಕೃಷ್ಣಕರ್ಣಾಮೃತದಲ್ಲಿ ಸ್ಪಷ್ಟವಾಗಿಯೇ ರಾಸಮಂಡಲದ ವರ್ಣನೆಯಿದೆ—

ಅಂಗನಾಮಂಗನಾಮಂತರೇ ಮಾಧವೋ
ಮಾಧವಂ ಮಾಧವಂಚಾಂತರೇಣಾಂಗನಾ ।
ಇತ್ಥಮಾಕಲ್ಪಿತೇ ಮಂಡಲೇ ಮಧ್ಯಗಃ
ಸಂಜಗೌ ವೇಣುನಾ ದೇವಕೀನಂದನಃ ॥

ಇಬ್ಬರು ಹೆಂಗಳೆಯರ ನಡುವೆ ಒಬ್ಬ ಕೃಷ್ಣ, ಇಬ್ಬರು ಕೃಷ್ಣರ ನಡುವೆ ಒಬ್ಬಳು ಹೆಂಗಳೆ; ಹೀಗೆ ಒದಗಿದ ಮಂಡಳದ ನಡುವೆ ಕೊಳಲನೂದುತ್ತ ನಿಂತಿರುವ ಕೃಷ್ಣ, ಇದರ ಚಿತ್ರ ಈ ಶ್ಲೋಕದಲ್ಲಿದೆ.

ವ್ರಜಭೂಮಿಯ ಗೋಪಿಯರು ಕೃಷ್ಣನ ಅಂಗಸಂಗಕ್ಕಾಗಿ ಕಾತರರಾಗಿದ್ದರೆಂದು ವಿಷ್ಣುಪುರಾಣ, ಹರಿವಂಶ, ಭಾಗವತಗಳಲ್ಲಿ ವಿವರವಿದೆ; ಮಹಾಭಾರತದಲ್ಲಿಯೇ ಇದರ ಸೂಚನೆಯಿದೆಯೆಂದು ಹೇಳುತ್ತಾರೆ. ರಾಸಾರಂಭರಸೋತ್ಸುಕನಾದ ಗೋವಿಂದನು ಗೋಪೀಪರಿವೃತ್ತನಾಗಿ ಶರಚ್ಚಂದ್ರ ಮನೋರಮವಾದ ರಾತ್ರಿಯನ್ನು ಕಳೆದ ವರ್ಣನೆ ವಿಷ್ಣುಪುರಾಣದಲ್ಲಿದೆ. ಗೋಪಿಯರಿಂದ ಕೂಡಿ—

ರರಾಮ ರಾಸಗೋಷ್ಠೀಭಿರುದಾರಚರಿತೋ ಹರಿಃ

ಎನ್ನುವ ಮಾತೂ ಇಲ್ಲಿ ಬರುತ್ತದೆ. ಆ ಸಂದರ್ಭದಲ್ಲಿ ಕೃಷ್ಣನು 'ರಾಸಗೇಯ'ವನ್ನು ಹಾಡಿದನೆಂದೂ ಗೋಪಿಯರು ಮೆಚ್ಚಿಕೊಂಡು

ಮುಗ್ಧರಾದರೆಂದೂ ಪ್ರಸ್ತಾಪವಿದೆ. ಇದು ರಾಸಕ್ರೀಡೆಯ ಕಲ್ಪನೆಯ ಬೀಜವೆನ್ನಬಹುದು.

ರಾಸವೆಂದರೆ ಹೆಂಗಳೆಯರೂ ಗಂಡಸರೂ ಭೇದಭಾವವಿಲ್ಲದೆ ಕೈಕೈಹಿಡಿದು ಮಂಡಲದಂತೆ ಗುಂಡಾಗಿ ನಿಂತು, ಹಾಡಿ ಕುಣಿದಾಡುವುದು, ಚೆಲ್ಲಾಟವಾಡುವುದು, ನಗೆಯಾಟವಾಡುವುದು. ಭಾಗವತಪಂಥದ ಪ್ರಮುಖರಾದ ಶ್ರೀಧರಸ್ವಾಮಿಗಳು ಇದೇ ಅರ್ಥವನ್ನು ಹಿಡಿದು "ರಾಸೋನಾಮ ಅನ್ಯೋನ್ಯವ್ಯತಿರಿಕ್ತಹಸ್ತಾನಾಂ ಸ್ತ್ರೀಪುಂಸಾಂ ಗಾಯತಾಂ ಮಂಡಲೀರೂಪೇಣ ಭ್ರಮತಾಂ ನೃತ್ಯವಿನೋದಃ" ಎಂದು ಬರೆದಿದ್ದಾರೆ. ಹರಿವಂಶವು ಇದನ್ನೇ ಹಲ್ಲೀಷಕ್ರೀಡೆಯೆಂದು ವ್ಯವಹರಿಸಿದೆ. ಹಲ್ಲೀಷವೆಂದರೂ ಹೆಂಗಳೆಯರು ಗುಂಡಾಗಿ ನಿಂತು ಕುಣಿಯುವುದು: 'ಮಂಡಲೇನ ತು ಯನ್ನೃತ್ಯಂ ಸ್ತ್ರೀಣಾಂ ಹಲ್ಲೀಷಂ ತು ತತ್'. ಈ ಬಗೆಯ ಗೋಷ್ಠೀನೃತ್ಯವು ನಮ್ಮ ದೇಶದಲ್ಲಿ ಹಿಂದೆ ಬಹುವಾಗಿ ಬಳಕೆಯಲ್ಲಿದ್ದಿತು. ವ್ರಜದೇಶದ ಗೋಪಿಕಾಸ್ತ್ರೀಯರು ಕೃಷ್ಣನೊಂದಿಗೆ ಹೀಗೆ ಆಟವಾಡಿದುದು ರಾಸಕ್ರೀಡೆಯ ಮುಖ್ಯ ವಿವರ.

ರಾಸಕ್ರೀಡೆಯು ಭಾಗವತದ ಹತ್ತನೆಯ ಸ್ಕಂಧದಲ್ಲಿ ಐದು ಅಧ್ಯಾಯಗಳ ತುಂಬ ಮೂಡಿಬಂದಿದೆ. ಈ ಅಧ್ಯಾಯಗಳಿಗೆ 'ರಾಸ ಪಂಚಾಧ್ಯಾಯ'ವೆಂದೇ ಹೆಸರು. ಇಲ್ಲಿ ಪ್ರಣಯಪ್ರಧಾನವಾದ ವ್ಯವಹಾರವೇ ಮುಖ್ಯರಸವೆಂದರೆ ತಪ್ಪಾಗದು. ಕಾಮಾತುರರಾದ ಗೋಪಿಯರು, ಹೆಸರು. ಕಾಮಕೇಳೀಕುಶಲನಾದ ಕೃಷ್ಣ ಇವರ ನಡುವೆ ನಡೆದದ್ದು ಅಶ್ಲೀಲವೋ, ಈಶ್ವರೋಪಾಸನೆಯೋ ಎನ್ನುವುದು ಅಭಿಪ್ರಾಯದ ಮಾತು. ಗೋಪಿಯರು ಕೃಷ್ಣನನ್ನು ಅಂತರಾತ್ಮನೆಂದೂ ಪರಬ್ರಹ್ಮನೆಂದೂ ಕಂಡುಕೊಂಡ ಉಲ್ಲೇಖವೇನೋ ಗೋಪಿಕಾಗೀತೆಯಲ್ಲಿ ಬರುತ್ತದೆ—

ನ ಖಲು ಗೋಪಿಕಾನಂದನೋ ಭವಾನ್
ಅಖಿಲದೇಹಿನಾಂ ಅಂತರಾತ್ಮದೃಕ್!
ವಿಖನಸಾರ್ಥಿತೋ ವಿಶ್ವಗುಪ್ತಯೇ
ಸಖ ಉದೇಯಿವಾನ್ ಸಾತ್ವತಾಂ ಕುಲೇ!

ಅಂತೂ ರಾಸಮಂಡಲಮಧ್ಯವರ್ತಿಯಾದ ಕೃಷ್ಣನು ಪರಮಪುರುಷನೆಂದೂ ಪುರುಷತತ್ತ್ವವೆಂದೂ, ರಾಸರಸಿಕರಾದ ಗೋಪಿಕಾಸ್ತ್ರೀಯರು ಪ್ರಕೃತಿತತ್ತ್ವವೆಂದೂ ಶಕ್ತಿಸ್ವರೂಪವೆಂದೂ, ಜಿಜ್ಞಾಸುಗಳು ಬಗೆದರು. ರಾಸಕ್ರೀಡೆಯು ಪುರುಷ-ಪ್ರಕೃತಿಯರ ಸಂಯೋಗವಿಶೇಷವೆನ್ನುವ ವಿವರಣೆ ಮೈದಳೆಯಿತು. ರಾಸಮಂಡಲವಿರುವ ಗೋಲೋಕವು ಪರಮಪದವಾದ ವೈಕುಂಠವೇ ಎಂದು ಭಾವುಕರು ನಂಬಿದರು.

ರಾಧೆ

ರಾಸಮಂಡಲದಲ್ಲಿ ಮೈದಳೆದು ಗೋಲೋಕದಲ್ಲಿ ಅಧಿಷ್ಠಾತ್ರಿಯಾಗಿ ಕಾಣಿಸಿಕೊಂಡ ರಾಧೆ ಬ್ರಹ್ಮವೈವರ್ತಪುರಾಣದಲ್ಲಿ ಕೃಷ್ಣನ ಶಕ್ತಿಯಾಗಿಯೇ ರೂಪತಳೆದಿದ್ದಾಳೆ. ರಾಧೆಯನ್ನುವ ಮಾತಿಗೆ ಅರ್ಥವೂ ಇದೇ ಎಂದು ಬ್ರಹ್ಮಖಂಡದ ಪಂಚಮಾಧ್ಯಾಯದಲ್ಲಿ ವಿವರಣೆಯಿದೆ:

ರಾಸೇ ಸಂಭೂಯ ಗೋಲೋಕೇ ಸಾ ದಧಾವ ಹರೇಃ ಪುರಃ ।
ತೇನ ರಾಧಾ ಸಮಾಖ್ಯಾತಾ......

ರಾಧೆಯೇ ಗೋಲೋಕಧಾಮದ ರಾಣಿ; ಕೃಷ್ಣನ ವಿಲಾಸಿನಿ, ಪ್ರೇಯಸಿಯೆನ್ನುವ ಕಲ್ಪನೆ ರಾಸಮಂಡಲದ ಒಡಲಿಂದಲೇ ಹುಟ್ಟಿಕೊಂಡಿತು. ರಾಧಾಮಾಧವರ ವಿಹಾರವೇ ರಾಸವೆನಿಸಿಕೊಂಡಿತು.

ರಾಧೆಗೆ ತಾತ್ತ್ವಿಕವಾದ ಅರ್ಥ ಏನೇ ಇರಲಿ, ಜನರ ಕಲ್ಪನೆಯಲ್ಲಿ ಕೃಷ್ಣನ ಅನುರಾಗವನ್ನು ಸಂತತವಾಗಿ ಪಡೆದ ಭಾಗ್ಯಶಾಲಿನಿ. ಬಂಗಾಳದ ಕಡೆ ಕೃಷ್ಣನ ಪ್ರೇಮವನ್ನು ಪಡೆದ ಮತ್ತೊಬ್ಬಳು ವಿರಜೆ(ಚಂದ್ರಾವಳಿ)ಯೆನ್ನುವ ಗೋಪಿಯ ಕಲ್ಪನೆಯೂ, ಇವಳಿಂದಾಗಿ ರಾಧೆಗೆ ಮತ್ಸರವೊದಗಿತೆನ್ನುವ ಕಥೆಯೂ ಬಳಕೆಯಲ್ಲಿದೆ. ವಿರಜೆಯ ಮನೆಯಲ್ಲಿ ವಿಹರಿಸುತ್ತಿದ್ದ ಕೃಷ್ಣನನ್ನು ದಂಡಿಸಲು ರಾಧೆ ಹೊರಟಳೆಂದೂ, ಅಲ್ಲಿ ಬಾಗಿಲು ಕಾಯುತ್ತಿದ್ದ ಶ್ರೀದಾಮನು ಇವಳನ್ನು ತಡೆದನೆಂದೂ, ರಾಧೆಯ ಸಿಟ್ಟಿಗೆ ಬೆದರಿ ವಿರಜೆ ನೀರಾಗಿ ಹರಿದು ಹೋದಳೆಂದೂ, ರಾಧೆ ಕೃಷ್ಣನನ್ನು ಭೂಮಿಯಲ್ಲಿ ಮನುಷ್ಯನಾಗಿ ಹುಟ್ಟುವಂತೆ ಶಪಿಸಿದಳೆಂದೂ, ಶ್ರೀದಾಮನು ಸಿಟ್ಟಿಗೆದ್ದು ರಾಧೆಯನ್ನೂ ಭೂಲೋಕದಲ್ಲಿ ಹುಟ್ಟಿ ಅಪಕೀರ್ತಿಗೆ ಗುರಿಯಾಗುವಂತೆ ಶಪಿಸಿದನೆಂದೂ ಕಥೆ.

ಇದು ರಾಧಾಕೃಷ್ಣರು ಭೂಮಿಯಲ್ಲಿ ಅವತರಿಸಿದುದಕ್ಕೆ ಹಿನ್ನೆಲೆ. ಕೃಷ್ಣನು ದೇವಕೀವಸುದೇವರ ಮಗನಾಗಿ ನಂದನ ಮನೆಯಲ್ಲಿ (ಬೃಂದಾವನದಲ್ಲಿ) ಬೆಳೆಯುತ್ತಿದ್ದನು; ರಾಧೆಯು ವ್ರಜಭೂಮಿಯ ರಾಯಣ ಎನ್ನುವವನ ಹೆಂಡತಿಯಾಗಿ ಮೈದಳೆದಳು. ಮುಂದೆ ಆಕೆ ತನ್ನ ಗಂಡ ರಾಯಣನನ್ನು ಬಿಟ್ಟು ಕೃಷ್ಣನನ್ನು ಕೂಡಿಕೊಂಡಳು. ಹೀಗೆ ಶ್ರೀದಾಮನ ಅಪಕೀರ್ತಿಯ ಶಾಪ ಫಲಿಸಿತು. ರಾಧಾಕೃಷ್ಣರು ವಿಧಿವತ್ತಾಗಿ ಮದುವೆಯಾದರು ಎನ್ನುವ ನಂಬಿಕೆಯೂ ಇದೆ.

ಬ್ರಹ್ಮವೈವರ್ತಪುರಾಣದಲ್ಲಿ ರಾಧೆಯು ಕೃಷ್ಣನನ್ನು ಮೊಟ್ಟಮೊದಲ ಬಾರಿ ಕಂಡ ಸಂದರ್ಭ ಹೀಗಿದೆ: ಒಮ್ಮೆ ನಂದನು ತನ್ನ ಪರಿವಾರವನ್ನೆಲ್ಲ ಕೂಡಿಕೊಂಡು ಕೃಷ್ಣನೊಂದಿಗೆ ಬೃಂದಾವನಕ್ಕೆ ಬಂದು ವನಭೋಜನ, ವಿಹಾರಗಳನ್ನು ಮಾಡುತ್ತಿದ್ದನು. ಆಗ ಕೃಷ್ಣನಿನ್ನೂ ಹಸುಳೆ, ಇದ್ದಕ್ಕಿದ್ದಂತೆ ಕಾರ್ಮೋಡ ಕವಿದು, ಗುಡುಗುಸಿಡಿಲುಗಳ ಆರ್ಭಟದಿಂದ ಮಳೆ ಆರಂಭವಾಯಿತು. ಮಾಯಾಶಿಶುವಾದ ಕೃಷ್ಣನು ದಿಗಿಲುಬಿದ್ದು ಅಳುತ್ತ ತಂದೆಯ ಕೊರಳನ್ನು ಹಿಡಿದನು. ಈ ಸಂದರ್ಭದಲ್ಲಿ ರಾಧೆ ಎದುರಿಗೆ ಕಾಣಿಸಿಕೊಂಡಳು—

ಏತಸ್ಮಿನ್ನಂತರೇ ರಾಧಾ ಜಗಾಮ ಕೃಷ್ಣಸನ್ನಿಧಿಂ ।

ನಂದನಿಗೆ ಅವಳು ಹರಿಪ್ರಿಯೆಯೆಂದು ತಟ್ಟನೆ ತಿಳಿಯಿತಂತೆ; ಕೃಷ್ಣನನ್ನು ಕೊಂಡೊಯ್ಯೆಂದು ಮಗುವನ್ನು ಅವಳಿಗೆ ಕೊಟ್ಟು ಕಳುಹಿಸಿದನಂತೆ.

ಮಗುವಾದ ಕೃಷ್ಣನನ್ನು ಎತ್ತಿಕೊಂಡು ಹೋಗುತ್ತ ರಾಧೆ ದಾರಿಯಲ್ಲಿ ಗೋಲೋಕಧಾಮನನ್ನು ನೆನೆಸಿಕೊಂಡಳಂತೆ; ಒಡನೆಯೇ ರಾಸವಿಹಾರ ಭೂಮಿ ಸಿದ್ಧವಾಗಿ ರಾಧಾ-ಕೃಷ್ಣರು ಪರಸ್ಪರ ಅನುರಕ್ತರಾದರಂತೆ. ಆಗ ಬ್ರಹ್ಮನೇ ಬಂದು ಅವರಿಬ್ಬರಿಗೆ ಮದುವೆಮಾಡಿಸಿಹೋದನಂತೆ. ಇಷ್ಟಾದನಂತರ ಯಮುನಾದಡದ ಮೇಲೆ ಅವರ ರಹಃಕೇಲಿಗಳು.

ಬ್ರಹ್ಮವೈವರ್ತಪುರಾಣದ ಈ ರಾಧಾಮಾಧವರ ರಹಃಕೇಲಿಯ

ಹಿನ್ನೆಲೆಯೇ ಗೀತಗೋವಿಂದಕಾವ್ಯದ ಮಂಗಳಶ್ಲೋಕ. ಆದರೆ ಇಲ್ಲಿನ ಕವಿಸಮಯವು ಸಂದರ್ಭವನ್ನು ಸ್ವಲ್ಪ ಮಾರ್ಪಡಿಸಿದೆ. ಬ್ರಹ್ಮವೈವರ್ತ ಪುರಾಣದ ನಂದನು ರಾಧೆಗೆ "ನಿನಗೆ ಸುಖವೆನಿಸಿದ ಕಡೆ ಕೃಷ್ಣನನ್ನು ಕೊಂಡೊಯ್ಯೆ"ಂದು ಹೇಳುತ್ತಾನೆ; ಗೀತಗೋವಿಂದನ ನಂದ "ಕೃಷ್ಣನನ್ನು ಮನೆಗೆ ಕರೆದುಕೊಂಡು ಹೋಗು" ಎಂದು ಹೇಳುತ್ತಾನೆ. ಗೀತಗೋವಿಂದದಲ್ಲಿ ಮಳೆ ಬಂದೀತೆಂದು ಹೆದರಿ ನಂದನು ಕೃಷ್ಣನನ್ನು ಕಳುಹಿಸಿಬಿಡುತ್ತಾನೆ. ಸಂದರ್ಭವನ್ನು ಸೂಚಿಸುವ ಗೀತಗೋವಿಂದದ ಮೊದಲ ಶ್ಲೋಕ—

ಮೇಘೈರ್ಮೇದುರಮಂಬರಂ ವನಭುವಃ ಶ್ಯಾಮಾಸ್ತಮಾಲದ್ರುಮೈಃ ।
ನಕ್ತಂ ಭೀರುರಯಂ ತ್ವಮೇವ ತದಿಮಂ ರಾಧೇ ಗೃಹಂ ಪ್ರಾಪಯ ।
ಇತ್ಥಂ ನಂದನಿದೇಶತಶ್ಚಲಿತಯೋಃ ಪ್ರತ್ಯಧ್ವಕುಂಜದ್ರುಮಂ
ರಾಧಾಮಾಧವಯೋರ್ಜಯಂತಿ ಯಮುನಾಕೂಲೇ ರಹಃಕೇಲಯಃ ॥

ಗೀತಗೋವಿಂದದಲ್ಲಿಯೇ ಸಂದರ್ಭವನ್ನು ವಿವರಿಸುವ ಕಥೆಯಿಲ್ಲ. ಕಥೆಯನ್ನು ಕಾಣಬೇಕಾದರೆ ಬ್ರಹ್ಮವೈವರ್ತಪುರಾಣಕ್ಕೇ ಹೋಗಬೇಕು. ಜಯದೇವನು ಈ ಪ್ರಸಂಗವನ್ನು ಆ ಪುರಾಣದಿಂದಲೇ ಎತ್ತಿಕೊಂಡಿದ್ದಾನೆ ಎನ್ನುವುದು ದಿಟ. ಬ್ರಹ್ಮವೈವರ್ತದ ಕಥನದಲ್ಲಿ ಬರುವ ಮಾತು—

ಮೇಘಾವೃತಂ ನಭೋ ದೃಷ್ಟ್ವಾ
ಶ್ಯಾಮಲಂ ಕಾನನಾಂತರಂ ।

ಗೀತಗೋವಿಂದದಲ್ಲಿ ಬರುವ ಮಾತು—

ಮೇಘೈರ್ಮೇದುರಮಂಬರಂ
ವನಭುವಃ ಶ್ಯಾಮಾಸ್ತ ಮಾಲದ್ರುಮೈಃ ।

ಜಯದೇವನು ಪುರಾಣದ ಮಾತುಗಳನ್ನೇ ಉಳಿಸಿ ಕೊಂಡಿದ್ದಾನಲ್ಲವೆ?

ತಾತ್ತ್ವಿಕ ಅರ್ಥ

ಕೃಷ್ಣರಾಧೆಯರ ತಾತ್ತ್ವಿಕ ಅರ್ಥದ ಮಾತು ಮೊದಲೇ ಬಂದಿತು. ಪುರಾಣದ ಶ್ರೀಕೃಷ್ಣಜನ್ಮಖಂಡದಲ್ಲಿ ಇದು ವಿವರವಾಗಿ ಬರುತ್ತದೆ. ಹಾಲಿನಲ್ಲಿನ ಬಿಳಿಬಣ್ಣ, ಬೆಂಕಿಯಲ್ಲಿನ ಕಾವು ಹೇಗೆ ಬೇರ್ಪಟ್ಟು ನಿಲ್ಲಲಾರವೋ ಹಾಗೆ ರಾಧೆಯೂ ಬೇರ್ಪಟ್ಟು ನಿಲ್ಲಲಾರರು. ಮಣ್ಣಿಲ್ಲದೆ ಮಡಕೆ ಮಾಡುವುದು ಹೇಗೆ? ಚಿನ್ನವಿಲ್ಲದೆ ಓಲೆಯನ್ನು ಮಾಡಬಲ್ಲ ಅಕ್ಕಸಾಲೆ ಯಾರು? ಹಾಗೆಯೇ ರಾಧೆಯಿಲ್ಲದೆ ಕೃಷ್ಣನು ಸೃಷ್ಟಿಯನ್ನು ಮಾಡಲಾರ. ಕೃಷ್ಣನು ಬೀಜವಾದರೆ ರಾಧೆ ಭೂಮಿ (ಆಧಾರಭೂತಳು). ರಾಧೆ ಸ್ತ್ರೀಯಾದರೆ ಕೃಷ್ಣನು ಪುರುಷ. ರಾಧೆ 'ಸರ್ವಸ್ವರೂಪೆ'ಯಾದರೆ ಕೃಷ್ಣ 'ಸರ್ವರೂಪ'. ಕೃಷ್ಣ 'ಸರ್ವಬೀಜ ಸ್ವರೂಪ'ನಾದರೆ ರಾಧೆ ಸ್ತ್ರೀರೂಪ ಧಾರಿಣಿಯಾದ 'ಶಕ್ತಿಸ್ವರೂಪ'ಳು. ರಾಧೆಯಿಲ್ಲದೆ ಪರಿಗಣಿಸಿದರೆ ಕೃಷ್ಣ; ರಾಧೆಯೂ ಕೂಡಿಕೊಂಡರೆ ಶ್ರೀಕೃಷ್ಣ.

ಕೃಷ್ಣಂ ವದಂತಿ ಮಾಂ ಲೋಕಾಃ
ತ್ವಯೈವ ರಹಿತಂ ಯದಾ ।
ಶ್ರೀಕೃಷ್ಣಂ ಚ ತದಾ ದೇವಿ
ತ್ವಯೈವ ಸಹಿತಂ ಪರಂ ॥

ರಾಧೆಯಿದ್ದರೇ ಕೃಷ್ಣನು 'ಸಂಪತ್ಸ್ವರೂಪ', 'ಈಶ್ವರ', 'ಲಕ್ಷ್ಮೀಯುಕ್ತ'. ಇಬ್ಬರೂ ಒಟ್ಟಿಗಿದ್ದರೇ ಸೃಷ್ಟಿ—

ನ ಹಿ ಸೃಷ್ಟಿರ್ಭವೇದ್ದೇವಿ
ದ್ವಯೋರೇಕತರಂ ವಿನಾ

ಮುಖ್ಯರಸ

ತಾತ್ತ್ವಿಕವಾದ ಈ ಅರ್ಥವೇ ಗೀತಗೋವಿಂದದ ಜೀವನಾಡಿಯೆಂದು ಪರಿಗಣಿಸಿದರೂ ರಾಧಮಾಧವರಾಸವೇ ಅಲ್ಲಿನ ಮುಖ್ಯರಸ ಎನ್ನಲಡ್ಡಿಯಿಲ್ಲ. ಅಲ್ಲಲ್ಲಿ ರಾಸಮಂಡಲದ ಧ್ವನಿ ಸ್ಪಷ್ಟವಾಗಿ ತಲೆದೋರಿದೆ. 'ಪಶ್ಯತಿ ಕಾಮಪಿ ಚುಂಬತಿ ಕಾಮಪಿ ರಮಯತಿ ಕಾಮಪಿ ರಾಮಾಂ' ಮೊದಲಾದ ವರ್ಣನೆಗಳು ನಿದರ್ಶನ. ಕೃಷ್ಣಕರ್ಣಾಮೃತದಲ್ಲಿ ರಾಧೆಯಾಗಲೀ ರಾಸವಾಗಲೀ ಅಷ್ಟು ಪ್ರಮುಖವಾಗಿ ಬರುವುದಿಲ್ಲ. ಅಲ್ಲಿನ ಕೃಷ್ಣ ಅಷ್ಟಾಗಿ ರಾಧಾರಸಿಕನಲ್ಲ; 'ಗೋಪಸ್ತ್ರೀಪರಿವೇಷ್ಟಿತ'ನಾದ 'ಗೋಪಾಲಚೂಡಾಮಣಿ' ಯೇನೋ ಹೌದು. ದಕ್ಷಿಣದೇಶದಲ್ಲಿ ರಾಧಾರಾಸದ ಕಲ್ಪನೆ ಅಷ್ಟಾಗಿ ಜನಪ್ರಿಯವಾಗಲಿಲ್ಲ.

ಕ್ರಿಸ್ತಾಬ್ದ 980ರಲ್ಲಿ ಸಿದ್ಧವಾದ ಶಾಸನವೊಂದರಲ್ಲಿಯೇ ಕೃಷ್ಣನು ರಾಧಾಪ್ರಣಯಿಯೆನ್ನುವ ಕಲ್ಪನೆ ಕಾಣುತ್ತದೆ. ಧಾರಾನಗರದ ವಾಕ್ಪತಿರಾಜನು ಬರೆಸಿದ ಈ ಉಜ್ಜಯಿನೀ ದಾನಶಾಸನದಲ್ಲಿ ರಾಧಾವಿರಹಾತುರನಾದ ಮುರರಿಪುವನ್ನು ಲಕ್ಷ್ಮಿಯೂ ಸುಖಪಡಿಸಲಾರಳು, ಶಯ್ಯೆಯಾದ ಸಮುದ್ರವೂ ಅವನ ಮೈಕಾವನ್ನು ಆರಿಸಲಾರದು, ಸಹಸ್ರಫಣಗಳ ಆದಿಶೇಷನೂ ಅವನನ್ನು ಸಮಾಧಾನಪಡಿಸಲಾರನು, ಎನ್ನುವ ಮಾತುಬರುತ್ತದೆ—

ಯಲ್ಲಕ್ಷ್ಮೀವದನೇಂದುನಾ ನ ಸುಖಿತಂ ಯನ್ನಾರ್ದ್ರಿತಂ ವಾರಿಧೇ
ರ್ವಾರಾಯನ್ನನಿಜೇನ ನಾಭಿಸರಸೀಪದ್ಮೇನ ಶಾಂತಿಂ ಗತಂ ।
ಯಚ್ಛೇಷಾಹಿಫಣಾಸಹಸ್ರ ಮಧುರ ಶ್ವಾಸೈರ್ನಚಾಶ್ವಾಸಿತಂ
ತದ್ರಾಧಾವಿರಹಾತುರಂ ಮುರರಿಪೋರ್ವೇಲದ್ವಪುಃ ಪಾತು ವಃ ॥

ರಾಧೆಯ ಹೆಸರಿಲ್ಲದಿದ್ದರೂ ಇದೇ ಧಾಟಿಯನ್ನು ಹಿಡಿದು ಸಿದ್ಧವಾದ ಮತ್ತೊಂದು ಶಾಸನಶ್ಲೋಕವೂ ಕೃಷ್ಣನ ಕಾಮಕ್ರೀಡೆಯನ್ನೇ ಅಧಿಕರಿಸಿದ್ದು. ಕನೋಜಿನ ಜಯಚಂದ್ರ ಬರೆಸಿದ ತಾಮ್ರಶಾಸನದಲ್ಲಿರುವ ಈ ಶ್ಲೋಕವು ಸುರತಾರಂಭದಲ್ಲಿ ಶ್ರೀದೇವಿಯ ಸಂರಂಭವನ್ನು ಚಿತ್ರಿಸುತ್ತದೆ—

ಉತ್ಕಂಠಾತ್ ಕಂಠವೈಕುಂಠಕಂಠಪೀಠಲುಠತ್ಕರಃ ।
ಸಂರಂಭಃ ಸುರತಾರಂಭೇ ಸ ಶ್ರಿಯಃ ಶ್ರೇಯಸ್ತೇऽಸ್ತುವಃ ॥

ಕೃಷ್ಣನು ವಿಷ್ಣುವಿನ ಅವತಾರವೆಂಬ ಕಲ್ಪನೆ ರೂಢವಾದಾಗಲೂ ಅವನ ವ್ಯಕ್ತಿತ್ವದಲ್ಲಿ ಇದೇ ಪ್ರಮುಖಲಕ್ಷಣವಾಗಿ ಉಳಿಯಿತು. ಗೀತಗೋವಿಂದದ ಕೃಷ್ಣನನ್ನೂ ಕವಿಯು "ದಶಾಕೃತಿಕೃತೇ ಕೃಷ್ಣಾಯ ತುಭ್ಯಂ ನಮಃ" ಎಂದು ಸತ್ಕರಿಸಿದ್ದಾನಷ್ಟೆ.

ಗೋಪಿಕೋನ್ಮಾದ

'ಗೋಪಿಕೋನ್ಮಾದ'ವೆಂಬ ಸಂಸ್ಕೃತಕಾವ್ಯಗ್ರಂಥವೊಂದು ಕೇರಳದ ಕಡೆ ಬಳಕೆಯಲ್ಲಿದ್ದಿತು; ಇದರ ಕವಿ ಯಾರೋ ತಿಳಿಯದು. ಇದರಲ್ಲಿ ಹಲವಾರು ಸ್ವಾರಸ್ಯವಾದ ಶ್ಲೋಕಗಳಿವೆ. ಕೃಷ್ಣನು ಮರೆಯಾದ ಸಂದರ್ಭದಲ್ಲಿ ವಿರಹವನ್ನು ತಾಳಲಾರದೆ ಗೋಪಿಯರು ಅಳುತ್ತಿದ್ದಾಗ ಅವರನ್ನು ಸಮಾಧಾನ ಪಡಿಸುವುದು ಕವಿಯ ಉದ್ದೇಶ. ಈ ನೆವದಲ್ಲಿ ಕೃಷ್ಣನ ಲೀಲೆಗಳನ್ನು ಬಣ್ಣಿಸುತ್ತಾನೆ. ರಾಮಾವತಾರದ ಕಾಲದಲ್ಲಿ ರಾವಣನನ್ನು ಕೊಂದು ತನ್ನ ಮಡದಿಯನ್ನು ಹಿಂದಕ್ಕೆ ತಂದ ಇವನು ಯಾವುದೋ ಸುದ್ದಿಯನ್ನು ನಂಬಿ ಅಗ್ನಿಶುದ್ಧಳಾದ ಜಾನಕಿಯನ್ನೇ ಕಾಡಿಗೆ ಅಟ್ಟಲಿಲ್ಲವೆ? ಅಂಥ ನಿರ್ದಯನಾದ ಕೃಷ್ಣನಲ್ಲಿ ಮನಸ್ಸು ಬಿಡಬಹುದೆ? ಅವನ ಸ್ವಭಾವವೇ ಡೊಂಕು!

ರಾಮೋ ಭೂತ್ವಾ ರಣಭುವಿ ಪುರಾ ರಾವಣಂ ದಾರಯಿತ್ವಾ
ಪ್ರತ್ಯಾನೀತಾಂ ಪ್ರಕೃತಿ ಕುಟಿಲಃ ಕಿಂವದಂತೀಂ ಪ್ರಮಾಣ್ಯ ।
ಅಗ್ನೌ ಶುದ್ಧಾಂ ಅಖಿಲಜನನೀಂ ಜಾನಕೀಂ ಯಸ್ತ್ವಮುಂಚ
ನ್ನಿಂದ್ಯೇತಸ್ಮಿನ್ ರಮಯಸಿ ಮನೋ ನಿರ್ಘೃಣೇ ಹಂತ ಕೃಷ್ಣೇ ॥

ಅಥವಾ, ಯೋಗ ಮಾಡುತ್ತೇನೆಂದು ಬದರಿಕಾಶ್ರಮಕ್ಕೆ ಹೋಗಿ ನಿಂತ ನಾರಾಯಣನನ್ನು ಅಪ್ಸರೆಯರೂ ಎಳೆದಾಡಲಾಗಲಿಲ್ಲವಂತೆ; ಅವನ ಇಂದ್ರಿಯನಿಗ್ರಹ ಅಷ್ಟು ದೃಢವಾಗಿದ್ದಿತೆಂದು ಅರ್ಥವಷ್ಟೆ? ಆದರೆ ಇಂಥ ವಿರಕ್ತನ ತೊಡೆಯಿಂದ ಚೆಲುವೆ ಊರ್ವಶಿ ಹುಟ್ಟಿದುದು ಹೇಗೆ? ಈ ಮುಕುಂದ ಮುಕ್ತಸಂಗನೆಂದರೆ ಯಾರಲ್ಲಿಯೂ ಅವನಿಗೆ ದೃಢವಾದ ಅನುರಾಗವಿರದು ಎಂದೇ ಅರ್ಥ; ಅವನು ಸ್ವಭಾವದಲ್ಲಿ ಚಪಲ—

ಸೋಽಯಂ ಕೃಷ್ಣಃ ಸಖಿ ಬದರಿಕಾಮೇತ್ಯ ನಾರಾಯಣಾತ್ಮಾ।
ಯೋಗಾರೂಢೋ ನಿಯತಕರಣಶ್ಚಾಲಿತೋ ನಾಪ್ಸರಾಭಿಃ ॥

ಊರ್ವೋಸ್ತಾಭ್ಯೋಽಪ್ಯಧಿಕಲಲಿತಾಮುರ್ವಶೀ ನಿರ್ಮಮೇ ಯೋ।
ಮುಗ್ಧೇ ಬುದ್ಧಿಂಭ್ರಮಯಸಿ ಮುಧಾ ಮುಕ್ತಸಂಗೇ ಮುಕುಂದೇ ॥

ಕೃಷ್ಣನ ವಿಚಾರವಾಗಿ ಬೆಳೆದು ಬಂದ ಈ ಕಲ್ಪನೆಯಲ್ಲಿ ಭಕ್ತಿಯೂ ಅನುರಕ್ತಿಯೂ ಬೆರೆತು ಗೀತಗೋವಿಂದ, ಕೃಷ್ಣಕರ್ಣಾಮೃತ, ಗೋಪಿಕೋನ್ಮಾದ ಮೊದಲಾದ ಕಾವ್ಯಗಳು ಬರುವುದು ಸಾಧ್ಯವಾಯಿತು.

ಮಧುರರತಿ

ಇಂಥ ಕಾವ್ಯಗಳ ಮುಖ್ಯಪ್ರಯೋಜನವು ಕೃಷ್ಣಭಕ್ತಿಯನ್ನು ಉತ್ತೇಜಿಸುವುದು. ಭಗವತ್ಪ್ರೀತಿಸಂಪಾದನೆಯೇ ಮೋಕ್ಷವೆಂಬ ಭಾವನೆ ಬಲವಾದಂದು ಕರ್ಮನಿಷ್ಠೆಗಿಂತಲೂ, ಜ್ಞಾನಪ್ರಸಾದನಕ್ಕಿಂತಲೂ ಭಕ್ತಿಯೇ ಉತ್ತಮವಾದ ಸಾಧನವೆನ್ನುವ ಕಲ್ಪನೆಯು ಮೂಡಿಬಂದಿತು. ಭಕ್ತಿಯ ಪಾರಮ್ಯವನ್ನು ನಂಬಿಯೇ ಭಾಗವತವು ಸಿದ್ಧವಾಯಿತು. ಇಲ್ಲಿ ಬರುವ ಉದ್ಧವಗೀತವು ವ್ರಜಾಂಗನೆಯರು ಕೃಷ್ಣನಲ್ಲಿ ಮಾಡಿದ ನಿರ್ಹೇತುಕವಾದ ಪ್ರೇಮವೇ ಭಕ್ತರಿಗೆ ಆದರ್ಶರೆಂದು ಸೂಚಿಸುತ್ತದೆ. ನಾರದೀಯ ಭಕ್ತಿಸೂತ್ರದಲ್ಲಿಯೂ ಇದೇ ತಾತ್ಪರ್ಯ ಕಂಡುಬರುತ್ತದೆ.

ಭಕ್ತಿಯೆಂದರೆ ಭಗವಂತನಲ್ಲಿ ಇಡುವ ಪರಮಪ್ರೇಮವೆಂದು ನಾರದರ ವಿವರಣೆ. ಶಾಂಡಿಲ್ಯರು ಇದನ್ನೇ ಈಶ್ವರನಲ್ಲಿ ನಿರತಿಶಯವಾದ ಅನುರಕ್ತಿ ಎಂದರು. ಶಾಂಡಿಲ್ಯಸೂತ್ರಗಳಿಗೆ ವ್ಯಾಖ್ಯಾನ ಬರೆದ ಸ್ವಪ್ನೇಶ್ವರನು ಈ ಅಭಿಪ್ರಾಯದ ಇಂಗಿತವನ್ನು ಸ್ಪಷ್ಟಪಡಿಸುತ್ತ "ಈಶ್ವರನ ಸ್ವಭಾವವೈಭವವನ್ನು ಗ್ರಹಿಸಿದನಂತರ ಜೀವಿಯಲ್ಲಿ ಜನಿಸುವ ರಕ್ತಿಯೇ ಭಕ್ತಿ"ಯೆಂದು ನಿರೂಪಿಸಿದ್ದಾನೆ. ಎಂದರೆ ಈಶ್ವರನಲ್ಲಿ ಯಾವೊಂದು ಕಾಮನೆಯಿಲ್ಲದೆ, ಎಡೆಬಿಡದೆ ಹರಿಸುವ ಪ್ರೇಮಪ್ರವಾಹ.

ಭಕ್ತಿಯಲ್ಲಿ ಸಾಮಾನ್ಯವಾಗಿ ಐದು ಬಗೆಗಳನ್ನು ಹೇಳುವ ವಾಡಿಕೆಯಿದೆ: ಜ್ಞಾನದಿಂದ ಸತ್ತ್ವಶುದ್ಧಿಯಾಗಿ ಉಪರತನಾದ ಅನಂತರ ಏಳುವ ಶಾಂತಭಕ್ತಿ; ಧ್ರುವ, ಪ್ರಹ್ಲಾದ, ಹನುಮಂತ, ಅಂಬರೀಷ ಮುಂತಾದವರು ಮಾಡಿದ ದಾಸ್ಯಭಕ್ತಿ; ಅರ್ಜುನ, ಸುದಾಮ, ಗೋಪಬಾಲಕರು ಮಾಡಿದ ಸಖ್ಯಭಕ್ತಿ; ನಂದನೂ ಯಶೋದೆಯೂ ಮಾಡಿದ ವಾತ್ಸಲ್ಯಭಕ್ತಿ: ಮತ್ತು ರಾಧೆ,

ಗೋಪಿಯರು ಮಾಡಿದ ಮಧುರಭಕ್ತಿ. ಶಂಕರಾಚಾರ್ಯರ ಭಕ್ತಿ ಶಾಂತಭಕ್ತಿಯೆಂದೂ, ರಾಮಾನುಜಾಚಾರ್ಯರ ಭಕ್ತಿ ದಾಸ್ಯಭಕ್ತಿಯೆಂದೂ, ವಲ್ಲಭಾಚಾರ್ಯರೂ ಪೆರಿಯಾಳ್ವಾರರೂ ಮಾಡಿದ ಭಕ್ತಿ ವಾತ್ಸಲ್ಯಭಕ್ತಿಯೆಂದೂ, ಜಯದೇವ, ಕೃಷ್ಣ ಚೈತನ್ಯ, ಆಂಡಾಳ್ ಇವರ ಭಕ್ತಿ ಮಧುರಭಕ್ತಿಯೆಂದೂ ಹೇಳಬಹುದು.

ವಲ್ಲಭಾಚಾರ್ಯರ ಶುದ್ಧಾದ್ವೈತಸಿದ್ಧಾಂತದಲ್ಲಿ ಜ್ಞಾನಕ್ಕಿಂತಲೂ ಭಕ್ತಿಗೇ ಪ್ರಾಧಾನ್ಯವುಂಟು. ಎಲ್ಲರೂ ಅನುಸರಿಸಬಹುದಾದ, ಸುಲಭವಾದ ಈ ಭಕ್ತಿಮಾರ್ಗವು ವಾಲ್ಲಭ್ಯಮಾರ್ಗವೆಂದೇ ಪ್ರಸಿದ್ಧವಾಗಿದೆ. ಕೃಷ್ಣನೇ ವಲ್ಲಭನೆಂದು ಪರಿಗಣಿಸಿ ಅವನ ಮುಖಾರವಿಂದದಲ್ಲಿಯೇ ಆಸಕ್ತರಾಗಿ ಯಾವ ಫಲಾಪೇಕ್ಷೆಯಿಲ್ಲದೆ, ಅಭೇದಭಾವವನ್ನೇ ಗ್ರಹಿಸಿ ಕೃಷ್ಣನ ಲೀಲೆಗಳಲ್ಲಿ ಮುಗ್ಧರಾದ ವ್ರಜಾಂಗನೆಯರು ಅನುಸರಿಸಿದ ಮಾರ್ಗ ಇದು; ಇದನ್ನೇ ಪುಷ್ಟಿಮಾರ್ಗವೆಂದೂ ಕರೆಯುತ್ತಾರೆ. ಹೀಗಲ್ಲದೆ ಭಗವಂತನ ಚರಣಾರವಿಂದಗಳನ್ನು ಆಶ್ರಯಿಸಿ, ಸಾಯುಜ್ಯವನ್ನೇ ಅಪೇಕ್ಷಿಸುತ್ತ, ವೇದಸಿದ್ಧವಾದ ಸಾಧನೆಗಳನ್ನು ಹಿಡಿಯುವುದು ಮರ್ಯಾದಾಭಕ್ತಿಯೆನಿಸಿಕೊಳ್ಳುತ್ತದೆ. ಇದಕ್ಕಿಂತಲೂ ಪುಷ್ಟಿಭಕ್ತಿಯೇ ಹೆಚ್ಚು ಫಲಕಾರಿಯೆಂದು ವೈಷ್ಣವರ ಶ್ರದ್ಧೆ.

ಪ್ರಪತ್ತಿಯೆಂದರೆ ಭಗವಂತನಿಗೂ ಭಕ್ತನಿಗೂ ಪರಿಣಯವೆಂದು ವೇದಾಂತದೇಶಿಕರು ಸೂಚಿಸಿದ್ದಾರೆ; ಭರನ್ಯಾಸವೆನ್ನುವುದು ಆತ್ಮಸಮರ್ಪಣ, ಭರಸ್ವೀಕಾರವೇ ಪ್ರಾಣಿಗ್ರಹಣ. ಇದಾದನಂತರ ಪ್ರಪನ್ನನು ತನ್ನನ್ನು ಭಗವಂತನ ಪ್ರೇಯಸಿಯೆಂದು ಕಂಡುಕೊಂಡು, ಆತನೇ 'ಗತಿರ್ಭರ್ತಾ' ಎಂದು ನಂಬುತ್ತಾನೆ. ಈಶ್ವರನೇ ಪುರುಷತತ್ತ್ವ, ಎಲ್ಲ ಜೀವಗಳೂ ವಧೂಪ್ರಾಯರು; 'ಸ್ತ್ರೀಪ್ರಾಯಮಿತರಃ ಸರ್ವಂ'. ಪ್ರಿಯೆಯು ಪ್ರಣಯಿಯನ್ನು ಕಾಣುವಂತೆ ಭಕ್ತನು ಭಗವಂತನನ್ನು ಕಾಣುತ್ತಾನೆ. ಇದೇ ಮಧುರರತಿಯ ಮನೋಧರ್ಮ; 'ಸತೀವ ಪ್ರಿಯಭರ್ತಾರಂ'. ಜೀವಿಗೂ ಈಶ್ವರನಿಗೂ ಭಾರ್ಯಾ-ಭರ್ತೃಸಂಬಂಧವಿದೆಯಷ್ಟೆ.

ಗೌರಾಂಗ(ಕೃಷ್ಣಚೈತನ್ಯ)ನದೂ, ಜಯದೇವನದೂ, ಗೋದಾದೇವಿಯದೂ ಇದೇ ಮನೋಧರ್ಮ; ಗೀತಗೋವಿಂದದಲ್ಲಿಯೂ ಇದೇ

ಮುಖ್ಯರಸ. ಕೃಷ್ಣನಿಂದ ದೂರಳಾದ ರಾಧೆ ವಿರಹಾತುರಳಾಗಿ ಪರಿತಪಿಸುವುದೂ ಪ್ರಪತ್ತಿಯ ಒಂದು ಮುಖವೇ. ತಿರವಾಯ್ ಮೋಳಿಯಲ್ಲಿ "ಜೀವಿಗೂ ಸರ್ವೇಶ್ವರನಿಗೂ ನಡುವೆ ಬೀಸುವ ತಂಗಾಳಿ"ಯೊಂದಿಗೆ ('ಊಡಾಡು ಪನಿವಾಡಾಯ') ವಿರಹವೇದನೆಯನ್ನು ತೋಡಿಕೊಂಡು ಅದನ್ನು ಸ್ವಾಮಿಗೆ ತಿಳಿಸುವಂತೆ ಕೇಳಿಕೊಳ್ಳುವ ಪಾಶುರಗಳಿವೆ. ಇಲ್ಲಿನ ತಂಗಾಳಿ ಗೀತಗೋವಿಂದದಲ್ಲಿ ಸಖಿ; ರಾಧೆಗೂ ಕೃಷ್ಣನಿಗೂ ನಡುವೆ ಓಡಿಯಾಡುತ್ತಾಳೆ. ರಾಧೆಯೆಂದರೆ ಜೀವವೇ ಅಲ್ಲವೆ? ಈಶ್ವರನು ಪೂರ್ಣಕಾಮ ('ಕುರೈಯೋನ್ರುಂ ಇಲ್ಲಾದ ಗೋವಿಂದ') ನಾದುದರಿಂದ ವಿರಹದವೇದನೆ ಅಷ್ಟಾಗಿ ಕೃಷ್ಣನಲ್ಲಿ ಕಾಣದು; ಅವನೊಂದಿಗೆ ರಾಧೆಗುಂಟಾದ ಸಂಬಂಧವು ನಿತ್ಯವಾಗಿರಬೇಕೆಂಬ ಹಂಬಲ ಅವಳಿಗೆ ಸಹಜವಾದುದು. ತಿರುಪ್ಪಾವೈನಲ್ಲಿ ಬರುವ ಈ ಪಾಶುರವನ್ನು ನೋಡಿ—

ಉನ್‌ತನ್ನೋಡುವೇಲ್ ನಮಕ್ಕಿಂಗೊಳಿಕ್ಕವೊಳಿಯಾದು

ಎಂದರೆ, "ನಿನ್ನೊಂದಿಗೆ ನಮಗುಂಟಾದ ಈ ನಂಟು ಬಿಡುವುದು ಒಳ್ಳೆಯ ದಲ್ಲ" ಎಂದು 'ಅರಿಯದ ಹುಡುಗಿಯರು' ('ಅರಿಯಾದ ಪಿಳ್ಳೈಗಳೋಂ') ಹೇಳಿಕೊಳ್ಳುತ್ತಾರೆ. ಗೀತಗೋವಿಂದವನ್ನು ಅರ್ಥಮಾಡಿಕೊಳ್ಳುವಾಗ ಈ ಮನೋಧರ್ಮದ ಹಿನ್ನೆಲೆಯನ್ನು ಗಮನಿಸಬೇಕು.

ಲೀಲಾಶುಕನು ಶೈವನಾದರೂ 'ಗೋಪವಧೂಕಿಶೋರನ ಸ್ಮೇರಾನನ'ದಲ್ಲಿ ಅವನ ಮನಸ್ಸು ನಿಂತದ್ದು ಇದೇ ಮನೋಧರ್ಮದಲ್ಲಿ. ಇವನಲ್ಲಿ ವಾತ್ಸಲ್ಯಭಕ್ತಿ ಬಹುಮಟ್ಟಿಗೆ ಕಾಣಿಸುತ್ತದೆಯಾದರೂ ಮನೋ ಧರ್ಮವೇನೋ ಮಧುರರತಿಯದೇ. ನಿದರ್ಶನಕ್ಕೆ, ಜಿಜ್ಞಾಸೆಗಿಂತ ವಾಲ್ಲಭ್ಯಭಕ್ತಿ ಉತ್ತಮ ಎಂದು ಹೇಳುವ ಈ ಶ್ಲೋಕವನ್ನು ನೋಡಿ—

ವರಮಿಮಮುಪದೇಶಮಾದ್ರಿಯಧ್ವಂ
ನಿಗಮವನೇಷು ನಿತಾಂತಚಾರಿಖಿನ್ನಾಃ ।
ವಿಚಿನುತ ಭವನೇಷು ವಲ್ಲವೀನಾಂ
ಉಪನಿಷದರ್ಥಮುಲೂಖಲೇ ನಿಬದ್ಧಂ ॥

ಕೃಷ್ಣನನ್ನು ಗೋಪಸ್ತ್ರೀಯರ ಮನೆಗಳಲ್ಲಿ ಒರಳುಕಲ್ಲಿಗೆ ಕಟ್ಟಿರುವ ಚಿತ್ರವನ್ನು ಕವಿಯು ಮಾರ್ಮಿಕವಾಗಿ ಬಿಡಿಸಿದ್ದಾನೆ. ಒರಳುಕಲ್ಲೆಂದರೆ ಮನಸ್ಸು; ಗೋಪಸ್ತ್ರೀಯೆಂದರೆ ಜೀವ; ಕೃಷ್ಣನೆಂದರೆ ಈಶ್ವರ. ಉಪನಿಷತ್ತಿನ ಅರ್ಥವೆಲ್ಲ ಇಲ್ಲಿ ಅಡಗಿದೆಯಲ್ಲವೆ?

ಈ ಮಧುರರತಿಯ ಮನೋಧರ್ಮವನ್ನು ಸ್ಪಷ್ಟಪಡಿಸಿ ಬೃಂದಾವನ ದಾಸಗೋಸ್ವಾಮಿಯು 'ರಾಸಕಲ್ಪಸಾರತತ್ತ್ವ'ವೆಂಬ ಗ್ರಂಥವನ್ನು ರಚಿಸಿದ್ದಾನೆ. ರಾಧೆ, ಮಾಧವ, ರಾಸ—ಈ ತ್ರಿಪುಟಿಯ ಅರ್ಥವಿವೇಚನೆ ಇಲ್ಲಿ ಬರುತ್ತದೆ. ಹೀಗೆಯೇ ಶ್ರೀಧರಸ್ವಾಮಿಯ 'ವ್ರಜವಿಹಾರ', ಮೋಹನಾನಂದನ 'ರಸಕಲ್ಪಲತಾ', ಅನನ್ಯದಾಸಸ್ವಾಮಿಯ 'ರಸಕೃಷ್ಣಮಾಧುರೀ', ಲೋಲಂಬರಾಜನ 'ಸುಂದರದಾಮೋದರ', ರುದ್ರನ್ಯಾಯವಾಚಸ್ಪತಿಯ 'ಬೃಂದಾವನವಿನೋದ', ವಿಶ್ವನಾಥನ 'ಕೃಷ್ಣಭಾವನಾಮೃತ'—ಇವೂ ಈ ತ್ರಿಪುಟಿಯನ್ನೇ ಪ್ರಸ್ತಾಪಿಸುತ್ತವೆ. ಚೈತನ್ಯಚಂದ್ರನ 'ರಾಧಾರಸಮಂಜರಿ', ಹರಿವಂಶಗೋಸ್ವಾಮಿಯ 'ರಾಧಾರಸಸುಧಾನಿಧಿ', ನಂದಕುಮಾರನ 'ರಾಧಾಮಾನತರಂಗಿಣಿ', ಕೃಷ್ಣದತ್ತನ 'ರಾಧಾರಹಸ್ಯ', ಸುಬಲಚಂದ್ರಕವಿಯ 'ರಾಧಾಸೌಂದರ್ಯಮಂಜರಿ', ಮೊದಲಾದ ಕೃತಿಗಳು ರಾಧಾತತ್ತ್ವವನ್ನು ವಿವರಿಸುತ್ತವೆ.

ಬೋಪದೇವನ 'ಹರಿಲೀಲಾ', ರಘೂತ್ತಮತೀರ್ಥರ 'ಮುಕುಂದ ವಿಲಾಸ', ಕವಿಕೇಸರಿಯ 'ಹರಿಕೇಲಿ', ರಾಮಚಂದ್ರಕವಿಯ 'ರಾಧಾವಿನೋದ', ಚಂದ್ರದಾಸನ 'ಪ್ರೇಮಾಮೃತಚಂಪೂ', ರೂಪಗೋಸ್ವಾಮಿಯ 'ಪ್ರೇಮೇಂದು ಸಾಗರ', ನಾರಾಯಣತೀರ್ಥಯತಿಯ 'ಕೃಷ್ಣಲೀಲಾತರಂಗಿಣಿ'—ಈ ಮುಂತಾದ ಕಾವ್ಯಗಳಲ್ಲಿಯೂ ರಾಧಾಮಾಧವರಾಸದ ಮನೋಧರ್ಮವೇ ಜೀವನಾಡಿ.

ನಾರಾಯಣತೀರ್ಥರ 'ಕೃಷ್ಣಲೀಲಾತರಂಗಿಣಿ' ದಕ್ಷಿಣದೇಶದಲ್ಲೆಲ್ಲ ಪ್ರಸಿದ್ಧವಾದ ಗೇಯಕಾವ್ಯ. ಇದನ್ನು ಬರೆದವರು ಗೋದಾವರೀ ತೀರದವರಂತೆ; ವೇದವಿದ್ಯೆಯಲ್ಲಿ ಮಾತ್ರವಲ್ಲದೆ, ಸಾಹಿತ್ಯ, ಸಂಗೀತ, ನಾಟಕಗಳಲ್ಲಿ ತುಂಬ ಪರಿಶ್ರಮವನ್ನು ಪಡೆದವರಂತೆ. ತಿರುಪತಿಯಲ್ಲಿ

ಇವರು ಯತಿದೀಕ್ಷೆ ವಹಿಸಿ, ಕಾವೇರೀತೀರದ ವರಾಹೂರು ಎನ್ನುವ ಹಳ್ಳಿಯಲ್ಲಿ ಇರುತ್ತಿದ್ದರಂತೆ. ಕೃಷ್ಣಲೀಲಾತರಂಗಿಣಿಯಲ್ಲಿ ಹನ್ನೆರಡು ತರಂಗಗಳಿವೆ. ಭಾಗವತದ ದಶಮಸ್ಕಂಧದಲ್ಲಿ ಬರುವ ಕೃಷ್ಣನ ಲೀಲಾ ವಿಶೇಷಗಳನ್ನು ಅಧಿಕರಿಸಿ ಕೀರ್ತನೆಗಳನ್ನೂ ಗದ್ಯಗಳನ್ನೂ ಇವರು ಇದರಲ್ಲಿ ಸೇರಿಸಿದ್ದಾರೆ. ಏಳನೆಯ ತರಂಗದಲ್ಲಿ ರಾಧಾಮಾಧವರಾಸದ ವರ್ಣನೆಯಿದೆ; ಇಲ್ಲಿನ ಕೀರ್ತನೆಗಳು ನೃತ್ಯಕ್ಕೆಂದೇ ರಚಿಸಲ್ಪಟ್ಟಿವೆ. ಗೋಪಿಯರು ಮುಕುಂದನಲ್ಲಿ ಮುಗ್ಧರಾಗಿದ್ದುದನ್ನು ಸ್ವಾರಸ್ಯವಾಗಿ ಚಿತ್ರಿಸಿದ್ದಾರೆ. ಇಲ್ಲಿಯೂ ಪ್ರಿಯಪ್ರಣಯದ ಹಿನ್ನೆಲೆಯಲ್ಲಿ ಆಧ್ಯಾತ್ಮಿಕತತ್ತ್ವಗಳು ನಿಂತಿರುವುದನ್ನು ಕಾಣಬಹುದು—

ಸಾಮನಿಗಮಾಂತವಚನಾರ್ಥಮುಪಲಭ್ಯ
ಸ್ವಾನುಭವಮೇಕಮಖಿಲೈಕರಸಭೂತಮ್ ।
ಏತದಮೃತಂ ಭವಭಯಾಪಹರಮಾದ್ಯಂ
ನಾರಾಯಣಾನಂದತೀರ್ಥಪರಿಗೀತಮ್ ॥

'ಭಾರತತೀರ್ಥ'

ಭಾರತೀಯತೆಯ ಸಾರಸ್ವತಯಜ್ಞದಲ್ಲಿ ನೀವೂ ಭಾಗಿಯಾಗಬಹುದು, ಹೀಗೆ—

- ಭಾರತತೀರ್ಥಗ್ರಂಥಮಾಲಿಕೆಯ ಕೃತಿಗಳನ್ನು ಕೊಂಡು ಓದುವುದು ಹಾಗೂ ಸ್ನೇಹಿತರನ್ನೂ, ಬಂಧು-ಬಳಗದವರನ್ನೂ ಓದಿಗೆ ಪ್ರೇರಿಸುವ ಮೂಲಕ,
- ಉಪನಯನ, ಮದುವೆ, ಹುಟ್ಟುಹಬ್ಬ ಮುಂತಾದ ಶುಭಸಮಾರಂಭಗಳಲ್ಲಿ 'ಭಾರತತೀರ್ಥ'ಕೃತಿಗಳನ್ನು ಉಡುಗೊರೆಯಾಗಿ ನೀಡುವ ಮೂಲಕ,
- ಈ ಯೋಜನೆಗೆ ಸರಿಹೊಂದುವಂಥ ವಿಷಯಗಳನ್ನೂ, ಲೇಖಕರನ್ನೂ ಸೂಚಿಸುವ ಮೂಲಕ,
- ಪುಸ್ತಕಗಳ ಪ್ರಕಟನೆಗೆ ಉದಾರವಾಗಿ ಧನಸಹಾಯವನ್ನು ಒದಗಿಸುವ ಮೂಲಕ,

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ

—ಎಸ್. ಸೂರ್ಯಪ್ರಕಾಶ ಪಂಡಿತ್
ಸಂಪಾದಕ
panditsurya@yahoo.co.in
✆ 94484 94949

ಅಭಿಜ್ಞಾನ

ಬೆಂಗಳೂರು - 560 019 ✆ 2242 1414, 9448 49 49 49
abhijnanam@yahoo.com; abhijnanabooks@yahoo.com

ಸಂಸ್ಕೃತಿ-ಕಲೆ-ಸಾಹಿತ್ಯ—ಈ ಕ್ಷೇತ್ರಗಳಲ್ಲಿ ತನ್ನನ್ನು ಗುರುತಿಸಿಕೊಂಡ ಅಭಿಜ್ಞಾನ ಶ್ರೀಯುತ ಡಿ.ವಿ.ಜಿ. ಮತ್ತು ಡಾ. ಆನಂದ ಕೆ. ಕುಮಾರಸ್ವಾಮಿ ಅವರ ಜೀವನ-ದರ್ಶನಗಳ ಬೆಳಕಿನಲ್ಲಿ 1996ರಲ್ಲಿ ಅಸ್ತಿತ್ವಕ್ಕೆ ಬಂದಿತು. ಭಾರತೀಯಪರಂಪರೆಯನ್ನು ಪ್ರತಿಬಿಂಬಿಸುವಂಥ ಚಟುವಟಿಕೆಗಳ ಕಡೆಗೆ ನಮ್ಮ ಮುಖ್ಯ ಲಕ್ಷ್ಯ; ಆದರೆ ಜಗತ್ತಿನ ಪ್ರತಿಯೊಂದು ಸಾತ್ತ್ವಿಕಸ್ವರೂಪವೂ ನಮಗೆ ಪೂಜ್ಯ. ಪೌರಸ್ತ್ಯ-ಪಾಶ್ಚಾತ್ಯ ಪ್ರಪಂಚದ ಶುದ್ಧ-ಶುಭ್ರ ಪ್ರಜ್ಞಾಪ್ರವಾಹದ ಸಂಗಮಸ್ಥಾನ ಅಭಿಜ್ಞಾನ.

ಅಭಿಜ್ಞಾನದೊಂದಿಗೆ ನೀವು ಹೇಗೆ ಗುರುತಿಸಿಕೊಳ್ಳಬಹುದು?

- ❖ ಅಭಿಜ್ಞಾನದ ಪ್ರಕಟನೆಗಳನ್ನು ಕೊಂಡು ಓದುವುದರ ಮೂಲಕ,
- ❖ ಅಭಿಜ್ಞಾನ ಏರ್ಪಡಿಸುವ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಬಂಧು-ಮಿತ್ರರೊಡಗೂಡಿ ಭಾಗವಹಿಸುವ ಮೂಲಕ,
- ❖ ಅಭಿಜ್ಞಾನದ ಚಟುವಟಿಕೆಗಳಿಗೆ ಹಾಗೂ ಗ್ರಂಥಯೋಜನೆಗಳಿಗೆ ಉದಾರವಾಗಿ ತನು-ಮನ-ಧನಸಹಾಯವನ್ನು ಒದಗಿಸುವ ಮೂಲಕ.

ಆತ್ಮೀಯರೇ, ಅಭಿಜ್ಞಾನದ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ಪ್ರೋತ್ಸಾಹಿಸಿ, ಬೆಂಬಲಿಸಿ, ಬೆಳಸಿ.

ಎಸ್. ಸೂರ್ಯಪ್ರಕಾಶ ಪಂಡಿತ್
ಸಂಪಾದಕ
E-mail: panditsurya@yahoo.co.in

ಅಭಿಜ್ಞಾನದ ಮುಂದಿನ ಕೆಲವು ಪ್ರಕಟನೆಗಳು

ಪೂರ್ಣಪ್ರಜ್ಞಪ್ರಶಸ್ತಿ / ಪ್ರೊ. ಸಾ. ಕೃ. ರಾಮಚಂದ್ರರಾವ್ • *ಬುದ್ಧನ ಬಾಳು-ಬೆಳಕು* / ಪ್ರೊ. ಸಾ. ಕೃ. ರಾಮಚಂದ್ರರಾವ್ • *ಮೇಘದೂತ ಒಂದು ಹಳೆಯ ಕಥೆ*/ ಹಜಾರಿಪ್ರಸಾದ್ ದ್ವಿವೇದಿ / ಮ. ಸು. ಕೃಷ್ಣಮೂರ್ತಿ • *ಧರ್ಮಚಕ್ರ* / ಪ್ರೊ. ಜಿ. ಎನ್. ಚಕ್ರವರ್ತಿ • *ತರ್ಕಸಂಗ್ರಹ* / ಮಹೇಶ ಅಡಕೋಳಿ, ಶಂಕರಭಟ್ಟ • *ಪ್ರಜ್ಞಾರಂಗ* / ವಿದ್ವಾನ್ ಎನ್. ರಂಗನಾಥಶರ್ಮ ಅವರ ಸಮಗ್ರ ಲೇಖನಗಳು • *ಸಾಮಾನ್ಯಪ್ರಜ್ಞೆಯೇ ಬುದ್ಧಪ್ರಜ್ಞೆ* / ಎಸ್. ಸೂರ್ಯಪ್ರಕಾಶ ಪಂಡಿತ್ • *ಜೀವನ ಮತ್ತು ಕಲೆ* / ಎಸ್. ಸೂರ್ಯಪ್ರಕಾಶ ಪಂಡಿತ್

ಮುಂದಿನ ಕೆಲವು ಗ್ರಂಥಯೋಜನೆಗಳು

ಪುರುಷಾರ್ಥಗಳು • ಭಾರತದಲ್ಲಿ ವ್ರತ, ಪರ್ವ, ಉತ್ಸವಗಳು - ಒಂದು ಸಾಂಸ್ಕೃತಿಕ ಅವಲೋಕನ • ಅಲಂಕಾರಶಾಸ್ತ್ರ • ಝೆನ್‌ದರ್ಶನ

ಅಭಿಜ್ಞಾನದ ಕೆಲವು ಪ್ರಕಟನೆಗಳು

- *ಶ್ರೀಸೂಕ್ತ* / ಪ್ರೊ. ಸಾ. ಕೃ. ರಾಮಚಂದ್ರರಾವ್ (ಅಚ್ಚಿನಲ್ಲಿದೆ)
- *ಕಲಾತತ್ತ್ವಮಹರ್ಷಿ ಆನಂದ ಕುಮಾರಸ್ವಾಮಿ* / ಪ್ರೊ. ಸಾ. ಕೃ. ರಾಮಚಂದ್ರರಾವ್ (ಜೀವನಚರಿತ್ರೆ) ರೂ. 25
- *ಪ್ರಥಮ ಸೋಪಾನ* / ಸ್ವಾಮೀ ಪರಮಾನಂದ ಭಾರತೀ ರೂ. 45 (ದೇವರು-ಪುನರ್ಜನ್ಮ-ವೇದಗಳನ್ನು ಕುರಿತ ಮೀಮಾಂಸೆ)
- *ವಿಲಿಯಂ ಷೇಕ್ಸ್‌ಪಿಯರ್* / ಪ್ರೊ. ಎಲ್. ಎಸ್. ಶೇಷಗಿರಿ ರಾವ್ ರೂ. 110
- *ಮೆಲುಗಾಳಿಯ ಮಾತುಗಳು* / ಡಾ. ಟಿ. ವಿ. ವೆಂಕಟಾಚಲ ಶಾಸ್ತ್ರೀ ರೂ. 90 (ತೊಂಬತ್ತು ಚಿಂತನಗಳ ಸಂಗ್ರಹ)
- *ಅಣ್ಣಪ್ಪದೈವ* / ಪ್ರೊ. ಸಾ. ಕೃ. ರಾಮಚಂದ್ರರಾವ್ ರೂ. 65
- *ಶಾರದಾಪೀಠದ ಮಾಣಿಕ್ಯ* / ಪ್ರೊ. ಸಾ. ಕೃ. ರಾಮಚಂದ್ರರಾವ್ ರೂ. 90
- *Śaṅkara and Adhyāsa-bhāśya*/ Prof. S. K. Ramachandra Rao Rs. 100
- *ಅಭಿನವಗುಪ್ತ* / ಪ್ರೊ. ಸಾ. ಕೃ. ರಾಮಚಂದ್ರರಾವ್ ರೂ. 50 (ಯೋಗಿ, ಸಿದ್ಧ, ದಾರ್ಶನಿಕ, ಆಲಂಕಾರಿಕನ ಜೀವನ-ದರ್ಶನ)
- *ಕಾಮ ಒಂದು ಪುರುಷಾರ್ಥ* / ಡಾ. ವಿ. ಕೆ. ಹಂಪಿಹೊಳಿ ರೂ. 75
- *ಧಾರ್ಮಿಕ ಸಂಸ್ಕಾರಗಳಲ್ಲಿ ಸಂಗೀತ* / ಡಾ. ರಾ. ಸತ್ಯನಾರಾಯಣ ರೂ. 145
- *ಚಿಂತನ ಚಿಲುಮೆ* / ಸತ್ಯೇಶ್ ಎನ್. ಬೆಳ್ಳೂರು ರೂ. 70
- *ಹೃದಯಸಂಪನ್ನತೆ* / ಪ್ರೊ. ಶ್ರೀಕಂಠಕುಮಾರಸ್ವಾಮಿ ರೂ. 60
- *Śṛigeri* / Prof. A. V. Narasimhamurthy Rs. 140 (The Holy Abode of the Shankaracharyas of the South)
- *ತಿರುಪತಿ ತಿಮ್ಮಪ್ಪ* / ಪ್ರೊ. ಸಾ. ಕೃ. ರಾಮಚಂದ್ರರಾವ್ ರೂ. 450
- *ಚಂಪೂರಾಮಾಯಣಮ್ ಕಿಷ್ಕಿಂಧಾಕಾಂಡಮ್* / ಡಾ. ಮಹೇಶ ಅಡಕೋಳಿ (ಮೂಲ, ಅನ್ವಯ, ಕನ್ನಡ ಅನುವಾದ, ಟಿಪ್ಪಣಿಗಳು) ರೂ. 45
- *ಸೂಕ್ತಿಕೋಶ* / ಪ್ರೊ. ಕೆ. ಎಸ್. ಕಣ್ಣನ್ ರೂ. 120
- *ಚಂಪೂರಾಮಾಯಣಮ್ ಬಾಲಕಾಂಡಮ್* / ಡಾ. ಮಹೇಶ ಅಡಕೋಳಿ (ಮೂಲ, ಅನ್ವಯ, ಕನ್ನಡ ಅನುವಾದ, ಟಿಪ್ಪಣಿಗಳು) ರೂ. 75
- *ಶ್ರೀದತ್ತಭಾವಸುಧಾರಸಸ್ತೋತ್ರಮ್* / ಶೇಷಾಚಲಶರ್ಮಾ ರೂ. 25
- *ಗಣಪತಿಯ ಕಲ್ಪನೆ* / ಪ್ರೊ. ಸಾ. ಕೃ. ರಾಮಚಂದ್ರರಾವ್ ರೂ. 60
- *ವಾಲ್ಮೀಕಿಪ್ರತಿಭೆ* / ಪ್ರೊ. ಸಾ. ಕೃ. ರಾಮಚಂದ್ರರಾವ್ ರೂ. 45
- *ಶ್ರೀಕೃಷ್ಣನ ವ್ಯಕ್ತಿತ್ವ* / ಪ್ರೊ. ಸಾ. ಕೃ. ರಾಮಚಂದ್ರರಾವ್ ರೂ. 60
- *ಗೀತಗೋವಿಂದ* / ಪ್ರೊ. ಸಾ. ಕೃ. ರಾಮಚಂದ್ರರಾವ್ ರೂ. 45

ಭಾರತದೇಶದ ಋಷಿ-ಮುನಿಗಳು, ಸಿದ್ಧರು-ಸಂತರು-ಮಹಾಪುರುಷರು, ತೀರ್ಥಕ್ಷೇತ್ರಗಳು, ಕಲಾಪ್ರಕಾರಗಳು, ಸಾಹಿತ್ಯ, ದರ್ಶನಪ್ರಸ್ಥಾನಗಳು, ಕಲ್ಪನೆಗಳು, ಇತಿಹಾಸ, ವಿಜ್ಞಾನ, ಜೀವನಪದ್ಧತಿಗಳು—ಹೀಗೆ ಸಮಸ್ತ ಭಾರತೀಯವಿದ್ಯೆಗಳನ್ನು ಕುರಿತು ಪ್ರಕಟವಾಗುವ ಗ್ರಂಥಮಾಲಿಕೆಯೇ 'ಭಾರತತೀರ್ಥ'.

ಸಮಗ್ರ ಸಂಸ್ಕೃತಸಾಹಿತ್ಯದಲ್ಲಿಯೇ ವಿಶಿಷ್ಟರಚನೆಯೆನಿಸಿರುವ ಜಯದೇವನ 'ಗೀತಗೋವಿಂದ', ಲೀಲಾಶುಕನ 'ಶ್ರೀಕೃಷ್ಣ ಕರ್ಣಾಮೃತ' ಮತ್ತು, ಈ ಎರಡು ಅನುಪಮಕೃತಿಗಳಿಗೆ ಹಿನ್ನೆಲೆಯಂತಿರುವ 'ರಾಧಾಮಾಧವರಾಸ'ವನ್ನು ಸರಳವಾಗಿ, ಸುಂದರವಾಗಿ ಈ ಕೃತಿಯು ನಿರೂಪಿಸಿದೆ.

ವಿದ್ಯಾಲಂಕಾರ ಪ್ರೊ. ಸಾ. ಕೃ. ರಾಮಚಂದ್ರರಾವ್ ನಮ್ಮ ನಾಡು ಕಂಡಿರುವ ಶ್ರೇಷ್ಠವಿದ್ವಾಂಸರಲ್ಲಿ ಒಬ್ಬರು; ವೇದ-ವೇದಾಂತ-ಬೌದ್ಧ-ಜೈನ-ಆಗಮ-ತಂತ್ರ-ಶಿಲ್ಪ-ಚಿತ್ರ-ಆಯುರ್ವೇದ-ಯೋಗ—ಹೀಗೆ ಹತ್ತಾರು ವಿಷಯಗಳ ಬಗ್ಗೆ ಕನ್ನಡ-ಇಂಗ್ಲಿಷ್‌ಭಾಷೆಗಳಲ್ಲಿ ಇನ್ನೂರಕ್ಕೂ ಹೆಚ್ಚು ಮೌಲಿಕ ಗ್ರಂಥಗಳನ್ನು ರಚಿಸಿರುವವರು.

ಅಭಿಜ್ಞಾನ
ಬೆಂಗಳೂರು

ISBN: 978-81-88278-19-0
9 788188 278190

ರೂ. 45